ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೩ ಆಗಸ್ಟ್ ಸಂಚಿಕೆ ೧



ವಿಷಯ ಸೂಚಿ

ಮುಖಚಿತ್ರ : ನಮ್ಮ ರಾಷ್ಟ್ರಧ್ವಜ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಆಗಸ್ಟ್ ೧೯೮೩ ಸಂಚಿಕೆ ೧

ಪರಮಾಣುವಿನ ಇರವಿನ ಅರಿವು

ಯಾವ ಪದಾರ್ಥವನ್ನಾದರೂ ಒಡೆದು ಒಡೆದು ಸಣ್ಣ ಸಣ್ಣ ತುಂಡುಗಳಾಗಿ ಮಾಡಬಹುದು ಎಂಬುದು ಎಲ್ಲರಿಗೂ ಗೊತ್ತು. ಒಂದು ಇಟ್ಟಿಗೆಯನ್ನು ಎರಡಾಗಿ ಮಾಡಿದರಾಗಲೀ, ನೂರಾಗಿ ಮಾಡಿದರಾಗಲೀ ಆ ತುಂಡುಗಳೆಲ್ಲ ಒಂದೇ ಗುಣ, ಸ್ವಭಾವ ಹೊಂದಿರುತ್ತವೆಯಲ್ಲವೇ? ದೊಡ್ಡ ತುಂಡಾಗಲೀ, ಸಣ್ಣ ತುಂಡಾಗಲೀ ಅದು ನೀರಿನಲ್ಲಿ ಕರಗಿ ನುಣುಪಾದ ಮಣ್ಣಾಗಿ ಹರಡಿ ಹೋಗುತ್ತದೆ. ಇಂಥ ಉದಾಹರಣೆಗಳೇ ಹೆಚ್ಚು ನಮ್ಮ ಸುತ್ತ ಮುತ್ತ. ಆದ್ದರಿಂದಲೇ ಈಗಲೂ ಬಹಳ ಜನ ನಂಬುವುದೇನೆಂದರೆ ಪದಾರ್ಥವನ್ನು ಎಷ್ಟೇ ಚಿಕ್ಕ ಚಿಕ್ಕ ಚೂರುಗಳಾಗಿ ಮಾಡುತ್ತಾ ಹೋದರೂ ಆ ಚೂರುಗಳ ಗುಣಗಳು ಹಾಗೇ ಇರುತ್ತವೆ ಎಂದು.

ಹೀಗಿರುವಾಗ ಅನೇಕ ಶತಮಾನಗಳ ಹಿಂದೆ ಈ ಬಗ್ಗೆ ಯೋಚಿಸಿದ್ದ ಬುದ್ಧಿಜೀವಿಗಳೂ ಇದೇ ನಿರ್ಧಾರಕ್ಕೆ ಬಂದದ್ದು ಆಶ್ಚರ್ಯವೇನಲ್ಲ. ಅವರು ತರ್ಕಿಸಿದ್ದು ಹೀಗೆ: ಪದಾರ್ಥವನ್ನು ಸಣ್ಣ ಸಣ್ಣದಾಗಿ ವಿಭಾಗಿಸುತ್ತಾ ಹೋದರೆ ಕೊನೆಗೆ ವಿಭಾಗಿಸಲು ಆಗದೇ ಇರುವ ಹಾಗಾಗಲೇ ಬೇಕು. ಒಂದು ವೇಳೆ ನಮಗೇ ಸಾಧ್ಯವಾಗದಿದ್ದರೂ ಮುಂದೆ ಇನ್ನೂ ಉತ್ತಮ ಉಪಕರಣಗಳನ್ನು ತಯಾರಿಸುವವರಾದರೂ ಕೊನೆಗೆ ಈ ಘಟ್ಟ ಮುಟ್ಟಬೇಕು. ನಮ್ಮ ಕಣ್ಣಿಗೆ ಕಾಣದೇ ಇರುವಷ್ಟು ಚಿಕ್ಕದಾದರೂ ಕೊನೆಗೆ ವಿಭಾಗಿಸಲ್ಪಡಲು ಆಗದೇ ಇರುವ ಕಣ ಇರಲೇಬೇಕು. ಪ್ರತಿ ಪದಾರ್ಥಕ್ಕೂ ಗಟ್ಟಿಯಾದ ಕಾಳಿನಂತೆ ಇರುವ ಇಂತಹ ಕಣವೇ ಪದಾರ್ಥದ ಮೂಲ ಘಟಕ. ಇಂತಹ ಲಕ್ಷಾಂತರ ಕಾಳುಗಳು ಒಂದಕ್ಕೊಂದು ಅಂಟಿಕೊಂಡಾಗ ನಮ್ಮ ಕಣ್ಣಿಗೆ ಕಾಣಬಲ್ಲ ಪದಾರ್ಥ ಆಗುತ್ತದೆ. ಆದರೂ ನಿಜವಾಗಿ ನೋಡಿದರೆ ಪದಾರ್ಥಗಳ ಗುಣ, ಲಕ್ಷಣಗಳೆಲ್ಲಾ

ಹುದುಗಿರುವುದು ಆ ಮೂಲ ಘಟಕಗಳಲ್ಲಿ. ಅಂದಮೇಲೆ, ಪ್ರಕೃತಿ ರಹಸ್ಯ ಬಯಲಾಯಿತು! ನಮ್ಮ ಕಣ್ಣಿಗೆ ಕಾಣುವ ವೈವಿಧ್ಯಮಯದಷ್ಟು ಸಂಕ್ಲಿಷ್ಟವೇನಲ್ಲ ಪ್ರಕೃತಿ. ನಮ್ಮ ಸುತ್ತಲೂ ಲಕ್ಷಾಂತರ ಬಗೆಯ ಬಟ್ಟೆ ಬರೆಗಳು ಕಂಡರೂ ಅವುಗಳೆಲ್ಲಾ ತಯಾರಾಗಿದ್ದು ಕೆಲವೇ ವಿಧಗಳ, ಬಣ್ಣಗಳ ದಾರಗಳಿಂದ. ಹಾಗೇ ಪ್ರಕೃತಿ ನಿಜವಾಗಿ ಕೆಲವು ಬಗೆಯ ಸಣ್ಣ ಕಣಗಳನ್ನು ಮಾತ್ರ ಉಪಯೋಗಿಸಿ ಲಕ್ಷಾಂತರ ಬಗೆಯ ಘಟನೆಗಳನ್ನು ಉಂಟುಮಾಡಿದ್ದಾಳೆ!

ಹೀಗೆ ತರ್ಕಿಸಿದ ಹಿಂದಿನವರು ಆ ಮೂಲ ಘಟಕಗಳನ್ನು 'ಪರಮಾಣು'ಗಳೆಂದು ಹೆಸರಿಸಿದರು. ಅವರ ತರ್ಕದಿಂದಲೇನೋ ಅವರಿಗೆ ತೃಪ್ತಿಯಾಯಿತಾದರೂ ಅಲ್ಲಿಂದ ಮುಂದುವರೆಯಲು ಆಗಲಿಲ್ಲ. ಏಕೆಂದರೆ ಮನಸ್ಸಿನಲ್ಲೇ ಕಂಡುಕೊಂಡಿದ್ದ 'ಪರಮಾಣು'ಗಳನ್ನು ಪ್ರತ್ಯಕ್ಷವಾಗಿ ತೋರಿಸಲು ಸಾಧ್ಯವೇ ಇರಲಿಲ್ಲ! ಮೇಲಿನ ಉದಾಹರಣೆಯಲ್ಲಿಯ ಇಟ್ಟಿಗೆ ಚೂರನ್ನೇ ತೆಗೆದುಕೊಳ್ಳಿ. ಎಷ್ಟು ಸಲ ಚೂರು ಮಾಡಿದ ಮೇಲೆ ಅದರ 'ಪರಮಾಣು'ವನ್ನು ಹಿಡಿದು ಎಲ್ಲರಿಗೂ ತೋರಿಸಬಲ್ಲೆವು? ಕಣ್ಣಿಗೆ ಕಂಡೂ ಕಾಣದಂತಿರುವಷ್ಟು ಚಿಕ್ಕದಾಗಿರುವ ಕಣವೊಂದನ್ನು ಹಿಡಿದು ತೋರಿಸಿದರೂ ನೋಡುವವರು ಯಾರಾದರೂ ಅದನ್ನೂ ಪುಡಿ ಮಾಡಬಹುದು ಅದರ ಮೇಲೆ ಒಂದು ದೊಡ್ಡ ಗುಂಡನ್ನು ಹೊರಳಿಸಿ. ಗುಂಡು ಹೊರಳಿಸಿದ್ದಾದ ಮೇಲೆ ಮತ್ತೆ ನೋಡಿದಾಗ ಅಲ್ಲಿ ಏನೂ ಕಾಣಬರದಿದ್ದರೆ ತೋರಿಸಿದ್ದ ಆ ಕಣ ಮತ್ತೆ ಪುಡಿಯಾಗಿ ಹೋಯಿತು ಎನ್ನಬೇಕು (ಪುಡಿಯಾಗದೇ ಹೋದರೆ ನಾವು ಉಪಯೋಗಿಸಿದ ಗುಂಡು ಮತ್ತು ಕಣ ಇಟ್ಟಿದ್ದ ನೆಲ ಎರಡೂ ಸಾಕಷ್ಟು ನುಣುಪಿಲ್ಲ, ಅದಕ್ಕೇ ಎಂದೂ ವಾದಿಸಬಹುದು). ಹಾಗಾದರೆ ಆ ಪುಡಿಯ (ಕಣ್ಣಿಗೆ ಕಾಣದ) ಚೂರುಗಳೇ 'ಪರಮಾಣು'ಗಳು ಎನ್ನೋಣವೇ? ಅಲ್ಲ ಎಂದರೆ ಸೋಲೊಪ್ಪಿಕೊಂಡಂತೆ. ಹೌದು ಎಂದರೂ ಕಷ್ಟ! 'ನಿನಗೆ ಹೇಗೆ ಗೊತ್ತು?' ಎಂದು ಯಾರಾದರೂ ಕೇಳುತ್ತಾರೆ. ಪುನಃ ವಿಭಾಗಿಸಲು ಪ್ರಯತ್ನಿಸಿ ತೋರಿಸೋಣ ಎಂದರೆ, ಕಣ್ಣಿಗೇ ಕಾಣವು!

ಹೀಗಿದ್ದುದರಿಂದಲೇ 'ಪರಮಾಣು'ಗಳು ಇರಬೇಕೆಂದು ತರ್ಕಿಸಿ ಸಾವಿರ ವರ್ಷಗಳಾದರೂ ಹೆಚ್ಚು ಪ್ರಗತಿ ಆಗಲೇ ಇಲ್ಲ. ಆದರೂ 'ಪರಮಾಣು'ವಿನ ಪರಿಕಲ್ಪನೆ, ಇದರ ಬಗೆಗಿನ ಯೋಚನೆ, ವಿಚಾರಗಳು ಜ್ಞಾನವಿಕಾಸದಲ್ಲಿ ಮುಖ್ಯವಾದವು. ಕಣ್ಣಿಗೇ ಕಾಣದಿದ್ದರೂ ಆ ಬಗ್ಗೆ ಕುತೂಹಲ, ಕಲ್ಪನೆಗಳನ್ನು ತಡೆಹಿಡಿಯದೇ ಇರುವ ಮಾನವನ ಬುದ್ಧಿ, ಸ್ವಭಾವ ಮಹತ್ವದ್ದು. ಇದ

ರಿಂದಲೇ ಜ್ಞಾನರಂಗಗಳಲ್ಲಿ ಇಷ್ಟೊಂದು ಪ್ರಚಂಡ ಪ್ರಗತಿ ಸಾಧ್ಯವಾಗಿರುವುದು. ಪದಾರ್ಥಗಳ ಅಂತಿಮ ಘಟಕಗಳನ್ನು ಅರಸುವ ಪ್ರಯತ್ನಗಳಲ್ಲಿ ಪ್ರಪಂಚದ ಬಗೆಗಿನ ನಮ್ಮ ಜ್ಞಾನವೇ ಅಗಾಧವಾಗಿ ಮಾರ್ಪಾಟಾಗಿಹೋಯಿತು. ನಮ್ಮ ಸುತ್ತಲೂ ಇರುವ, ನಮ್ಮ ಕಣ್ಣಿಗೆ ಕಾಣಬರುತ್ತಿರುವ ಪ್ರಪಂಚವೇ ಪ್ರಕೃತಿಯ ಮುಖ್ಯರೂಪ ಎನ್ನುವ ಭಾವನೆ ಉರುಳಿಹೋಯಿತು! ಎಲ್ಲಕ್ಕೂ ಮಿಗಿಲಾಗಿ, 'ಪರಮಾಣು' ಎನ್ನುವುದರ ಕಲ್ಪನೆಯೂ ಬದಲಾಗಿಹೋಯಿತು! ಇದು ಹೇಗಾಯಿತು ಎನ್ನುವುದನ್ನು ನೋಡೋಣ.

ಕಳೆದ ಸಾವಿರ ವರ್ಷಗಳಲ್ಲಿ ಪ್ರಗತಿಯಾದದ್ದು ನಮ್ಮ ಸುತ್ತ ಮುತ್ತ ಕಾಣುವ ಘಟನೆಗಳ ಬಗ್ಗೆ ವಿವರವಾದ ವೀಕ್ಷಣೆಯಲ್ಲಿ. ನೋಡಿ ನೋಡಿ ನೋಡುತ್ತಲೇ ಇದ್ದರೆ ನಮಗೇ ಆಶ್ಚರ್ಯವಾಗುವಂತೆ ಅನೇಕ ಸಲ ವಿಚಾರಗಳು ಹೊಳೆಯುತ್ತವೆ. ಘಟನೆಯ ರೀತಿ, ನೀತಿಗಳು ಗೋಚರವಾಗುತ್ತವೆ. ರೀತಿ ನೀತಿಗಳನ್ನು ತಿಳಿದರೆ ಸಮಸ್ಯೆ ಅರ್ಧ ಪರಿಹಾರವಾದಂತೆಯೇ. ಉದಾಹರಣೆಗೆ, ರಾತ್ರಿಯ ಆಕಾಶದಲ್ಲಿ ಲಕ್ಷಾಂತರ 'ಚುಕ್ಕೆ'ಗಳು ಕಂಡರೂ ನೋಡಿ ನೋಡುತ್ತಿದ್ದುದರಿಂದಲೇ ನಮ್ಮ ಪೂರ್ವಿಕರೇ ಕಂಡುಹಿಡಿದುಕೊಂಡಿದ್ದರು ಗ್ರಹಗಳನ್ನು ಮತ್ತು ಅವುಗಳ ಚಲನೆಯ ರೀತಿಗಳನ್ನು. ಈ ರೀತಿ ನೀತಿಗಳ ಪರಿಶೀಲನೆಯಿಂದಲೇ ಇದರ ಕಾರಣವಾದ ಗುರುತ್ವ ಬಲದ ಬಗ್ಗೆ ಶೀಘ್ರವಾಗಿ ತಿಳಿದದ್ದು.

ಹೀಗೆ ವೀಕ್ಷಣೆಗಳಿಂದ ಅನೇಕ ರಂಗಗಳು ಬೆಳೆದವು. ಅವುಗಳಲ್ಲಿ ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರ ನಮಗೀಗ ಮುಖ್ಯ. ಪದಾರ್ಥಗಳು ಒಂದರೊಡನೊಂದು ಬೆರೆತು, ಕ್ರಿಯೆಗಳಾಗಿ ಹೊಸಹೊಸ ಪದಾರ್ಥಗಳು ಜನಿಸುವುದನ್ನು ಅಭ್ಯಸಿಸುವುದು ರಸಾಯನ ಶಾಸ್ತ್ರ. ಪದಾರ್ಥಗಳ ಚಲನೆ, ಬೆಳಕು, ಶಕ್ತಿ ಇವುಗಳ ಗುಣ, ಲಕ್ಷಣಗಳ ಅಭ್ಯಾಸ ಇವು ಹಿಂದಿನಿಂದ ಭೌತಶಾಸ್ತ್ರದಲ್ಲಿ ಮುಖ್ಯವಾಗಿದ್ದುವು. ರಸಾಯನಶಾಸ್ತ್ರದಿಂದ ಹೊಳೆಯತೊಡಗಿದ್ದೇನೆಂದರೆ ಸಾವಿರಾರು ಬಗೆಯ ಪದಾರ್ಥಗಳು ಕಾಣಿಸುತ್ತಿದ್ದರೂ ಅವುಗಳೆಲ್ಲಾ ಸುಮಾರು ನೂರು ಬಗೆಯ ಪದಾರ್ಥಗಳಿಂದ ಮಾತ್ರವೇ ಆಗಿವೆ ಎಂದು! ಅಂದರೆ, ಎಂತಹ ಕ್ಲಿಷ್ಟವಾದ ಪದಾರ್ಥವನ್ನೇ ಆಗಲಿ, ಅದನ್ನು ನಾವೇ ಕೆಲವು ಬಗೆಯ ಮೂಲ ಪದಾರ್ಥಗಳನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಿ, ಸರಿಯಾದ ಕ್ರಮದಲ್ಲಿ ಕ್ರಿಯಾತ್ಮಕವಾಗಿ ಮಾಡಿ ತಯಾರಿಸಬಹುದು. ಈ ಮೂಲ ಪದಾರ್ಥಗಳನ್ನು 'ಧಾತು'ಗಳು ಎನ್ನುತ್ತಾರೆ. ನಮ್ಮ ಸುತ್ತ ಮುತ್ತ ಕಾಣುವ ಬಹುತೇಕ

ಪದಾರ್ಥಗಳು ಕೇವಲ ಎರಡು, ಮೂರು ಸರಳ ಧಾತುಗಳಿಂದ ಆಗಿವೆ. ಉದಾಹರಣೆಗೆ, ವಾಯು ಎನ್ನುವುದು ಮುಖ್ಯವಾಗಿ ಸಾರಜನಕ ಮತ್ತು ಆಮ್ಲಜನಕ ಎನ್ನುವ ಎರಡು ಧಾತುಗಳ ಮಿಶ್ರಣ. ನಾವು ಕುಡಿಯುವ ನೀರು ಸಹ ಸುಲಭ ಪದಾರ್ಥ. ಒಂದು ಮರುಭೂಮಿಯಲ್ಲಿ ನನಗೆ ತೊಟ್ಟು ನೀರು ಕಾಣಿಸದೇ ಹೋದರೂ ನನ್ನ ಹತ್ತಿರ ಸ್ವಲ್ಪ 'ಜಲಜನಕ' ಎನ್ನುವ ಧಾತು ಅನಿಲ ಇದ್ದರೆ ಸಾಕು. ಅದನ್ನು ಗಾಳಿಯಲ್ಲಿ ಉರಿಸಿದರೆ ಆಯಿತು. ಜಲಜನಕ ಗಾಳಿಯಲ್ಲಿನ ಆಮ್ಲಜನಕದೊಂದಿಗೆ ಕ್ರಿಯೆ ನಡೆಸಿ ನೀರನ್ನು ಉಂಟುಮಾಡುತ್ತದೆ!

ಹೀಗೆ ರಸಾಯನಶಾಸ್ತ್ರದಿಂದ ಬಹಳ ಪ್ರಗತಿ ಸಾಧ್ಯವಾಯಿತು. ಲಕ್ಷಾಂತರ ಬಗೆಯ ಪದಾರ್ಥಗಳಿದ್ದರೂ ಅವುಗಳೆಲ್ಲಾ ಕೇವಲ ನೂರು ಬಗೆಯ ಧಾತು ಪದಾರ್ಥಗಳಿಂದ ಆಗಿವೆ ಎಂದಾದಮೇಲೆ, ಪ್ರತಿ ಪದಾರ್ಥದ 'ಪರಮಾಣು'ಗಳೂ ಧಾತು ಪದಾರ್ಥಗಳ 'ಪರಮಾಣು'ಗಳಿಂದ ಆಗಿರಬೇಕು ಎನ್ನಲೇಬೇಕು. ಅಂದರೆ ನೀರಿನ ಅತಿ ಚಿಕ್ಕ ಕಣ ನಿಜವಾಗಿ 'ಪರಮಾಣು' ಅಲ್ಲ. ಏಕೆಂದರೆ ಅದು ಆಮ್ಲಜನಕ ಮತ್ತು ಜಲಜನಕದ ಪರಮಾಣುಗಳಿಂದ ಆಗಿರಬೇಕಲ್ಲವೇ? ಅಂದಮೇಲೆ, ನೀರಿನ ಆ ಕಣವನ್ನು ವಿಭಾಗಿಸಿ ಆಮ್ಲಜನಕ ಮತ್ತು ಜಲಜನಕದ ಪರಮಾಣುಗಳನ್ನು ಬೇರ್ಪಡಿಸಬಹುದು. ವಿಭಾಗಿಸಲ್ಪಡುವ ಯಾವ ಕಣವೂ ಪರಮಾಣು ಅಲ್ಲ. ಆದರೂ ಆ ಕಣ ನೀರಿನ ಗುಣ, ಲಕ್ಷಣಗಳನ್ನೆಲ್ಲಾ ಹೊಂದಿರುವ ಅತಿ ಚಿಕ್ಕ ಕಣ. ಆದ್ದರಿಂದ ಅದನ್ನು 'ಅಣು' ಎನ್ನುತ್ತಾರೆ. ಹೀಗಾಗಿ ನಮ್ಮ ಸುತ್ತಲಿನ ಪದಾರ್ಥಗಳಲ್ಲಿ ಬಹುತೇಕ ಅಣುಗಳ ಸಮೂಹ. ನಿಜವಾದ ಪರಮಾಣುಗಳು ಕೇವಲ ನೂರು ಬಗೆಯವು ಮಾತ್ರ. ಹೀಗೆ, ಅಣುವಾಗಲೀ, ಪರಮಾಣುವಾಗಲೀ ಕಣ್ಣಿಗೆ ಕಂಡೇ ಬರದಿದ್ದರೂ ರಸಾಯನಶಾಸ್ತ್ರದ ವೀಕ್ಷಣೆಗಳನ್ನೂ ತರ್ಕವನ್ನೂ ಉಪಯೋಗಿಸಿ ಪ್ರಕೃತಿಯ ಮೂಲವನ್ನು ಅರಿಯುವುದರಲ್ಲಿ ಮುಖ್ಯ ಪ್ರಗತಿ ಸಾಧ್ಯವಾಯಿತು ಎರಡು ಮೂರು ಶತಮಾನಗಳ ಹಿಂದೆ!

ಒಂದು ಕಡೆ ಹೀಗಿದ್ದರೆ ಇನ್ನೊಂದು ಕಡೆ ಭೌತಶಾಸ್ತ್ರದಿಂದ ಮತ್ತೊಂದು ದೊಡ್ಡ ಬದಲಾವಣೆ ಉಂಟಾಯಿತು. ಮೊದಮೊದಲು ಭೌತಶಾಸ್ತ್ರ 'ಪರಮಾಣು' ಬಗ್ಗೆ ಹೆಚ್ಚು ಯೋಚಿಸಲಿಲ್ಲ. ನಮ್ಮ ಸುತ್ತ ಮುತ್ತ ಕಾಣಬರುವ ಸಾಕಷ್ಟು ದೊಡ್ಡ ವಸ್ತುಗಳ, ಘಟನೆಗಳ ಬಗ್ಗೆ ಸಂಶೋಧನೆ ಮಾಡುವುದೇ ಮುಖ್ಯವಾಗಿತ್ತು ಅದಕ್ಕೆ. ಬೆಳಕು ನಮ್ಮ ಕಣ್ಣಿಗೆ ಮುಖ್ಯ

ವಲ್ಲವೇ? ಆದ್ದರಿಂದ ಬೆಳಕಿನ ಬಗ್ಗೆ ಕುತೂಹಲ ಮೊದಲಿನಿಂದಲೂ ಇದ್ದದ್ದು ಸಹಜವೇ. ಬೆಳಕಿನ ಕಿರಣಗಳು ಹೇಗೆ ಸಾಗುತ್ತವೆ, ಹೇಗೆ ಬಾಗುತ್ತವೆ ಇತ್ಯಾದಿಗಳನ್ನು ಅರಿಯುವ ಪ್ರಯತ್ನಗಳಿಂದ ಗಾಜಿನ ಗೋಲಕ (ಮಸೂರ, ಲೆನ್ಸ್) ತಯಾರಿಸಲ್ಪಟ್ಟಿತು. ಗೋಲಕವನ್ನು ಉಪಯೋಗಿಸಿ ನೋಡಿದಾಗ ಕೆಲವೊಮ್ಮೆ ಪದಾರ್ಥಗಳು ದೊಡ್ಡದಾಗಿ ಕಾಣುತ್ತಿದ್ದುದು ಕುತೂಹಲ ಕೆರಳಿಸಿತು. ಅನೇಕಾನೇಕ ಪ್ರಯತ್ನಗಳ ಕೊನೆಯಲ್ಲಿ ಉತ್ತಮವಾದ ಸೂಕ್ಷ್ಮದರ್ಶಕ ತಯಾರಾಯಿತು. ಕಣ್ಣಿಗೇ ಕಾಣಿಸದಿರುವ ಪದಾರ್ಥಗಳನ್ನೂ ನೋಡುವುದು ಸಾಧ್ಯವಾಯಿತು! ಯಾವ ಮನುಷ್ಯರ ಕಣ್ಣಿಗೂ ಅದುವರೆಗೂ ಕಾಣಿಸದೇ ಇದ್ದ ಹೊಸ ಲೋಕದ ಬಾಗಿಲು ತೆರೆಯಿತು. ಬರಿಗಣ್ಣಿಗೆ ಕಾಣುವ ಪ್ರಪಂಚ ನಿಜವಾಗಿರುವ ಪ್ರಪಂಚದ ಸ್ವಲ್ಪ ಭಾಗ ಮಾತ್ರ ಎಂದು ಅರಿವಾಗತೊಡಗಿತು! ನಮ್ಮ ಮೂಗಿನ ಕೆಳಗೇ ಕೋಟ್ಯಂತರ ಸೂಕ್ಷ್ಮಕ್ರಿಮಿ ಕೀಟಗಳ ಲೋಕ ಸದಾ ಇದ್ದೇ ಇದೆ ಎಂದು ತಿಳಿದಾಗ ಮನುಷ್ಯರ ದೃಷ್ಟಿಯಿಡೀ ಅಭೂತಪೂರ್ವವಾಗಿ ಬದಲಾವಣೆಯಾಯಿತು ಎಂದು ಬೇರೆ ಹೇಳಬೇಕಿಲ್ಲ!

ಇದು ಮಹತ್ವದ ಬದಲಾವಣೆ. ಪರಮಾಣುವಿನ ಪರಿಕಲ್ಪನೆಯೇನೋ ಆಗಲೇ ಇತ್ತಾದರೂ ಪರಮಾಣು ಪ್ರಪಂಚ ನಮ್ಮ ಸುತ್ತಲೂ ಕಾಣಬರುವ ಪ್ರಪಂಚಕ್ಕಿಂತ ಹೆಚ್ಚು ಭಿನ್ನವೇನಲ್ಲ ಎಂದೇ ಎಲ್ಲರೂ ನಂಬಿದ್ದರು. ಒಂದು ಡಬ್ಬಿಯಲ್ಲಿಯ ಜಲಜನಕ ಉರಿದು ಆಮ್ಲಜನಕದೊಂದಿಗೆ ಸೇರಿ ಸ್ವಲ್ಪ ನೀರನ್ನು ಉಂಟುಮಾಡುವುದು ನಮ್ಮ ಕಣ್ಣಿಗೆ ಕಾಣುವ ಲೋಕದ ಘಟನೆಯಾದರೆ ಕಣ್ಣಿಗೆ ಕಾಣಿಸದಷ್ಟು ಚಿಕ್ಕದಾಗಿರುವ ಪರಮಾಣು ಲೋಕದಲ್ಲಾಗುವುದೂ ಅಷ್ಟೇ. ಒಂದೆರಡು ಜಲಜನಕದ ಪರಮಾಣುಗಳು ಒಂದೆರಡು ಆಮ್ಲಜನಕದ ಪರಮಾಣುಗಳೊಂದಿಗೆ ಬೆಸುಗೆ ಹಾಕಿಕೊಂಡು ಒಂದೆರಡು ನೀರಿನ ಕಣಗಳನ್ನು ಉಂಟುಮಾಡುವುದು ಎಂದು. ಆದರೆ ಸೂಕ್ಷ್ಮದರ್ಶಕ ತೋರಿಸಿದ ಕ್ರಿಮಿಕೀಟಗಳು, ಅವುಗಳ ಹುಟ್ಟುಸಾವುಗಳು, ರೂಪ ರೀತಿಗಳು ದೊಡ್ಡ ಪ್ರಾಣಿಗಳ ಗುಣಗಳಿಗಿಂತ ಎಷ್ಟೋ ಭಿನ್ನವಾಗಿದ್ದುವು. ಇನ್ನೂ ವೀಕ್ಷಿಸಿದಾಗ ನಮ್ಮ ಮೈಯಲ್ಲೇ ನಮ್ಮ ಕಣ್ಣಿಗೆ ಕಾಣುವುದಕ್ಕಿಂತ ಭಿನ್ನವಾಗಿರುವ ವಸ್ತುಗಳಿವೆ ಎಂದೂ ತಿಳಿದುಬಂತು! ನಮ್ಮ ಕೈ, ಕಾಲು, ಕಿವಿ, ಮೂಗು, ಕಣ್ಣು, ಹೊಟ್ಟೆ ಇತ್ಯಾದಿಗಳು ಬೇರೆ ಬೇರೆ ರೂಪ, ವೈಶಿಷ್ಟ್ಯತೆಗಳಿಂದ ಇರುವಂತೆ ಕಂಡರೂ ಪ್ರತಿಯೊಂದೂ ಅನೇಕ ಸಾವಿರ ಸಣ್ಣ 'ಜೀವ ಕಣ'ಗಳಿಂದ ಆಗಿವೆ ಎನ್ನುವುದನ್ನು ತೋರಿಸಿತು ಸೂಕ್ಷ್ಮದರ್ಶಕ. ದೇಹದ ಯಾವ ಅಂಗ

ವಾದರೂ ಅದರ ರೂಪಕ್ಕೂ ಅದನ್ನು ಉಂಟುಮಾಡಿರುವ ಜೀವಕಣಗಳ ರೂಪಕ್ಕೂ ಏನೂ ಸಂಬಂಧವಿಲ್ಲವೆಂದು ತಿಳಿಯಿತು. ಜೀವಕಣಗಳು ತಮ್ಮ ತಮ್ಮೊಳಗಿನ ಕಾರ್ಯಗಳಲ್ಲಿ ಒಂದರಿಂದ ಇನ್ನೊಂದು ಬಹಳ ವ್ಯತ್ಯಾಸ ತೋರಿಸಿದರೂ, ಒಟ್ಟಿನಲ್ಲಿ ಅವುಗಳ ರಚನೆ, ವಿಧಾನಗಳು ಹೆಚ್ಚುಕಡಿಮೆ ಒಂದೇ ಎಂದು ಗೊತ್ತಾಯಿತು.

ಹೀಗೆ ಅನಿರೀಕ್ಷಿತವಾಗಿ ಮತ್ತೊಂದು ವಿಧದಲ್ಲಿ 'ಪರಮಾಣು'ವಿನ ಬಗ್ಗೆ ಗಮನ ಸೆಳೆಯಲ್ಪಟ್ಟಿತು. ಸುತ್ತಲೂ ಕಾಣುವ ವೈವಿಧ್ಯಮಯ ನಿರ್ಜೀವ ಪದಾರ್ಥಗಳೆಲ್ಲದರ ಮೂಲ ಕೇವಲ ಕೆಲವು ಬಗೆಯ 'ಪರಮಾಣು'ಗಳು ಎಂದು ರಸಾಯನಶಾಸ್ತ್ರದಿಂದ ಮನದಟ್ಟಾಗುತ್ತಿದ್ದರೆ, ಇನ್ನೊಂದು ಕಡೆ ಪ್ರಾಣಿಗಳ ವೈವಿಧ್ಯಮಯತೆಯೆಲ್ಲದರ ತಳಹದಿಯೂ ಹೆಚ್ಚೂ ಕಡಿಮೆ ಒಂದೇ ರೀತಿಯ 'ಜೀವಕಣ'ಗಳಲ್ಲಿ ಎನ್ನುವುದಕ್ಕೆ ಬೆಂಬಲಕೊಡತೊಡಗಿತು ಸೂಕ್ಷ್ಮದರ್ಶಕ!

ಸೂಕ್ಷ್ಮದರ್ಶಕಗಳು ಇನ್ನೂ ಉತ್ತಮವಾಗತೊಡಗಿದಂತೆ ಈ ಸೂಕ್ಷ್ಮಲೋಕದ ಬಗ್ಗೆ ಹೆಚ್ಚು ಹೆಚ್ಚು ತಿಳಿದುಬರತೊಡಗಿತು. ಕ್ರಿಮಿಗಳ, ಜೀವಕಣಗಳ ವ್ಯವಹಾರಗಳು ಗೊತ್ತಾಗತೊಡಗಿದುವು. ಅವುಗಳ ಕಾರ್ಯಗಳೆಂದರೆ ಬಹುಮಟ್ಟಿಗೆ ರಾಸಾಯನಿಕ ಕ್ರಿಯೆಗಳು ಎಂದು ಗೋಚರಿಸತೊಡಗಿತು! ಅಂದರೆ ಧಾತುಗಳು, ಆ ಮೂಲಕ ಪರಮಾಣುಗಳು, ಇಲ್ಲೂ ತಲೆಯಿಟ್ಟುವು!

ಇಷ್ಟೆಲ್ಲಾ ಆದರೂ ಪರಮಾಣುವನ್ನು ನೇರವಾಗಿ ಕಾಣುವ ಬಗ್ಗೆ ಪರಿಸ್ಥಿತಿ ಸಾವಿರ ವರ್ಷಗಳ ಹಿಂದೆ ಹೇಗಿತ್ತೋ ಈಗಲೂ ಹಾಗೇ ಇತ್ತು! ಬರಿಗಣ್ಣಿಗೆ ಕಾಣಬಲ್ಲ ಅತಿ ಚಿಕ್ಕ ಕಣಕ್ಕಿಂತಲೂ ನೂರಾರು ಪಾಲು ಚಿಕ್ಕದಾಗಿರುವ ವಸ್ತುಗಳನ್ನೇನೋ ಸೂಕ್ಷ್ಮದರ್ಶಕದಲ್ಲಿ ನೋಡಬಹುದಾದರೂ ಇವುಗಳೂ ಪರಮಾಣುವಿಗಿಂತಲೂ ಎಷ್ಟೋ ಸಾವಿರ ಪಾಲು ದೊಡ್ಡವು ಎನ್ನುವುದರಲ್ಲಿ ಅನುಮಾನವಿರಲಿಲ್ಲ. ಏಕೆಂದರೆ ಅಷ್ಟು ಚಿಕ್ಕದಿದ್ದರೂ ಅವುಗಳಲ್ಲಿ ಅನೇಕವು ಜೀವವಿರುವ ಕ್ರಿಮಿಗಳು. ಅವುಗಳ ರೀತಿ, ನೀತಿಗಳೂ ಸಂಕ್ಲಿಷ್ಟ. ಸಂಕೀರ್ಣ ಸ್ವಭಾವದ ಜೀವಿಗಳು ಸರಳವಾದ ಒಂದೆರಡು ಪರಮಾಣುಗಳಿಂದಲೇ ಆಗಿರಲು ಸಾಧ್ಯವಿಲ್ಲ. ಹಾಗೆ ಆಗುವುದು ಸಾಧ್ಯವಿದ್ದಿದ್ದರೆ ನಮ್ಮ ಸುತ್ತಮುತ್ತಲೂ ಬರೀ ಜೀವವಿರುವ ವಸ್ತುಗಳೇ ತುಂಬಿಹೋಗಿರಬೇಕಾಗಿತ್ತು! ಆದ್ದರಿಂದ ಸೂಕ್ಷ್ಮದರ್ಶಕ ಬೇರೆ ವಿಧಗಳಲ್ಲಿ ಎಷ್ಟೇ ಕ್ರಾಂತಿಯುಂಟುಮಾಡಿದರೂ ಪರಮಾಣು ಲೋಕದ ಒಳಗಡೆಗೆ ಇಣುಕಲೂ ಸಹಾಯಕವಾಗಲಿಲ್ಲ!

ಮತ್ತೊಂದು ಹೆಜ್ಜೆಯ ಪ್ರಗತಿ ಆಗಿದ್ದು ಪುನಃ ಭೌತಶಾಸ್ತ್ರದಿಂದಲೇ.

ಬೆಳಕಿನ ಗುಣ, ಲಕ್ಷಣಗಳನ್ನು ಅರಿಯುವ ಪ್ರಯತ್ನಗಳಿಂದ ಸೂಕ್ಷ್ಮದರ್ಶಕ ಬಂದಾದ ಮೇಲೆ, ಭೌತಶಾಸ್ತ್ರ ಮೊದಲಿನಂತೆಯೇ ಬೆಳಕು, ಶಕ್ತಿಗಳ ಬಗ್ಗೆ ಅರಿಯುವುದರ ಕಡೆ ತನ್ನ ಗಮನ ಹರಿಸಿತು. ಬೆಳಕಿನ ದೆಸೆಯಿಂದ ನಾವು ಹೇಗೆ ಪದಾರ್ಥಗಳನ್ನು ಕಾಣುತ್ತೇವೆ ಎಂದು ತಿಳಿಯಲಾರಂಭಿಸಿತು. ಬೆಳಕು ಎಂದರೆ ಒಂದು ರೀತಿಯ ಅಲೆ ಎಂದು ದೃಢವಾಯಿತು. ಶಕ್ತಿಯ ಬಗ್ಗೆ ಪ್ರತ್ಯೇಕವಾಗಿ ನಡೆಸಿದ್ದ ಸಂಶೋಧನೆಗಳಿಂದ ಆಯಸ್ಕಾಂತಗಳ ಬಗ್ಗೆ, ವಿದ್ಯುತ್ತಿನ ಬಗ್ಗೆ ಎಷ್ಟೋ ವಿಚಾರಗಳು ತಿಳಿದುಬರತೊಡಗಿದುವು. ಸುಮಾರು ನೂರು ವರ್ಷಗಳ ಹಿಂದೆ ಒಂದು ಮುಖ್ಯವಾದ ವಿಷಯ ಗೊತ್ತಾಯಿತು. ಅದೇನೆಂದರೆ ಬೆಳಕು ಎನ್ನುವುದು ವಿದ್ಯುತ್ ಮತ್ತು ಆಯಸ್ಕಾಂತ ಶಕ್ತಿಗಳಿಂದ ಉಂಟಾಗುವ ಅಲೆ ಎಂದು. ಬೆಳಕು ಎನ್ನುವುದು ಈ ವಿದ್ಯುತ್ಕಾಂತೀಯ ಅಲೆಗಳಲ್ಲಿ ಒಂದು ಸಣ್ಣ ಭಾಗ ಅಷ್ಟೇ ಎಂದು! ಬೆಳಕಿಗಿಂತಲೂ ಭಿನ್ನವಾದ ವಿದ್ಯುತ್ಕಾಂತೀಯ ಅಲೆಗಳನ್ನು ತಯಾರಿಸಲು ಸಾಧ್ಯವಾಯಿತು. ಇವು ಕಣ್ಣಿಗೇ ಕಾಣದಿದ್ದರೂ ಬೆಳಕಿನ ಅಲೆಗಳಂತೆಯೇ ತಾವೂ ವಸ್ತುಗಳಿಂದ ಪ್ರತಿಫಲನ ಹೊಂದುತ್ತವೆ ಎಂದೂ ಯಾಂತ್ರಿಕ ಉಪಕರಣಗಳಿಂದ ಈ ಪ್ರತಿಫಲಿತ ಅಲೆಗಳನ್ನು 'ನೋಡ'ಬಹುದು ಎಂದೂ ಆ ಮೂಲಕ ಪ್ರತಿಫಲಿಸಿದ ಪದಾರ್ಥವನ್ನೂ 'ಕಾಣ'ಬಹುದು ಎಂದೂ ಹೊಳೆಯಿತು. ಬೆಳಕಿಗಿಂತಲೂ ಚಿಕ್ಕವಾದ ವಿದ್ಯುತ್ಕಾಂತೀಯ ಅಲೆಗಳನ್ನು ತಯಾರಿಸಿದರೆ ಆಗ ಅವು ಚಿಕ್ಕ ಕಣಗಳಿಂದ ಬೆಳಕಿಗಿಂತಲೂ ಚೆನ್ನಾಗಿ ಪ್ರತಿಫಲಿತವಾಗಿ ಆ ಕಣಗಳ ಇರವನ್ನು ಇನ್ನೂ ಸ್ಪಷ್ಟವಾಗಿ ತೋರಗೊಡಬಲ್ಲುವು ಎಂದೂ ಹೊಳೆಯಿತು. ಆದರೆ ಈ ರೀತಿಯ ಅಲೆಗಳು ಕಣ್ಣಿಗೆ ಕಾಣಬರದಿರುವುದರಿಂದ ಇವುಗಳನ್ನು ಉಪಯೋಗಿಸಿ ಚಿಕ್ಕ ಕಣಗಳನ್ನು ಕಾಣಬೇಕಾದರೆ ವಿಶೇಷ ಉಪಕರಣಗಳನ್ನು ತಯಾರಿಸಬೇಕು. ಹೆಚ್ಚು ತಂತ್ರವಿದ್ಯೆ ಸಮಾಜದಲ್ಲಿ ಇನ್ನೂ ಬೇರೂರದಿದ್ದುದರಿಂದ ಇಂತಹ ಉಪಕರಣಗಳು ಇತ್ತೀಚಿನವರೆಗೂ ತಯಾರಾಗಲಿಲ್ಲ.

ಈ ದಿಕ್ಕಿನಲ್ಲಿ ನಡಗೆ ಕುಂಟಿದ್ದರೂ ಭೌತಶಾಸ್ತ್ರದ ಸಂಶೋಧನೆಗಳು ಮುಂದುವರೆಯುತ್ತಲೇ ಇದ್ದುವು. ಪರಮಾಣುವಿನ ಬಗ್ಗೆ ಹೆಚ್ಚು ಯೋಚಿಸದೆ ವಿದ್ಯುತ್ತು, ಶಕ್ತಿ, ಚಲನೆ ಇಂತಹವುಗಳ ಕಡೆಯೇ ಗಮನಕೊಟ್ಟಿದ್ದ ಭೌತಶಾಸ್ತ್ರದಿಂದಲೇ ಕೊನೆಗೂ ಪರಮಾಣುವಿನ ಬಗ್ಗೆ ನಿಖರವಾಗಿ ನಿಜಸ್ಥಿತಿ ತಿಳಿದು ಬಂದದ್ದು ಒಂದು ವಿಚಿತ್ರ.

ವಿದ್ಯುತ್ತು ಪದಾರ್ಥಗಳ ಮೇಲೆ ಏನು ಪ್ರಭಾವ ಬೀರುತ್ತದೆ ಎನ್ನುವುದನ್ನು

ಅರಿಯಲು ಕಳೆದ ಶತಮಾನದ ಕೊನೆಯಲ್ಲಿ ಪ್ರಯೋಗಗಳು ಆಗುತ್ತಿದ್ದುವು. ಇವುಗಳಲ್ಲಿ ಒಂದು, ವಿದ್ಯುತ್ತು ಅನಿಲಗಳ ಮೂಲಕ ಹೇಗೆ ಪ್ರವಹಿಸುತ್ತದೆ ಎಂದು ತಿಳಿಯಲು ಮಾಡಿದ್ದು. ಕೆಲವೊಮ್ಮೆ ಆ ಅನಿಲ ಒಡೆದುಹೋಗಿ ಅದರಿಂದ ಹೊಸರೀತಿಯ ಕಣಗಳು ಹೊಮ್ಮುವುದು ಗೊತ್ತಾಯಿತು ಆಗ. ಇನ್ನೂ ಪರೀಕ್ಷಿಸಿದಾಗ ಈ ಕಣಗಳು ಹರಿದಾಗ ವಿದ್ಯುತ್ ಪ್ರವಾಹದಂತೆಯೇ ಇರುತ್ತದೆ ಎಂದು ತಿಳಿಯಿತು. ಇನ್ನೊಂದು ರೀತಿಯಿಂದ ಪರೀಕ್ಷಿಸಿದಾಗ ಈ ಕಣಗಳಿಗೆ ತೂಕವಿದೆ ಎಂದೂ ತಿಳಿಯಿತು. ತೂಕವಿರುವುದರಿಂದ ಇವು ವಸ್ತುವಿನ ಕಣಗಳಾಗಿರಬೇಕು. ವಿದ್ಯುತ್ ಪ್ರವಾಹದಂತೆ ಹರಿಯುವುದರಿಂದ ಇವುಗಳಿಗೆ ವಿದ್ಯುದಾವೇಶ ಇರಬೇಕು. ಎಷ್ಟೋ ಅನಿಲಗಳನ್ನು ಉಪಯೋಗಿಸಿದ್ದಾಯಿತು. ಅವುಗಳಿಂದಲೆಲ್ಲಾ ಬರುತ್ತಿದ್ದ ಕಣಗಳು ಇದೇ ತೂಕ, ಗುಣಗಳನ್ನು ಹೊಂದಿರುವುದು ಗೊತ್ತಾಯಿತು. ಅಂದಮೇಲೆ, ಎಲ್ಲಾ ಅನಿಲಗಳಲ್ಲೂ ಈ ವಿದ್ಯುತ್ ಕಣಗಳು ಇರಬೇಕು. ಈ ಕಣಗಳಿಗೆ 'ಎಲೆಕ್ಟ್ರಾನ್'ಗಳೆಂದು ಹೆಸರಿಸಿದರು.

ಜಲಜನಕ, ಸಾರಜನಕ ಇತ್ಯಾದಿ ಧಾತು ಅನಿಲಗಳನ್ನು ಉಪಯೋಗಿಸಿದ್ದಾಗಲೂ ಅವುಗಳಿಂದ ಎಲೆಕ್ಟ್ರಾನ್‌ಗಳು ಹೊಮ್ಮುತ್ತಿದ್ದುವು. ಧಾತುಗಳು ಪರಮಾಣುಗಳಿಂದ ಮಾತ್ರವೇ ಮಾಡಲ್ಪಟ್ಟಿವೆ ಎಂದು ಹಿಂದೆಯೇ ನಿರ್ಧಾರವಾಗಿದ್ದರಿಂದ ಎಲೆಕ್ಟ್ರಾನ್‌ಗಳು ಪರಮಾಣುಗಳಿಂದಲೇ ಬರುತ್ತಿದ್ದಿರಬೇಕು. ಹಾಗಾದರೆ ಎಲೆಕ್ಟ್ರಾನ್‌ಗಳೇ ಪರಮಾಣುಗಳೇ? ಅಲ್ಲ. ಏಕೆಂದರೆ ಪರಮಾಣುಗಳಿಗೆ ವಿದ್ಯುದಾವೇಶ ಇರಲು ಸಾಧ್ಯವಿಲ್ಲ. (ಹಾಗಿದ್ದಿದ್ದರೆ ಒಂದು ಡಬ್ಬಿಯಲ್ಲಿಯ ಜಲಜನಕವೂ ವಿದ್ಯುತ್ತಿನಿಂದ ಕೂಡಿರಬೇಕು. ನಾವು ಉಸಿರಾಡುವ ವಾಯುವೂ ನಮಗೆ ಪ್ರತಿಸಲವೂ ವಿದ್ಯುತ್ ಚುರುಕು ಮುಟ್ಟಿಸುತ್ತಲೇ ಇರಬೇಕಿತ್ತು!) ಹಾಗಾದರೆ ಹೇಗೆ ಇದನ್ನು ಅರ್ಥಮಾಡಿಕೊಳ್ಳುವುದು?

ಒಂದೇ ದಾರಿ. ಎಲೆಕ್ಟ್ರಾನ್‌ಗಳು ಎಲ್ಲಾ ಪರಮಾಣುಗಳಲ್ಲಿಯೂ ಇವೆ; ಆದರೆ ಬರೀ ಎಲೆಕ್ಟ್ರಾನ್‌ಗಳಷ್ಟೇ ಅಲ್ಲದೆ ಅವುಗಳ ವಿದ್ಯುತ್ತಿಗೆ ವಿರುದ್ಧವಾದ ವಿದ್ಯುದಾವೇಶ ಇರುವ ಬೇರೆ ಕಣಗಳೂ ಇವೆ ಪರಮಾಣುಗಳಲ್ಲಿ. ಆದ್ದರಿಂದ, ಒಂದು 'ಪರಮಾಣು' ಎಂದರೆ ಎಲೆಕ್ಟ್ರಾನ್‌ಗಳು ಮತ್ತು ಬೇರೆ ಏನೋ ಕಣಗಳು ಎರಡು ರೀತಿಯವೂ ಹೇಗೋ ಸೇರಿಕೊಂಡು ಮಾಡಿರುವ ಒಂದು ಮುದ್ದೆ! ಈ ನಿರ್ಧಾರಕ್ಕೆ ಬರದೇ ಬೇರೆ ದಾರಿಯೇ ಇರಲಿಲ್ಲ.

ಹೀಗೆ ಕಳೆದ ಶತಮಾನದ ಕೊನೆಯಲ್ಲಿ ಮೊತ್ತ ಮೊದಲ ಬಾರಿಗೆ 'ಪರಮಾಣು'ವೂ ವಿಚ್ಛೇದನವಾಗಲೇಬೇಕಾಯಿತು! ಈ ವಿಚ್ಛೇದನ ಆಗಿದ್ದು

ಅನಿರೀಕ್ಷಿತವಾಗಿ. 'ಪರಮಾಣು' ಎಂದರೇನೆ ವಿಭಾಗಿಸಲ್ಪಡಲಾಗದ ಕಣ ಎಂದು ಕಲ್ಪಿಸಿ ಸ್ಥಾಪಿಸಿದ್ದ ಒಂದು ಮಾನಸಿಕ ಸಂಗತಿಯನ್ನೂ ಕತ್ತರಿಸಿಹಾಕಿದ ವಿಜ್ಞಾನದ ಪ್ರಗತಿ ಅಮೋಘವೇ ಸರಿ! ಅದೂ, ಪರಮಾಣುವಿಗಿಂತಲೂ ಎಷ್ಟೋ ಪಾಲು ದೊಡ್ಡದಾಗಿರುವ ವಸ್ತುಗಳನ್ನೂ ಪ್ರಪಂಚದಲ್ಲಿ ಇನ್ನೂ ಯಾರೂ ಪ್ರತ್ಯಕ್ಷವಾಗಿ ಕಣ್ಣಿಂದ ನೋಡದಿದ್ದ ಕಾಲದಲ್ಲೇ! ಪ್ರಕೃತಿಯ ತಳಹದಿಯ ಬಗ್ಗೆ ಸತ್ಯವನ್ನು ಸ್ಪಷ್ಟವಾಗಿ, ನಿರ್ವಿವಾದವಾಗಿ ಎತ್ತಿ ತೋರಿಸಿದ ಭೌತವಿಜ್ಞಾನದ ತಂತ್ರಗಳು ಮಂತ್ರಗಳಿಗಿಂತಲೂ ಅದ್ಭುತವೇ ಸರಿ!

ಈ ಶತಮಾನದಲ್ಲಿ ಬೇಕಾದಷ್ಟು ಪ್ರಗತಿಯಾಗಿದೆ. ಪರಮಾಣುವಿನ ರಚನೆಯ ಬಗ್ಗೆ ಬಹಳ ವಿವರ ತಿಳಿದುಬಂದಿದೆ. ಪರಮಾಣುವಿನ ಅಳತೆಗಿಂತಲೂ ಎಷ್ಟೋ ಸಾವಿರ ಪಾಲು ಚಿಕ್ಕದಾಗಿರುವ 'ಪ್ರಾಥಮಿಕ ಕಣ'ಗಳ ಬಗ್ಗೆಯೇ ಪ್ರಪಂಚದಲ್ಲಿ ಈಗ ಸಾವಿರಾರು ಜನ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಪರಮಾಣುಗಳನ್ನು ಉಪಯೋಗಿಸಿಕೊಂಡು ಮಹಾಸ್ತ್ರಗಳನ್ನೂ ಬೃಹತ್ ವಿದ್ಯುತ್ ಕೇಂದ್ರಗಳನ್ನೂ ತಯಾರಿಸಿದ್ದೇವೆ. ಪರಮಾಣುವಿನ ಇರವಿನ ಬಗ್ಗೆಯೇ ಏಕೆ, ಪ್ರಾಥಮಿಕ ಕಣಗಳ ಬಹುತೇಕ ವಿವರಗಳ ಬಗ್ಗೆಯೂ ಯಾವ ವಿಜ್ಞಾನಿಗೂ ಕಿಂಚಿತ್ತಾದರೂ ಸಂದೇಹವೇ ಇಲ್ಲ!

ಇಷ್ಟಾದರೂ ಒಂದೇ ಒಂದು ಪರಮಾಣುವನ್ನಾದರೂ ಯಾರೂ ಕಣ್ಣಿನಿಂದ ನೋಡೇ ಇಲ್ಲ! ಹಾಗೆ ನೋಡಲೂ ಸಾಧ್ಯವಿಲ್ಲ. ಅತ್ಯಂತ ಶಕ್ತಿಯುತವಾದ 'ಎಲೆಕ್ಟ್ರಾನ್ ಸೂಕ್ಷ್ಮದರ್ಶಕ'ಗಳಾದರೂ ಅವುಗಳಲ್ಲಿ ಕಾಣಬರುವುದು ಸಾವಿರಾರು ಅಣುಗಳಿಂದ ಆಗಿರುವ ರಾಸಾಯನಿಕ ತುಣುಕುಗಳು ಮಾತ್ರ. ಇನ್ನೂ ಚಿಕ್ಕವನ್ನು ನೋಡಲು ಹೋದಾಗ ಆ ಪ್ರಯತ್ನವೇ ಆ ಕಣಗಳನ್ನು ಚೆಲ್ಲಾಪಿಲ್ಲಿಯಾಗಿಸಿ ನಮ್ಮನ್ನು ನಿರಾಶೆಗೊಳಿಸುತ್ತದೆ!

ಆದರೆ ಇದೇ ವಿಜ್ಞಾನದ ಶಕ್ತಿಯ ಉದಾಹರಣೆ. ಮನುಷ್ಯದೇಹದ ಮಿತಿಗಳನ್ನೂ ಮೀರಿದ ಬುದ್ಧಿಶಕ್ತಿಯ ಬುನಾದಿಯ ಮೇಲೆ ಬೆಳೆಯುತ್ತಿರುವುದರಿಂದಲೇ ವಿಜ್ಞಾನ ನಿಜಕ್ಕೂ ವಿಶ್ವವ್ಯಾಪಿಯಾದ ಜ್ಞಾನವಾಗಿದೆ.

ಡಾ|| ವಿಜಯ್ ಶ್ರೀಧರ್

ಜ್ಞಾನ ಸದಾ ಕಾಲದಲ್ಲೂ ಇದ್ದೇ ಇರುತ್ತದೆ. ಆದರೆ ಮಾನವ ಅದನ್ನು ಆಗಾಗ ಮಾತ್ರ ನೋಡುತ್ತಾನೆ.

—ಸ್ವಾಮಿ ವಿವೇಕಾನಂದ

ಹೋಗಿ ಬಲ್ಲಾಳರಾಯ ದುರ್ಗಕ್ಕೆ

ವಸ್ತ್ರದಂಗಡಿ ಮಾಲೀಕರು, ಸಿಹಿಕೇಂದ್ರದೊಡೆಯರು ಕ್ರಿಸ್‌ಮಸ್ ಕೊಡುಗೆ ಘೋಷಿಸುವ ಮೊದಲೇ 'ಆರೋಹಣ ಪರ್ವತಾರೋಹಿಗಳು ಸಾಹಸಿಗಳು' ಮಂಗಳೂರು, ಇವರು ಸಾಹಸಪ್ರಿಯರಿಗೆ, ಪ್ರಕೃತಿಪ್ರಿಯರಿಗೆ ಕೊಡುಗೆ ಘೋಷಿಸಿದರು "ಬನ್ನಿ ಬಲ್ಲಾಳ ರಾಯದುರ್ಗಕ್ಕೆ." ಕರೆಗೆ ಓಗೊಟ್ಟು ಕ್ರಿಸ್‌ಮಸ್ ಪೂರ್ವ ಸಂಜೆ ಆರರ ಮೇಲೆ ಆರೋಹಿಗಳು ಅವರವರ ಅನುಕೂಲತೆ ಗನುಗುಣವಾಗಿ ಕುಕ್ಕಾವು (ಮಂಗಳೂರು ಚಾರ್ಮಾಡಿ ಮಾರ್ಗದಲ್ಲಿ ಮುಂಡಾಜೆಯಿಂದ ಐದು ಮೈಲು ದೂರದ ಹಳ್ಳಿ) ಸೇರುತ್ತಲೇ ಇದ್ದರು. ವಾಸ್ತವ್ಯ ಶ್ರೀ ವೆಂಕಟಸುಬ್ಬರಾಯರ ಕೂಡುಬೆಟ್ಟುಮನೆ.

ನಸುಕು ನಾಲ್ಕುಗಂಟೆಯಿಂದಲೇ ಉತ್ಸಾಹಿಗಳು ಎದ್ದು ಮೂಲ ಅಗತ್ಯ ಗಳನ್ನು ಪೂರೈಸಹೊರಟರು. ಐದು ಗಂಟೆಗೆ ಉಪಾಹಾರ—ಅವಲಕ್ಕಿ, ಉಪ್ಪಿಟ್ಟು, ಚಿತ್ರಾನ್ನ, ಬಾಳೆಹಣ್ಣು, ರಾಗಿಮಾಲ್ಟ್. ಬಂಡಿಬಿರಿಯೆ ತಿಂದು ಹೊರಬರುತ್ತ ಹೆಬ್ಬಾಗಿಲಲ್ಲಿ ಸ್ವತಃ ಸುಬ್ಬರಾಯರೇ ನಿಂತು ನಮಗೆ ಬುತ್ತಿ ಊಟದ (ಚಿತ್ರಾನ್ನ) ಪೊಟ್ಟಣ, ಮೂಸುಂಬಿ, ಕೊಬ್ಬಿದ ಕಬ್ಬಿನ ದಂಟು ಇತ್ತರು. ಹಳ್ಳಿ ಜನರ ಹೃದಯ ವೈಶಾಲ್ಯದಲ್ಲಿ ತಂಡದ ಮಂದಿ ಹೊಸಬೆಳಕನ್ನೇ ಕಂಡರು.

ಪ್ಯಾಂಟು, ಶರ್ಟು, ಸ್ವೆಟರ್‌ಧರಿಸಿ, ಶೂ ಬಿಗಿದು, ಹಾಸು, ಹೊದಿಕೆ, ತಿನಿಸು, ಲೋಟ, ಟಾರ್ಚು, ಕತ್ತಿ ಇತ್ಯಾದಿ ಓರಣವಾಗಿ ತುಂಬಿದ ಚೀಲವನ್ನು ಬೆನ್ನಿಗೇರಿಸಿ (ಆ ವ್ಯವಸ್ಥೆ ಇಲ್ಲದವರು ಹೆಗಲಿಗೇರಿಸಿ/ಕೈಯಲ್ಲಿ ಹಿಡಿದು) ನೀರು ಚೀಲವನ್ನು ಹೆಗಲಲ್ಲಿಳಿಸಿ, ನೇಸರಿನ ನಿರೀಕ್ಷೆಯಲ್ಲಿದ್ದರು. ಮೂವತ್ತಾರು ಗಂಡು, ಒಂಬತ್ತು ಹೆಣ್ಣು—ಒಟ್ಟು ನಲವತ್ತೈದರ ತಂಡ. ಹದಿನಾಲ್ಕರ ಅಣುಗನಿಂದ ಐವತ್ತೈದರ ಮುದಿಯನವರೆಗೆ, ಊಳಿಗದವನಿಂದ ಒಡೆಯನವರೆಗೆ, ವಿದ್ಯಾರ್ಥಿ ಯಿಂದ ಗುರುವಿನವರೆಗೆ, ಆರೋಹಣಾಸಕ್ತಿ ಒಂದೇ ಮಾನವಂಶವಾಗಿ ಸೇರಿದ್ದರು.

ಬೆಳಿಗ್ಗೆ ಆರೂಕಾಲುಗಂಟೆ ಮೂಡಲಂಚು ಕೆಂಬಣ್ಣ ಕಟ್ಟಿತು. ಮಂದ ಮಂಜಿನಲ್ಲೂ ಅಷ್ಟಿಷ್ಟು ಕಾಣಹತ್ತಿತು. ವಾತಾವರಣದ ಕುಳಿರನ್ನು ಲೆಕ್ಕಿಸದೆ ತಂಡ ರಾಯರ ಮನೆಗೆ ವಿದಾಯ ಹೇಳಿತು. ದಾರಿಕಾರನನ್ನು ಮುಂದಿಟ್ಟು ಉತ್ತರಾಭಿಮುಖವಾಗಿ ಸಾಗಿತು. ಅಗಲ ಕಿರಿದಾದ ಗದ್ದೆಹುಣಿಯಲ್ಲಿನ ನಡುಗೆ ಅಸ್ವಾಭಾವಿಕ ವೇಶ ಭೂಷಣಗಳಿಂದ ಅಗಾಗ ಆಯ ತಪ್ಪುತ್ತಿತ್ತು. ಇಬ್ಬದಿಯ

ಶೃಂಗಶ್ರೇಣಿಗಳು ಇಬ್ಬನಿಯ ನಡುವೆ ಹಿಮಾಲಯದ ಕಲ್ಪನೆ ಕೊಡುತ್ತಿದ್ದವು. ತಜ್ಞರು ಕುದುರೆಮುಖ, ಹಿರಿಮಾರು ದೊಪ್ಪೆಗಳನ್ನು ಗುರುತಿಸಿ ತೋರುತ್ತಿದ್ದರು. ಸಣ್ಣಪುಟ್ಟ ತೋಡುಗಳನ್ನು ದಾಟಿ, ಒಂದರ್ಧ ಮೈಲು (ಜೈಲನ್ನು) ಉಪಕ್ರಮಿಸಿ ಗುಡ್ಡಪ್ರದೇಶಕ್ಕೆ ಅಡಿಯಿಟ್ಟೆವು. ಹರಳುಕಲ್ಲು, ಕುರುಚಲು ಗಿಡಗಳ ವಿರಳ ಕಾಡು–ಸಾವಕಾಶ ಏರು. ಎಲ್ಲರಲ್ಲೂ ಬೆಳಗ್ಗಿನ ಉತ್ಸಾಹ. ಅನೇಕರಿಗೆ ತಾವು 'ಪ್ರಥಮ'ವನ್ನು ಮಾಡುತ್ತಿರುವ ಬಗ್ಗೆ ಅಭಿಮಾನ. ಆದರೆ ಕಾಲ ಕಳೆದಂತೆ, ದಾರಿ ಸವೆದಂತೆ ನಿಸ್ತೇಜತೆ ಹೆಚ್ಚುತ್ತಿತ್ತು. ಆಗ ಇದಕ್ಕು ಹೆಚ್ಚಿನ ಸವಾಲಿನ ಕುದುರೆಮುಖದೆದುರು ಮರ್ಯಾದೆ ಹೋಗಬಾರದೆಂದು ಮನಸ್ಸಿನ ಶಕ್ತಿಯನ್ನು ಕಾಲಿಗೆ ಧಾರೆಯೆರೆದು ಸಾಗುತ್ತಿದ್ದೆವು.

ಗುಡ್ಡ ಕಳೆದು ವಿರಳ ಕಾಡು ಸೇರಿದೆವು. ತಾಕತ್ತು, ಕಾಲ ಶೀಟಿಗೆ ಅನುಗುಣವಾಗಿ ಗುಂಪುಗಳಾಗಿ ಪರಸ್ಪರ ಅಂತರ ಹೆಚ್ಚುತ್ತಿದ್ದಂತೆ ಬೆಟ್ಟ ಒಮ್ಮೆಲೇ ಕಡಿದಾಯಿತು. ಸಾಲದ್ದಕ್ಕೆ ಬಂಡೆಯೊಂದು ಗೋಡೆಯಾಗಿ ಬಂತು. ಗುಂಪು ಹತ್ತಿರವಾಯಿತು. ಒಬ್ಬೊಬ್ಬರಾಗಿ ಜಾಗ್ರತೆಯಿಂದ ಮೇಲೇರಿದರು. ಕೆಲವರಿಗಂತೂ ಇದು ನಿರ್ಣಾಯಕ ಘಟ್ಟವಾಯಿತು. ಅಲ್ಲಲ್ಲಿ ಕಾಣುತ್ತಿದ್ದ ಕಾಡುಬಾಳೆ ಕೆಲವರಿಗೆ ಬಾಯಿ ನೀರೂರಿಸಿತು. ಚೀಲದಲ್ಲಿ ತುಂಬಿದ್ದ ನಾಡು ಬಾಳೆ ಹಣ್ಣು ನೀರಾಗಿತ್ತು. ನೀರು ಚೀಲ ಅರ್ಧ ಖಾಲಿಯಾಗಿತ್ತು. ಕಬ್ಬಿನ ಜಲ್ಲೆಗೆ ಹಲ್ಲು ಹೋಗಿತ್ತು. ದಾರಿಯ ನೆಲ್ಲಿಕಾಯಿ ಎಲ್ಲರ ಬಾಯಿ, ಜೋಬು ಸೇರಿತು. ನೆಲ್ಲಿಕಾಯಿ ನಡಿಗೆಗೆ ವರದಾನ—ಬಾಯಾರಿದವರಿಗೆ ನೀರಿನ ಸೆಲೆ, ಬಳಲಿದವರಿಗೆ ಉತ್ಸಾಹದ ನೆಲೆ.

ಎಂಟು ಗಂಟೆಯ ಸುಮಾರಿಗೆ ಒಂದು ಬೆಟ್ಟವನ್ನು ಪೂರೈಸಿ ಮೇಲೆ ಬಂದೆವು. ಬಲಭಾಗದಲ್ಲಿ ಮುಗಿಲೆತ್ತರಕ್ಕೆ ಎದ್ದುನಿಂತ ಮಹಾಗೋಡೆ ಹೊಸಬರಿಗೆ ದಿಗ್ಭ್ರಮೆ ಹುಟ್ಟಿಸಿತು. ಸಾವಿರಗಟ್ಟಲೆ ಅಡಿಯ ನೇರಜಾರು. ತುದಿಕಾಣದ ಮಾಟ. ಆ ಎತ್ತರ ಅಲ್ಲ. ಅದರಾಚೆ ಅದಕ್ಕಿಂತಲೂ ಎತ್ತರಕ್ಕೆ ಏರಬೇಕೆಂಬ ಕಲ್ಪನೆ ಕೆಲವರಿಗೆ ಕರಾಳ ಸ್ವಪ್ನವಾಯಿತು. ಕೆಲವರಿಗೆ ಸುಂದರ ಕನಸೂ ಆಯಿತು. ಲೆಕ್ಕದ ಮೇಷ್ಟ್ರು ಸೂತ್ರ ಹಚ್ಚಿ 'Energy' ಲೆಕ್ಕ ಹಾಕಿ ಗ್ಲುಕೋಸ್ ಸುರಕೊಂಡರು. ಕನ್ನಡ ಮೇಷ್ಟ್ರು ಸಾಹಿತ್ಯ ಸೃಷ್ಟಿಸಿದರು. ಹತ್ತು ನಿಮಿಷ ಸುಧಾರಿಸಿಕೊಂಡು ಮತ್ತೆ ಮುಂಬರಿದೆವು. ದೊಡ್ಡಮರಗಳ ಕಾಡುದಾರಿ. ಆಸರವರವೇ ಕಾಡು ಹರಬಿಯೊಳಗೆ ನಾವು ಸಾಗುತ್ತಿದ್ದೆವು. ಹುಲ್ಲುಗುಡ್ಡೆ ಬಂತು. ಘಾಟಿಯ ಗಡಸು ಏಕದಂ ಏರಿತು. ಏರುವವರ 'ದಂ' ಕೂಡ ಏರಿತು,

ಏದಿತು. ಹತ್ತು ಗಂಟೆಯ ಹೊತ್ತಿಗೆ ಸುಮಾರು ಮಟ್ಟಸ ಪ್ರದೇಶದಲ್ಲಿ ಚೀಲ ಇಳಿಸಿ, ಕಾಲುಚಾಚಿ ಕುಳಿತು ಮೂಸುಂಬಿ ತಿಂದು ಧನ್ಯರಾದೆವು.

ಮುಂದುವರಿದ ಸ್ವಲ್ಪ ಹೊತ್ತಿನಲ್ಲಿ ಕಗ್ಗಾಡು—ಸೂರ್ಯ ಇಣುಕದ ಕಾಡು ಬಂತು. ಸೆಖೆ ಎಂದು ಸ್ವೆಟ್ಟರ್ ತೆಗೆದವರಿಗೆಲ್ಲ ಇರುತ್ತಿದ್ದರೆ ತೊಂದರೆ ಇರಲಿಲ್ಲ ಎನಿಸತೊಡಗಿತು. ದಾರಿ ಮೇಲೆ ಕಾಟಿ ಸೆಗಣಿ, ಮುಳ್ಳುಹಂದಿಯ ಕಣೆ (ಆಸಕ್ತರ ಚೀಲ ಸೇರಿತು) ಇಲ್ಲಿ ನಾವು ಮಾತ್ರ ಅಲ್ಲ ಎಂಬುದನ್ನು ನೆನಪಿಸಿತು. ಹಾಗೆ ಸಾಗಿ ಕಾಡನ್ನು ಅಡ್ಡ ಹಾದು ಬೆಟ್ಟದ ಅಂಚಿಗೆ ಬಂದೆವು. ಇನ್ನು ನಮ್ಮ ನಡಿಗೆ ರಾಜಮಾರ್ಗದಲ್ಲಿ—ಬಲ್ಲಾಳರಾಯ ಕಡಿದ ಸುಖದ ಹಾದಿಯಲ್ಲಿ. ಬೆಟ್ಟದಾಚೆ ಇರುವ ತಗ್ಗು ಪ್ರದೇಶದಲ್ಲಿ ಸಂದರಾಜರು ಕೃಷಿ ರಾಜಕೀಯ ಮಾಡುತ್ತಿದ್ದರಂತೆ. ಆ ಕಾರಣ ಈ ಬದಿಯಿಂದ ಆ ಬದಿಗೆ ಕುದುರೆ ಜಾಡು.

ಸೂರ್ಯ ಪ್ರಖರತೆ ಏರುತ್ತಿತ್ತಾದರೂ ಎತ್ತರದ ತಂಪು ನಮ್ಮನ್ನು ರಕ್ಷಿಸುತ್ತಿತ್ತು. ಎದುರಿಗಿದ್ದ ಅದ್ಭುತವಾದ ಬೆಟ್ಟ, ಕೋಟೆಕೊತ್ತಳಗಳನ್ನು ನೆನಪಿಸಿ ಎಲ್ಲರನ್ನೂ ಆಕರ್ಷಿಸಿತು.ಕೆಲಹೊತ್ತು ಹಾಗೇ ಏರಿ, ಶ್ರೇಣಿಯ ತಗ್ಗಿನ ಜಾಗದಲ್ಲಿ ನೆತ್ತಿ ಸೇರಿ ಮುನ್ನೂರ ಮೂವತ್ತು ಡಿಗ್ರಿ ಪ್ರದಕ್ಷಿಣೆ ತಿರುಗಿ ಬೆಟ್ಟದ ಇನ್ನೊಂದು ಪಾರ್ಶ್ವದಲ್ಲಿ ಮುಂಬಂದೆವು. ನಮ್ಮವರ ಬಲ, ಛಲ ಕಡಿಮೆಯಾಗುತ್ತ ಬಂದಿರಬೇಕು. ಕೀರ್ತಿ ಹೆಚ್ಚೆಚ್ಚು ಫೋಟೋ ತೆಗೆಯ ಹೊರಟರು. ಸಂಪತ್‌ಕುಮಾರ್ ಹೆಜ್ಜೆ ಲೆಕ್ಕಮಾಡಹೊರಟರು.ಹುಲ್ಲು ಗುಡ್ಡದಲ್ಲಿ ಸುಮಾರಿಗೆ ಮಟ್ಟದಾರಿಯಲ್ಲಿ ಸಾಗಿ ಹನ್ನೊಂದು ಮುಕ್ಕಾಲಕ್ಕೆ ಒಂದು ನೀರ ಜಾಡಿಗೆ ಬಂದೆವು. ಚೀಲ ಇಳಿಸಿ, ಶೈತ್ಯೋಪಚಾರ ಮಾಡಿಕೊಂಡು ಉಚಿತವಾಗಿ ಬಂದ ಆಜಾದ್ ಬಿಸ್ಕತ್ತು ಸವಿದು ಸುಸ್ತು ಪರಿಹರಿಸಿಕೊಂಡೆವು.

ಸಣ್ಣ ಕಾಡನ್ನು ದಾಟಿ ಮುಂಬಂದಾಗ ಬಲ್ಲಾಳರಾಯದುರ್ಗ ಮೇಲಿಂದ ನಮ್ಮನ್ನು ನೋಡಿ ಹರಸಿತು. ಗುರಿ ಹತ್ತಿರವಾದ ಉತ್ಸಾಹದಿಂದ ಎಲ್ಲರಲ್ಲೂ ಹೊಸ ಶಕ್ತಿ ಸಂಚಾರವಾಯಿತು. ಗಿಡ್ಡಹುಲ್ಲು, ನಡುವಿನ ಉರುಳುಕಲ್ಲುಗಳನ್ನು ಲೆಕ್ಕಿಸದೆ ದುರ್ಗದಲ್ಲಿ ಪ್ರಥಮ ಹೆಜ್ಜೆಯಿಡುವ ಹೆಚ್ಚುಗಾರಿಕೆಗಾಗಿ ನಾ ಮುಂದು, ತಾ ಮುಂದೆಂದು ಓಡಿದೆವು. ಹನ್ನೆರಡು ಮುಕ್ಕಾಲರ ಸುಟಸುಟ ಮಧ್ಯಾಹ್ನ ನಾಲ್ಕು ಸಾವಿರದ ಒಂಭೈನೂರನಲವತ್ತಡಿ ಎತ್ತರದ ವಿಶಾಲಶಿಖರದ ಮೇಲಿನ ಕೋಟೆಯ ಸುತ್ತ ನಮ್ಮ ತಂಡ ನೆರೆಯಿತು. ಸುಮಾರು ಐದು ಎಕರೆ ಮಟ್ಟಜಾಗದಲ್ಲಿ ಎಂಟಡಿ ಐದಡಿ ಎತ್ತರದಪ್ಪದ ಕಾಡುಗಲ್ಲಿನ ಗೋಡೆಯೇ ಕೋಟೆ. ಸೌಂದರ್ಯ ದೃಷ್ಟಿಯಿಂದ ಇದಕ್ಕೆ ವೈಶಿಷ್ಟ್ಯವಿಲ್ಲವಾದರೂ ಈ ಎತ್ತರಕ್ಕೆ

ಎಂದೋ ಬಂದು ಕಟ್ಟಿದ ಸಾಹಸಕ್ಕೆ ಯಾರೂ ಬೆರಗಾಗಬೇಕು. ಅಲ್ಲೇ ಯಾರೋ ಊರಿದ್ದ ಹತ್ತಡಿಎತ್ತರದ ಸ್ತಂಭಕ್ಕೆ ತಂದ ಧ್ವಜವೊಂದನ್ನು ಬಿಗಿದು ವಿಜಯೋತ್ಸವ ಆಚರಿಸಿದೆವು.

ಹೊಟ್ಟೆ ಚುರುಚುರು ಹೇಳುತ್ತಿತ್ತು. ಪಕ್ಕದ ಕೊಳ್ಳಕ್ಕಿಳಿದು ಕಾಡಿನ ಮಧ್ಯದ ನೀರಿನ ಆಸರೆಯಲ್ಲಿ ಭೋಜನಾಸಕ್ತರಾದೆವು. ಸುಬ್ಬರಾಯರ ಉಡುಗೊರೆ ನಮ್ಮ ಒಡಲ ಉರಿಯನ್ನು ತಣಿಸಿತು. ಯಥೇಚ್ಛ ನೀರು ಕುಡಿದು ಕಾರ್ಯಕ್ರಮದ ಒಂದಂಗವನ್ನು ಯಶಸ್ವೀ ಪೂರೈಸಿದ ಸಂಭ್ರಮದಿಂದ ಎರಡು ಗಂಟೆಗೆ ದಕ್ಷಿಣದ ಬಂಡಾಜೆ ಅರ್ಬಿಯತ್ತ ಚುರುಕು ಹೆಜ್ಜೆ ಇಡತೊಡಗಿದೆವು.

ಸುಮಾರು ಒಂದು ಸಾವಿರ ಅಡಿ ಎರಡು ಮೈಲಿನ ಅಂತರದಲ್ಲಿ ಇಳಿಯುವ ಮಾರ್ಗ. ಹುಲ್ಲುಗುಡ್ಡೆಯ ಜಾಡು. ಕಾಲುಗಳು ಅಯಾಚಿತವಾಗಿ ಓಡು ತ್ತಿದ್ದವು. ಬೀಳದಂತೆ ದೇಹವನ್ನು ನಿಯಂತ್ರಿಸುವುದು ಮಾತ್ರ ನಮ್ಮ ಹೊಣೆ. ನಾಲ್ಕು ಗಂಟೆಗೆ ನಾವು ಹೆಸರರಿಯದ ಒಂದು ಎತ್ತರ ಶಿಖರವನ್ನು ಹತ್ತಬೇಕಾದ ಅನಿವಾರ್ಯತೆಗೆ ಮುಟ್ಟಿದೆವು. ಶಿಖರದ ಎಡ ಪಾರ್ಶ್ವದಲ್ಲಿ ಮೇಲೇರಿದೆವು. ಅದರ ಬಲಪಾರ್ಶ್ವ ನಾವು ದುರ್ಗಕ್ಕೆ ಹತ್ತಿ ಬಂದಿದ್ದ ಕಾಡಿನೆಡೆಗೆ ನೇರಜಾರು. ಎಡದ ಒಂದು ಮೂಲೆ ಆರಿಸಿ ಎಪ್ಪತ್ತು ಡಿಗ್ರಿ ಇಳುಕಲಿನಲ್ಲಿ ಜಾರತೊಡಗಿದೆವು. 'ಗುಡ್ಡೆಗೆ ಗುಡ್ಡೆ ಅಡ್ಡ' ಗಾದೆಯ ಅರ್ಥ ನಮಗಿಲ್ಲಿ ಸ್ಪಷ್ಟವಾಯ್ತು. ಮೂರ್ನಾಲ್ಕು ದೊಡ್ಡ ಸಣ್ಣ ಗುಡ್ಡಗಳನ್ನು ಕಳೆದ ಮೇಲೆ ಬಂಡಾಜೆ ಅರ್ಬಿಯ ಮೊದಲ ದರ್ಶನ ಸಾಧ್ಯವಾಯಿತು. ಗಂಟೆ ಐದು—ಅರ್ಬಿಸಮೀಪವೇ ಕಾಣಿಸು ತ್ತಿತ್ತು. ಆದರೆ ದಾರಿ? ಮತ್ತೆ ಬೆಟ್ಟವಿಳಿದು, ಕಾಡುದಾಟಿ, ಬೆಟ್ಟಬಳಸಿ ಮತ್ತೊಂದು ಕಾಡುತ್ತರಿಸಿ ಕೊನೆ ಬೆಟ್ಟಕ್ಕೆ ಅಡಿಯಿಟ್ಟೆವು. ದೊಡ್ಡ ಸಣ್ಣ ಕರಿ ಬಂಡೆಗಳ ಬೆಟ್ಟ. ಸಾವಕಾಶದ ಇಳಿಜಾರು. ಕೊನೆಯಿಂದ ಭೋರ್ಗರೆತ ಹೇಳಿತು —"ಇಲ್ಲಿರುವೆ ನಾನು ಜಲಪಾತ."

ಗಂಟೆ ಆರೂಕಾಲು. ಸೂರ್ಯ ಪಶ್ಚಿಮಾಂಬುಧಿಯಲ್ಲಿ ಪುಣ್ಯಸ್ನಾನಕ್ಕೆ ಸನ್ನಾಹ ಮಾಡುತ್ತಿದ್ದ. ನೀಲಿಮೆ ಕೆಂಪಿಗೆ ತಿರುಗಿತ್ತು. ಮಾರುತನು ತಣ್ಣಗಾಗು ತ್ತಿದ್ದ. ಅರ್ಬಿ, ಸುತ್ತಣ ದೃಶ್ಯ, ಸೂರ್ಯಾಸ್ತದ ಸೊಬಗು ಆ ಎತ್ತರದಿಂದ ನೋಡಿ ಸವಿಯುವ ಉಮೇದು ಎಲ್ಲರಿಗೂ ಇತ್ತಾದರೂ ಮೀರಿದಕಾಲದಲ್ಲಿ ನಾವು ಕರ್ತವ್ಯಾಸಕ್ತರಾಗಬೇಕಾಯಿತು. ಏರುವ ಚಳಿ, ಕಾಡುಪ್ರಾಣಿಗಳ ನಿರೋಧ, ಹಾಗೂ ಬೆಳಕಿಗಾಗಿ ಶಿಬಿರಾಗ್ನಿ ಅನಿವಾರ್ಯ. ಅರ್ಬಿಯಿಂದ ಸುಮಾರು ಐವತ್ತು ಹೆಜ್ಜೆ ಮೇಲೆ ಆಯಕಟ್ಟಿನ ಸ್ಥಳದಲ್ಲಿ ಭೀಮ ಮರಗಳನ್ನು ಒಟ್ಟಿ

ಬೆಂಕಿಯಿಟ್ಟೆವು. ರಾತ್ರಿ ಕಳೆಯಲು ಸಾಕಷ್ಟು ಸೌದೆ ಪಕ್ಕದಲ್ಲಿ ಕೂಡಿಟ್ಟೆವು. ರಾತ್ರಿ ಆಯಿತು. ಕಂಗೊಳಿಸುವ ದೂರದ ಕತ್ತಲಲ್ಲಿ ಧರ್ಮಸ್ಥಳ, ಉಜ್ರೆ, ಮಲ್ಲೇಶ್ವರಗಳ ದೀಪಮಾಲೆ ನಮ್ಮನ್ನು ನಿರುಕಿಸುತ್ತಿದ್ದವು.

ಮೂರು ಕಲ್ಲು—ಒಂದು ಒಲೆ. ದೊಡ್ಡಪಾತ್ರೆಯಲ್ಲಿ ತೋಡಿನ ನೀರು ಕುದ್ದು ಬಿಸಿ ಚಾಯ. ಬಿಸ್ಕೆಟ್, ಸುಡುಚಾಯ ಸುರುವಾಗುತ್ತಿದ್ದ ಚಳಿಯಲ್ಲಿ ಪರಮಾನಂದ. ಆ ಅವಸರದಲ್ಲೂ ನೀರ ಗುಂಡಿಯಲ್ಲಿ ಮುಳುಗಿ ಎದ್ದು ಕಲಂತು ಎಬ್ಬಿಸಿದ ಗರ್ವಿಗಳಿಗೆ ಶಿಬಿರಾಗ್ನಿ ವರದಾನ. ರಾತ್ರಿ ಆಹಾರ ಅವರವರದೇ ವ್ಯವಸ್ಥೆ. ಕೆಲವರು ಚೀಲ ಬಿಚ್ಚಿ ಸಿದ್ಧ ತಿನಿಸುಗಳನ್ನು ತಿಂದು ಹೊಟ್ಟೆಗಟ್ಟಿ ಮಾಡಿದರು. ಎರಡು ಪುಟ್ಟ ಗಂಜಿಕೇಂದ್ರ ಸ್ಥಾಪಿತವಾಗಿ ಬಿಸಿಗಂಜಿ, ಉಪ್ಪು, ಕಿಚಡಿಯ ಹೊಳೆಯೂ ಹರಿಯಿತು.

ಹುಲ್ಲುಹಾಸಿನ ಮೇಲೆ ತಂದ ಹಾಸುಗಳನ್ನು ಹರಡಿ ಹೊದಿಕೆಯಡಿ ಒಬ್ಬೊಬ್ಬರೇ ಮುರುಟ ತೊಡಗಿದರು. ಬೆಂಕಿಯ ಸುತ್ತ ಕುಳಿತ ಉತ್ಸಾಹಿಗಳು ಸಂಗೀತ ಸುಧೆ ಹರಿಸಿದರು. ಹತ್ತು ಗಂಟೆಗೆ ಎಲ್ಲರೂ ಕಡ್ಡಾಯವಾಗಿ ಮಲಗಿದರು. ಸರದಿಯ ಮೇಲೆ ಸಣ್ಣ ತಂಡಗಳು ಪಹರೆಗೆ ತೊಡಗಿದವು. ಮುಂಜಾವು ಮೂರರ ಸುಮಾರಿಗೆ ಕುಳಿರುಗಾಳಿ ಬೀಸತೊಡಗಿತು. ಮಂಜು ಸುರಿಯತೊಡಗಿತು. ಹೊದಿಕೆಗಳು ತೊಯ್ದುವು. ಬೆಂಕಿ ಪೌರುಷಹೀನವಾಯಿತು. ಗಡಗಡನೆ ನಡುಗುತ್ತ ನಾವು ಏಳಬೇಕಾಯಿತು. ಇನ್ನಷ್ಟು ಸೌದೆ ಹೂಡಿ ಅಗ್ನಿವರ್ಧನೆ ಮಾಡಿ ಚಳಿ ಕಾಸತೊಡಗಿದೆವು. ನಾಲ್ಕುಗಂಟೆಗೆ ಚಾ ತಯಾರಿ. ನಿತ್ಯಾಹ್ನಿಕಗಳನ್ನು ಹೆಪ್ಪುಗಟ್ಟಲು ತಯಾರಾದ ನೀರಿನಲ್ಲಿ ತೀರಿಸಿ ಐದುಗಂಟೆಗೆ ಚಾ ಹೀರಿ, ಅವರವರದೇ ತಿನಿಸುಗಳನ್ನು ತಿಂದುದಾಯಿತು.

ಸೂರ್ಯನ ಮುಂಬೆಳಕಿನೊಡನೆ ಅಬ್ಬಿಯೆಡೆಗೆ ನಡೆದು ಹಾಸು ಬಂಡೆಯ ಮೇಲೆ ಕುಳಿತು ಅಬ್ಬಿಯಬ್ಬರ ಕಂಡೆವು, ಕೇಳಿದೆವು. ನೀರು ಮೂರು ಸಣ್ಣ ಹಂತಗಳಲ್ಲಿ ಸುಮಾರು ಆರ್ನೂರಡಿಗೆ ಕಡಿಮೆಯಿಲ್ಲದ ಆಳಕ್ಕೆ ಧುಮುಕುತ್ತದೆ. ಎದುರಿನ ಕಾಡು ಸೂರ್ಯೋದಯವನ್ನು ನಮ್ಮಿಂದ ಬಚ್ಚಿಟ್ಟಿತ್ತು. ಪ್ರಪಾತದ ಕಗ್ಗಾಡಿನ ಹಸುರು ಸೀಳಿಹರಿವ ನೀರತೊರೆ, ಮುಂದಿನ ನೇರಜಾರಿನ ಬೃಹತ್ ಬೆಟ್ಟ, ಮೇಲೆ ಶುದ್ಧ ತಿಳಿನೀಲ ಆಗಸ ಮುಂಬೆಳಕಿನ ಕೆಲವು ಸುಂದರ ನೋಟ.

ಆರೂಮುಕ್ಕಾಲಕ್ಕೆ ಮತ್ತೆ ಶಿಬಿರದ ಬಳಿಗೆ ಬಂದೆವು. ಶಿಬಿರ ಜಾಗವನ್ನು ಸ್ವಚ್ಛ ಮಾಡಿದೆವು. ಕಾಡ್ಗಿಚ್ಚಿಗೆ ನಮ್ಮ ದೇಣಿಗೆ ಇರಬಾರದೆಂಬ ಪ್ರಜ್ಞೆಯಿಂದ

ಶಿಬಿರಾಗ್ನಿಯನ್ನು ತಣಿಸಿದೆವು. ಏಳು ಗಂಟೆಗೆ ಚೀಲಗಳನ್ನು ಮತ್ತೆ ಏರಿಸಿ ಬಿಡಾರ ಜಾಗವನ್ನು ಅಗಲಿದೆವು. ತೋಡನ್ನು ಬಂಡೆಗಳ ಮೇಲೆ ದಾಟಿ ಮೇಲೇರಿ ಎರಡು ದಿಬ್ಬಗಳನ್ನು ಕಳೆದು ಅರ್ಬಿಯ ಎಡಕ್ಕೆ ಬಂದೆವು. ಇಲ್ಲಿಗೆ ಅರ್ಬಿ ತೆರೆದು ಕಾಣು ತ್ತಿತ್ತು. ಮುಂದೆ ನೇರ ಕೊಳ್ಳದತ್ತ ಸುಮಾರು ಎಪ್ಪತ್ತೈದು ಡಿಗ್ರಿಯಲ್ಲಿ ಒಬ್ಬರ ಹಿಂದೊಬ್ಬರಂತೆ ಜಾಗ್ರತೆಯಾಗಿ ಸರಿಯತೊಡಗಿದೆವು. ಹುಲ್ಲುಗುಡ್ಡೆ ಯಿಂದ ದಟ್ಟ ಕಾಡಿಗೆ ನುಗ್ಗಿ ಮರಬಳ್ಳಿಗಳನ್ನು ಆಧರಿಸುತ್ತ ಕಾಲು ಜಾರಿಸುತ್ತ ಇಳಿದಿಳಿದು ಒಂಬತ್ತೂವರೆಗೆ ಬಂಡಾಜೆಯ ಪಾತ್ರಕ್ಕೆ ಬಂದೆವು.

ನೇತ್ರಾವತಿಯ ಮುಖ್ಯ ಮೂಲಗಳಲ್ಲಿ ಒಂದಾದ ಬಂಡಾಜೆ ನದಿ ಇಲ್ಲಿ ಸುಮಾರು ಹದಿನೈದಡಿ ಅಗಲದ ಪಾತ್ರವನ್ನು ಸೃಷ್ಟಿಸಿದೆ. ಅಲ್ಲಿ ದಣಿವಡಗಿಸಿ ಕೊಂಡು ಮತ್ತೆ ಪಯಣ-ನದಿಗುಂಟ ತಪ್ಪಲಿಗೆ. ಒಣಬಂಡೆಯಿಂದ ಬಂಡೆಗೆ ನೆಗೆದು, ಇಳಿದು, ಹಾರಿ, ತೆವಳಿ ಮುಂಬಂದೆವು. ಕಾಡಿನ ಹಸುರು ಬೆಳಕಿನಲ್ಲಿ ಒಂದೊಂದು ಬಂಡೆಯೂ ಕಲಾಸೃಷ್ಟಿ. ನೀರಿನ ಹರಿವು ಸುಂದರ ನೃತ್ಯ.

ನದಿಯ ಬಲದಡದಲ್ಲಿದ್ದ ನಾಗಬನವನ್ನು ಹತ್ತೂವರೆ ಗಂಟೆಗೆ ಹೊಕ್ಕೆವು. ವಿವಿಧ ರೂಪು, ಭಂಗಿಗಳಲ್ಲಿ ಕಡೆಯಲ್ಪಟ್ಟ ಹಲವು ನಾಗ ವಿಗ್ರಹಗಳು ಇಲ್ಲಿ ಚೌಕಾಕಾರದಲ್ಲಿ ನೆಡಲ್ಪಟ್ಟಿವೆ. ಅವನ್ನು ದಾಟಿ ಕಾಲು ದಾರಿಯಲ್ಲಿ ಸಾಗಿತು ನಮ್ಮ ಸಾಲು. ವಿರಳ ಕಾಡಿನಲ್ಲಿ ಹನ್ನೆರಡು ಗಂಟೆಯವರೆಗೂ ಇಳಿದು ಬೋಳು ಗುಡ್ಡೆಗೆ ಬಂದಾಗ ಸೆಖೆ, ಹಸಿವು, ಬಾಯಾರಿಕೆ ಮುಪ್ಪುರಿಗೊಂಡು ಕಾಡ ತೊಡಗಿತು. ಆಗಲೇ ನಮ್ಮ ಆಶಾಜ್ಯೋತಿ ವಳಂಬ್ರ ಎಲ್ಲಣ್ಣಗೌಡರ ಮನೆಯ ದರ್ಶನವಾಯಿತು. ನಮ್ಮ ವಿನಂತಿಯನ್ನು ಸ್ವೀಕರಿಸಿದ್ದ ಗೌಡರು ಆದರದಿಂದ ಸ್ವಾಗತಿಸಿದರು. ಭಾರ ಇಳಿಸಿ, ಬೂಟು ಕಳಚಿ ಸಡಿಲಾದೆವು. ಮುಖ ಕೈಕಾಲು ಗಳನ್ನು ತೊಳೆದು, ಕುಳಿತು, ಬಿಸಿ ಕುಸುಲಕ್ಕಿ ಗಂಜಿ, ಗೊಜ್ಜು, ಉಪ್ಪಿನಕಾಯಿ, ಮಜ್ಜಿಗೆ ಊಟವನ್ನು ಬಕಗೇಡಿಯ ತೆರದಿ ಕಬಳಿಸಿದೆವು.

ಕಾರ್ಯಕ್ರಮದ ಯಶಸ್ಸಿನ ಮುಖ್ಯ ಕಾರಣರಾದ ರಾಯರನ್ನೂ ಗೌಡರನ್ನೂ ಮನಸಾರೆ ವಂದಿಸಿ ಎರಡು ಗಂಟೆಗೆ ವಳಂಬ್ರಬಿಟ್ಟು ಎಲ್ಲರೂ ಅವರವರ ದಾರಿಯಲ್ಲಿ ಚದುರಿದೆವು. "ಕಷ್ಟಪಟ್ಟರೆ ಇಷ್ಟ ಸಿದ್ಧಿ"—ನಮ್ಮ ಸಾಹಸಕ್ಕೆ ಸಂದ ಸಂಭಾವನೆ. ಎಂದೂ ಮರೆಯದ ರಸಪ್ರಸಂಗ—"ಬಲ್ಲಾಳ ಬಂಡಾಜೆ ಸಂದರ್ಶನ."

ಎ. ಪಿ. ಚಂದ್ರಶೇಖರ

———

ಪ್ರತ್ಯಾಘಾತ ಹೊಡೆದ ವೆನಿಜುವೇಲದ ತೈಲ ಸಮೃದ್ಧಿ

ಪುಟ್ಟ ನಾಡಿನಲ್ಲಿ ಸಮೃದ್ಧ ತೈಲವಿದ್ದಲ್ಲಿ ಆರ್ಥಿಕವಾಗಿ ಆ ನಾಡಿಗೆ ಯಾವ ಚಿಂತೆಯೂ ತಟ್ಟದು, ಅಲ್ಲವೇ? ಇದು ಹೀಗೆಯೇ ಆಗಬೇಕೆಂದೇನೂ ಇಲ್ಲ. ವೆನಿಜುವೇಲ ತೈಲಸಮೃದ್ಧವಾಗಿದೆ. ಆದರೂ ಅದರ ವಾಣಿಜ್ಯನೇತಾರರು ಚಿಂತಾಪೀಡಿತರಾಗಿದ್ದಾರೆ. ದಿವಾಳಿಖೋರತನದ ಜಾರುನೆಲದಲ್ಲಿ ದೇಶ ಪತನವಾಗುತ್ತಿದೆ ಎಂಬ ಭಯ ಅವರನ್ನು ಕಾಡುತ್ತಿದೆ. ಕಾರಣ : ಅತ್ಯಧಿಕ ತೈಲಧನ, ಅತ್ಯಲ್ಪ ಕ್ರಮಬದ್ಧ ಯೋಜನೆ.

ಪ್ರಪಂಚದ ಆರ್ಥಿಕ ತಜ್ಞರು ಈ ವಿದ್ಯಮಾನವನ್ನು "ವೆನಿಜುವೇಲ ಪರಿಣಾಮ" ಎಂಬುದಾಗಿ ಹೆಸರಿಸಿರುವರು. ಇತರ ರಾಷ್ಟ್ರಗಳಿಗೆ ಇದು ಕಲಿಸುವ ಪಾಠ ಸ್ಪಷ್ಟವಾಗಿದೆ. ಉದಾಹರಣೆಗೆ: ತೈಲಸಮೃದ್ಧ ರಾಷ್ಟ್ರಗಳಾಗಿರುವ ಆಲ್ಜೀರಿಯಾ, ಇರಾಕ್ ಮತ್ತು ನೈಜೀರಿಯಾ ಈಗ ವೆನಿಜುವೇಲ ಪರಿಣಾಮದಿಂದ ನರಳುತ್ತಿವೆ—ಷಹಾನ ಪತನ ಪೂರ್ವ ಇರಾನಿನಂತೆ.

ತೈಲೋತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಹೆಚ್ಚಿನ ರಾಷ್ಟ್ರಗಳಿಗಿಂತ ವೆನಿಜುವೇಲದ ಸಂಪನ್ಮೂಲಗಳು ಸಮೃದ್ಧ ಮತ್ತು ವೈವಿಧ್ಯಪೂರ್ಣವಾಗಿದ್ದರೂ ಈ ದೇಶಕ್ಕೆ ಒದಗಿರುವ ದುಸ್ಥಿತಿ ನಿಜಕ್ಕೂ ಆಶ್ಚರ್ಯಕರ.

ಕ್ಯಾರಿಬ್ಬಿಯನ್ ಸಮುದ್ರಕ್ಕೂ, ಸಮಭಾಜಕಕ್ಕೂ ನಡುವೆ ವ್ಯಾಪಿಸಿರುವ ವೆನಿಜುವೇಲದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಅತಿ ಸಮೃದ್ಧವಾಗಿವೆ—ಕಿನಾರೆ ಅಂಚುಗಳಿಂದ ಕೂಡಿದ್ದು ಮೀನುಗಾರಿಕೆಗೆ ಪ್ರಶಸ್ತವಾದ ಕರಾವಳಿ ಪ್ರದೇಶಗಳು, ಮಹೋಗನಿ ಮತ್ತು ಇತರ ಗಡಸು ಮರಗಳಿಂದ ಕೂಡಿರುವ ಬೆಟ್ಟಗಳು, ಲಾನೋಸ್ ಎಂಬ ಹೆಸರಿನ ವಿಶಾಲ ಬಯಲುಗಳಲ್ಲಿ ಹುಲ್ಲು ಮೇಯುತ್ತಿರುವ ಜಾನುವಾರುಗಳ ಗುಂಪುಗಳು, ಕಬ್ಬಿಣ, ಕಲ್ಲಿದ್ದಲು ಮತ್ತು ಬಾಕ್ಸೈಟ್ ಖನಿಜಗಳ ಸಮೃದ್ಧ ನಿಕ್ಷೇಪಗಳು, ಜಲವಿದ್ಯುತ್ತಿಗಾಗಿ ಬಳಸಲಾದ ಹುಚ್ಚು ಹೊಳೆಗಳು ಇತ್ಯಾದಿ.

ಇಷ್ಟಲ್ಲದೆ, ವೆನಿಜುವೇಲಕ್ಕೆ ವರವೆನಿಸುವ ರಾಜಕೀಯ ಸ್ಥಿರತೆಯೂ ಉಂಟು. ಜನತಾ ಮತದಾನದಿಂದ ಆಯ್ಕೆ ಆಗಿರುವ ಸರಕಾರವಿದು. ಇಲ್ಲಿಯ ಜೀವನ ಮಟ್ಟಕ್ಕೆ ಲ್ಯಾಟಿನ್ ಅಮೆರಿಕದಲ್ಲೇ ಹೆಮ್ಮೆಯ ಸ್ಥಾನವಿದೆ.

೧೯೮೨ರ ಡಿಸೆಂಬರ್ ಮಾಹೆಯ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ರೋನಾಲ್ಡ್ ಷಿಲ್ಲರ್ ಅವರ "ವೆನಿಜುವೇಲಾಸ್ ಆಯಿಲ್ ಬೂಮ್ ದಟ್ ಬ್ಯಾಕ್ ಫೈರ್ಡ್" ಲೇಖನದ ಅನುವಾದ.

ಇಷ್ಟಿದ್ದರೂ "ಪಾಶ್ಚಾತ್ಯ ರಾಷ್ಟ್ರಗಳಿಗಿಂತ ಹೆಚ್ಚಿನ ಮತ್ತು ಸಮರ್ಥಿಸಲು ಅಸಾಧ್ಯವಾದ ಆರ್ಥಿಕ ಬಿಕ್ಕಟ್ಟು" ಎಂಬುದಾಗಿ ಟೈಮ್ಸ್ ಪತ್ರಿಕೆ ವಿವರಿಸಿದ ಆರ್ಥಿಕ ಮುಗ್ಗಟ್ಟು ಏಕೆ ಇಲ್ಲಿ ತಲೆದೋರಿದೆ? ೧೯೫೦ರ ದಶಕವನ್ನು ವಿಶ್ಲೇಷಿಸಿದಾಗ ಇದರ ಕಾರಣ ತಿಳಿಯುತ್ತದೆ. ಆ ವೇಳೆ ವೆನಿಜುವೇಲ ಪ್ರಪಂಚದ ಅತಿ ದೊಡ್ಡ ನಿರ್ಯಾತದಾರ ರಾಷ್ಟ್ರವಾಗಿತ್ತು. ಆದರೆ ಆಗ ಬಡ ಮತ್ತು ಶ್ರೀಮಂತ ಜನರ ನಡುವಿನ ಅಂತರ ಅಗಾಧವಾಗಿತ್ತು. ಕೃಷಿ ಹಾಗೂ ಇತರ ಉದ್ಯಮಗಳು ಮುದುಡಿಕೊಂಡಿದ್ದುವು. ೧೯೫೮ರಲ್ಲಿ ಸರ್ವಾಧಿಕಾರಿ "ಮಾರ್ಕೋಸ್ ಪೆರೆ ಜಿಮಿನಿಜ್" ಅಧಿಕಾರದಿಂದ ಎಸೆಯಲ್ಪಟ್ಟ ಮೇಲೆ ಆಯ್ಕೆಯಾದ ಹೊಸ ಸರಕಾರ ಬದಲಾವಣೆಗಳಲ್ಲಿ ತೊಡಗಿತು.

ಸ್ಥಿತಿಯನ್ನು ಉತ್ತಮಗೊಳಿಸಲು ಮೂರು ಕ್ರಮಗಳನ್ನು ಮುಖ್ಯವಾಗಿ ಕೈಗೊಳ್ಳಬೇಕಾಗಿತ್ತು. ಮೊದಲನೆಯದಾಗಿ ತೈಲೋದ್ಯಮದ ಮೇಲಿದ್ದ ಸರಕಾರದ ಹಿಡಿತವನ್ನು ಬಿಗಿಗೊಳಿಸುವುದು. ಎರಡನೆಯದಾಗಿ ಬ್ಯಾರಲ್ (ಪೀಪಾಯಿ) ಒಂದರ $ ೨ (ರೂ. ೧೦)ಕ್ಕಿಂತಲೂ ಕಡಿಮೆಯಾದ ತೈಲಬೆಲೆಯನ್ನು ಸ್ಥಿರೀಕರಿಸುವುದು. ಮೂರನೆಯದಾಗಿ ಎಂದಾದರೊಂದು ದಿನ ತೈಲ ನಿಕ್ಷೇಪಗಳು ಬರಿದಾಗಲೇಬೇಕು. ಆದಮೇಲೆ ಕೃಷಿ ಮತ್ತು ಇತರ ಉದ್ಯಮದ ಪ್ರಗತಿಗೆ ಆರ್ಥಿಕ ವ್ಯವಸ್ಥೆ ಏರ್ಪಡಿಸಬೇಕು. ದೇಶಕ್ಕೆ ಭದ್ರವಾದ ಆರ್ಥಿಕ ತಳಹದಿಯನ್ನು ಒದಗಿಸಬೇಕು. ಮುಂದೆ ಇವು ರಾಷ್ಟ್ರದ ಅಭ್ಯುದಯವನ್ನು ಕಾಪಾಡುತ್ತವೆ.

ಸರ್ವಾಂಗೀಣ ಅಭ್ಯುದಯ ಸಾಧಿಸಬೇಕಾದರೆ ಆಧಾರಭೂತ ಉದ್ಯಮಗಳಾದ ತೈಲ, ಪೆಟ್ರೋಕೆಮಿಕಲ್ಸ್, ಜಲವಿದ್ಯುತ್ ಕಾರ್ಯಾಗಾರ, ಲೋಹೋತ್ಪಾದನೆ, ಸಾಗಣೆ ಮುಂತಾದವನ್ನು ನಡೆಸಲು ಸ್ವತಂತ್ರ ಸರಕಾರೀ ಸಂಸ್ಥೆಗಳ ರಚನೆ ಅಗತ್ಯ. ಖಾಸಗೀ ಸಂಸ್ಥೆಗಳು ಕಟ್ಟುವ, ತಯಾರಿಸುವ, ಹಂಚುವ ಮತ್ತು ಚಿಲ್ಲರೆ ವ್ಯಾಪಾರ ಮಾತ್ರ ಮಾಡುವುವು. ಈ ರೀತಿಯ ಕಾರ್ಯಕ್ರಮವೇ ಇಂದಿಗೂ ವೆನಿಜುವೇಲದ ಅಭ್ಯುದಯದ ನೀಲನಕ್ಷೆ ಆಗಿರುತ್ತದೆ.

ಗಗನಕ್ಕೇರುವ ಬೆಲೆಗಳು: ಮೊದಲನೆಯ ಕ್ರಮವನ್ನು ಆಚರಣೆಗೆ ತರುವುದು ಸುಲಭವಾಗಿತ್ತು. "ಪರರಾಷ್ಟ್ರಗಳಿಗೆ ಹೊಸ ರೀತಿಯ ತೈಲ ವಿನಾಯಿತಿಗಳನ್ನು ಕೊಡುವುದಿಲ್ಲ ಮತ್ತು ಹಳೆ ವಿನಾಯಿತಿಗಳನ್ನು ಅವಧಿ ಮುಗಿದ ಬಳಿಕ ಮುಂದುವರಿಸುವುದಿಲ್ಲ" ಎಂಬುದಾಗಿ ೧೯೫೯ರಲ್ಲಿ ಸರಕಾರ ಪ್ರಕಟಿಸಿತು. ವೆನಿಜುವೇಲ ದೇಶದ ಪ್ರಜೆಗಳಿಗೆ ತರಬೇತಿ ಕೊಡಿಸಿ ಅವರಿಗೇ ಆಡಳಿತ ವಹಿಸಿ

ಕೊಡಬೇಕೆಂದು ಖಾಸಗೀ ಸಂಸ್ಥೆಗಳಿಗೆ ಆದೇಶ ನೀಡಿತು. ೧೯೭೪ರಲ್ಲಿ ರಾಷ್ಟ್ರ ವಿದೇಶೀ ಉತ್ಪಾದಕರಿಗೆ ರಿಯಾಯಿತಿ ಮತ್ತು ಪರಿಹಾರಗಳನ್ನು ರದ್ದುಗೊಳಿಸಿತು. ೧೯೭೬ರ ವೇಳೆಗೆ ತೈಲೋದ್ಯಮ ಸಂಪೂರ್ಣವಾಗಿ ರಾಷ್ಟ್ರೀಕೃತವಾಯಿತು.

ತೈಲಬೆಲೆಯನ್ನು ಸ್ಥಿರೀಕರಿಸುವುದು ಕಷ್ಟಸಾಧ್ಯವಾಗಿತ್ತು. ವೆನಿಜುವೇಲ ತೈಲಬೆಲೆಯನ್ನು ಏಕಪಕ್ಷೀಯವಾಗಿ ಏರಿಸಿದ್ದರೆ, ಉಳಿದ ತೈಲೋತ್ಪಾದಕ ರಾಷ್ಟ್ರಗಳು ಕಡಿಮೆ ಬೆಲೆಗೆ ತೈಲ ಮಾರಾಟ ಮಾಡುವ ಸಾಧ್ಯತೆ ಇತ್ತು.

೧೯೬೦ರಲ್ಲಿ ತೈಲಮಂತ್ರಿ ಜುಯನ್ ಫೇಜ್ಲೋ ಪಿರ್ಝ್ ಆಲ್ಫೋನ್ಸೋ ಸಕಲ ತೈಲರಾಷ್ಟ್ರಗಳ ಒಕ್ಕೂಟ ಕರೆದು "ಪೆಟ್ರೋಲ್ ರಫ್ತು ಮಾಡುವ ರಾಷ್ಟ್ರಗಳ ಸಂಸ್ಥೆ"ಯನ್ನು ರಚಿಸಿದ. ಅವನ ಉದ್ದೇಶ ಪ್ರಪಂಚದಲ್ಲಿ ತೈಲದ ಬೆಲೆ ಹೆಚ್ಚುವಂತೆ ಮಾಡುವ ನಿರ್ಬಂಧಿತ ತೈಲೋತ್ಪಾದನೆ.

ಮೊದಲಿಗೆ ಇದೊಂದು ಚರ್ಚಾಕೂಟದಂತಿತ್ತು. ಆದರೆ, ೧೯೭೩ರ ಅರಬ್-ಇಸ್ರೇಲಿ ಯುದ್ಧದ ತರುವಾಯ ಉತ್ಪಾದಕರ ಮನೋವೃತ್ತಿ ಬದಲಾಯಿತು. ಅರಬರು ಉತ್ಪಾದನೆಯನ್ನು ಕಡಿತಗೊಳಿಸಿ ಅಮೇರಿಕ ಹಾಗೂ ಹಾಲೆಂಡಿಗೆ ರಫ್ತು ಮಾಡುವುದನ್ನು ನಿಲ್ಲಿಸಿದರು. ಪಿಪಾಯಿಯೊಂದರ ಇದ್ದ $ ೩ (ರೂ. ೨೪) ತೈಲಬೆಲೆ $ ೫ಕ್ಕೆ (ರೂ. ೪೦) ಏರಿತು. ಕ್ರಮೇಣ ಒಕ್ಕೂಟದ ಶಕ್ತಿಯನ್ನು ಸ್ಪಷ್ಟವಾಗಿ ಗ್ರಹಿಸಿ ಪೆಟ್ರೋಲ್ ರಫ್ತು ಮಾಡುವ ದೇಶಗಳು ೧೯೮೧ರಲ್ಲಿ ಪಿಪಾಯಿಯೊಂದರ ಬೆಲೆಯನ್ನು $ ೩೪ಕ್ಕೆ (ರೂ. ೨೭೨) ಏರಿಸಿದುವು. ಪಿರ್ಝ್ ಅಲ್ಫೋನ್ಸೋನ ನಿರೀಕ್ಷೆಗೂ ಮೀರಿದ ಫಲಿತಾಂಶ ದೊರಕಿತು. ಉತ್ಪಾದನೆ ಕಡಿತಗೊಂಡರೂ ೧೯೭೨ರಲ್ಲಿ $ ೨ ಸಾವಿರ ಮಿಲಿಯನ್‌ಗಿಂತಲೂ (ರೂ. ೧,೬೦೦ ಕೋಟಿ) ಕಡಿಮೆಯಿದ್ದ ವೆನಿಜುವೇಲ ಸರಕಾರದ ತೈಲಾದಾಯ ೧೯೮೦ರಲ್ಲಿ $ ೧೫ ಸಾವಿರ ಮಿಲಿಯನ್ನಿಗೆ (ರೂ. ೧೨,೦೦೦ ಕೋಟಿ) ಜಿಗಿಯಿತು.

ದುಂದುಗಾರಿಕೆಯ ವೆಚ್ಚ : ಪೆಟ್ರೋ-ಡಾಲರುಗಳ ಚಲಾವಣೆ ಬಂದಾಗ ವೆನಿಜುವೇಲ ಔದ್ಯೋಗಿಕರಣಕ್ಕೆ ಸಿದ್ಧವಾಯಿತು. ೧೯೭೩ರಲ್ಲಿ ಹೊಸದಾಗಿ ಚುನಾಯಿಸಲ್ಪಟ್ಟ ಅಧ್ಯಕ್ಷ 'ಕಾರ್ಲೋಸ್' ಬೃಹತ್ತಾದ ಹೊಸ ಪೆಟ್ರೋಕೆಮಿಕಲ್, ಉಕ್ಕು, ಜಲವಿದ್ಯುತ್ ಯೋಜನೆಗಳಿಗೆ ಡಾಲರನ್ನು ಸುರಿದ. $ ೨-೩ ಸಾವಿರ ಮಿಲಿಯನ್ (ರೂ. ೧,೮೪೦ ಕೋಟಿ) ಹಣವನ್ನು ಬಂದರು, ಹೆದ್ದಾರಿ, ಕಾರಾಕಾಸಿಗೆ ಹವಾ-ನಿಯಂತ್ರಿತ ಒಳದಾರಿಗಳನ್ನು ರಚಿಸಲು ವಿನಿಯೋಗಿಸಿದ. ಅತ್ಯಲ್ಪ ಕ್ರಮಯೋಜನೆ, ಬೃಹತ್ ವೆಚ್ಚವನ್ನು ಅಷ್ಟು

ಹೇಗನೆ ಆ ಪುಟ್ಟ ರಾಷ್ಟ್ರ ನಿಭಾಯಿಸುವುದೇ?

ಉದ್ಯೋಗ ಹಾಗೂ ಇತರ ಬೇಡಿಕೆಗಳು ಗಗನಕ್ಕೇರಿವೆ. ಐದು ವರ್ಷಗಳಲ್ಲಿ ಸರಕಾರಿ ವೇತನಪಟ್ಟಿ $ ೩೦೦,೦೦೦ ದಿಂದ $ ೮೦೦,೦೦೦ಕ್ಕೆ ಹಿಗ್ಗಿದೆ. ರಾಜಧಾನಿಯಾದ ಕಾರಾಕಾಸಿನಲ್ಲಿ ದೊಡ್ಡ ದೊಡ್ಡ ಆಫೀಸು ಕಟ್ಟಡಗಳು, ದುಬಾರಿ ಮಾಲುಗಳ ಅಂಗಡಿಗಳು, ಸೌಧಗಳು ತಲೆಯೆತ್ತಿವೆ. ಪತ್ರಿಕೆಗಳಲ್ಲಿಯ ಜಾಹಿರಾತುಗಳಲ್ಲಿ "ಇಂದು ನಿನಗೆ ಯಾವುದನ್ನು ಕೊಳ್ಳಲು ಸಾಧ್ಯವಿದೆಯೋ ಅದನ್ನು ನಾಳೆವರೆಗೆ ಮುಂದೂಡಬೇಡ" ಎಂದು ಬರೆದಿರುವುದಕ್ಕೆ ಹೊಂದಿಕೊಂಡು ವೆನಿಜುವೇಲನರು ನಡೆಯುತ್ತಿರುವರು. ಇಂದು ವೆನಿಜುವೇಲನರು ದಕ್ಷಿಣ ಅಮೇರಿಕದ ಅತಿದೊಡ್ಡ ಖರ್ಚುಗಾರರು. "ಹೊನ್ನಿನ ಹೊಳೆಯ ಮೇಲೆ ನಿಂತುಕೊಂಡಿರುವ ಅನುಭವ, ನಮ್ಮ ಬಕೆಟುಗಳನ್ನು ಮುಳುಗಿಸಿ ನಮಗೆ ಎಷ್ಟು ಸಾಧ್ಯವೋ ಅಷ್ಟು ಎತ್ತಿಕೊಳ್ಳಲು ಹವಣಿಸುತ್ತಿರುವಾಗಲೇ ನಮ್ಮ ಕೈಮೀರಿ ಹೋಗುತ್ತಿರುವುದರ ಬಗ್ಗೆ ದುಃಖಿಸುವೆವು" ಎನ್ನುವನು ಒಬ್ಬ ವೆನಿಜುವೇಲ.

ಆರ್ಥಿಕ ಅಡಿಪಾಯ ಕೆಟ್ಟು, ದುಂದುಗಾರಿಕೆಯಿಂದಾಗಿ ಅಗತ್ಯವಲ್ಲದ ವಸ್ತುಗಳ ಬೆಲೆ ಸಾರ್ವಕಾಲಿಕ ದಾಖಲೆ ಸ್ಥಾಪಿಸಿದೆ. ಸರಕಾರೀ ಹತೋಟಿಯಿಂದಾಗಿ ಆಹಾರ ಹಾಗೂ ಇತರ ಅಗತ್ಯ ವಸ್ತುಗಳ ಬೆಲೆ ಅಸಹಜವಾಗಿ ಕಡಿಮೆ ಇರುವುದರಿಂದ ವ್ಯಾಪಾರ ಮೊಟಕಾಗಲು ಮೊದಲಾಯಿತು.

ಹೆಚ್ಚಿನ ವೇತನದ ಪ್ರಲೋಭನೆಯಿಂದ ಕೃಷಿಕರಾದ 'ಕಾಂಪೆಸಿನೋ' ಜನ ತಮ್ಮ ಭೂಮಿಯನ್ನು ಹಡಿಲುಬಿಟ್ಟು ಪೇಟೆಗಳಿಗೆ ಲಗ್ಗೆ ಹಾಕತೊಡಗಿದರು. ಶೇಕಡಾ ೮೦ರಷ್ಟು ಜನ ನಗರಗಳಲ್ಲಿ ವಾಸಮಾಡತೊಡಗಿದರು. ಒಂದು ಕಾಲದಲ್ಲಿ ಸ್ವಯಂಪೂರ್ಣವಾಗಿದ್ದ ದೇಶ ಈಗ ಶೇಕಡಾ ೬೦ಕ್ಕಿಂತಲೂ ಹೆಚ್ಚು ಆಹಾರವನ್ನು ಆಮದು ಮಾಡಿತು. ಬಂದ ನೀರು ಇದ್ದ ನೀರನ್ನು ಕೊಚ್ಚಿಕೊಂಡು ಹೋಗಿ ಒಣ ನೆಲವನ್ನು ಬಳುವಳಿಯಾಗಿ ಬಿಟ್ಟುದಕ್ಕೆ ಇದೊಂದು ನಿದರ್ಶನ.

ಈ ಆರ್ಥಿಕ ಮುಗ್ಗಟ್ಟಿನಿಂದ ನಗರಗಳ ಸುತ್ತ ಹಬ್ಬಿರುವ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡಜನ ಅತಿಯಾಗಿ ಬಳಲಿದರು. ಇಂದಿಗೂ ಪ್ರಸಕ್ತವಾಗಿ ಇರುವ ೧೯೭೫ರ ಸರಕಾರೀ ಅಧ್ಯಯನವೊಂದರ ಪ್ರಕಾರ ಶೇಕಡಾ ೭೦ರಷ್ಟು ಜನ ತೀವ್ರ ಆಹಾರದ ಅಭಾವಕ್ಕೊಳಗಾಗಿರುವರು ಮತ್ತು ಇದರಿಂದಾಗಿ ಶೇಕಡಾ ೧೨ರಷ್ಟು ಜನರಲ್ಲಿ ಮಾನಸಿಕ ಬೆಳವಣಿಗೆ ಕುಂಠಿತವಾಗಿದೆ. ಶಿಕ್ಷಣ

ಕಡ್ಡಾಯವಾಗಿದ್ದರೂ ಕೇವಲ ಮೂರನೇ ಎರಡರಷ್ಟು ಮಕ್ಕಳು ಮಾತ್ರ ಶಾಲೆಗೆ ಹೋಗುವರು.

ಎಲ್ಲೆ ಮೀರಿ ಬೆಳೆಯುತ್ತಿರುವ ಜನಸಂಖ್ಯೆ ರಾಷ್ಟ್ರದ ಸಮಸ್ಯೆಗಳನ್ನು ಜಟಿಲಗೊಳಿಸಿದೆ. ಶೇಕಡಾ ೩.೫ರಷ್ಟು ಜನನ ಪ್ರಮಾಣವಿರುವ ಈ ದೇಶ ಪ್ರಪಂಚದ ಅತಿ ಹೆಚ್ಚಿನ ಜನನ ಪ್ರಮಾಣದ ದೇಶಗಳಲ್ಲೊಂದಾಗಿದೆ. ನೆರೆಯ ಬಡರಾಷ್ಟ್ರಗಳಿಂದ ಕಾನೂನುಬಾಹಿರವಾಗಿ ಗಡಿದಾಟಿ ಬರುವ ಜನಸಮುದಾಯ ಆಹಾರ ಹಾಗೂ ಕೆಲಸಕ್ಕಾಗಿ ಅನ್ವೇಷಿಸತೊಡಗಿದೆ. ಪ್ರತಿವರ್ಷ ೪೦೦,೦೦೦ಕ್ಕಿಂತಲೂ ಹೆಚ್ಚು ಜನ ಬರುತ್ತಿರುವರು. ಆರೋಗ್ಯ ಸೇವಾ ವ್ಯವಸ್ಥೆ, ಸಾಮಾಜಿಕ ಸೌಕರ್ಯಗಳು, ಸಾಗಣೆ, ನೀರು ಮತ್ತು ಸ್ವಾಸ್ಥ್ಯಪರಿಪಾಲನೆ—ಎಲ್ಲೆಲ್ಲೂ ಅವ್ಯವಸ್ಥೆ ಹಣಕಿದೆ. ೧೪.೩ ಮಿಲಿಯನ್ ಜನರಲ್ಲಿ ಸುಮಾರು ಒಂದು ಮಿಲಿಯನ್ ಜನರಿಗೆ ಮನೆಮಠವಾಗಲಿ, ಉಡುಗೆತೊಡುಗೆಯಾಗಲಿ, ಸರಿಯಾದ ಶೌಚಾಗಾರಗಳಾಗಲಿ ಇಲ್ಲ. ಬಹುಶಃ ಎರಡು ಮಿಲಿಯನ್ ಅನಾಥ ಮಕ್ಕಳು ನಗರಗಳಲ್ಲಿ ಅಲೆದಾಡುತ್ತಿವೆ.

ಆರ್ಥಿಕತೆಯ ಅಜೀರ್ಣತೆ: ಏಕಾಏಕಿ ಬೆಳೆದ ಈ ಔದ್ಯೋಗೀಕರಣದ ಖರ್ಚನ್ನು ಗಗನಕ್ಕೇರಿದ ತೈಲಾದಾಯವೂ ಪೂರ್ತಿಯಾಗಿ ನಿಭಾಯಿಸಲಾರದೆ ಸರಕಾರ ಆರ್ಥಿಕ ಕೊರತೆಯನ್ನು ಪ್ರಥಮ ಬಾರಿಗೆ ಅನುಭವಿಸಿತು. ಏಕೆಂದರೆ, ಐದೇ ವರ್ಷಗಳಲ್ಲಿ ದೇಶದ ಸಾಲ $ ೧೫,೦೦೦ ಮಿಲಿಯನ್ನಿಗೆ (ರೂ. ೧೨,೦೦೦ ಕೋಟಿ) ಏರಿತು. ಕೆಟ್ಟ ಯೋಜನೆ, ಕಡಿಮೆ ಉತ್ಪಾದನೆ, ಭ್ರಷ್ಟಾಚಾರ, ರಾಜಕೀಯವಾಗಿ ನೇಮಿಸಲ್ಪಟ್ಟ ಅನನುಭವಿ ಹಾಗೂ ಅಸಮರ್ಥ ಅಧಿಕಾರಿಗಳು—ಇತ್ಯಾದಿ ಕಾರಣಗಳಿಂದ ದಿಗಿಲು ಹುಟ್ಟಿಸುವ ಪ್ರಮಾಣದಲ್ಲಿ ಸರಕಾರಿ ಉದ್ಯಮಗಳು ಹಣ ಕಳೆದುಕೊಂಡು ದಿವಾಳಿ ಅಂಚಿನಲ್ಲಿದ್ದು, ಜೀವಹಿಡಿದಿಡಲು ಪರದೇಶದಿಂದ ಪಡೆದ ಸಾಲವನ್ನು ಅವಲಂಬಿಸಿವೆ.

ಸಂಸ್ಥೆಗಳು ವೇತನಗಳನ್ನು ಕೊಡಲು ಅಸಮರ್ಥವಾಗಿ ಉತ್ಪಾದನೆ ಮೊಟಕು ಆಗಿದೆ. ಕಾರಾಕಾಸಿನ ಒಳಚರಂಡಿಯ ಕೆಲಸ ಕುಂಠಿತವಾಗಿದೆ. "ಗುರಿ"ಯ ಜಲ ವಿದ್ಯುತ್ ಕಾರ್ಯಾಗಾರ ನಿರ್ಮಾಣ ನಿಗದಿ ಪಡಿಸಿದುದಕ್ಕಿಂತಲೂ ಬಹಳಷ್ಟು ಹಿಂದೆ ಬಿದ್ದಿದೆ.

೧೯೭೮ರಷ್ಟರಲ್ಲಿ ಆರ್ಥಿಕ ಪ್ರಗತಿ ನಿಲುಗಡೆ ಹೊಂದಿತು. ವೆನಿಜುವೇಲನರು ಆಕ್ಷನ್ ಡೆಮೋಕ್ರೆಟಿಕ್ ಪಕ್ಷದ 'ಆ್ಯಂಡ್ರೇಸ್ ಪಿರಿಝ್'ನನ್ನು ತೆಗೆದುಹಾಕಿ ಪ್ರತಿಪಕ್ಷ ಸೋಷಿಯಲ್ ಕ್ರಿಶ್ಚಿಯನ್ ಪಕ್ಷದ 'ಲೂಯಿಸ್ ಹೆರ್ರೇರಾ ಕ್ಯಾಂಪಿ'

ನನ್ನು ಆಯ್ಕೆ ಮಾಡಿದರು. ಆದರೆ ಹೆರ್ರೇರಾ ಸರಕಾರ ಇನ್ನೂ ಹೆಚ್ಚು ಅದಕ್ಷತೆಯನ್ನು ಪ್ರದರ್ಶಿಸುತ್ತಿದೆ. ೧೯೭೪ರ ಮತ್ತು ೧೯೮೦ರ ನಡುವೆ ವಾರ್ಷಿಕ ಆದಾಯ ಶೇಕಡಾ ೧೦೦ರಷ್ಟು ಏರಿದರೆ ಸರಕಾರಿ ವೆಚ್ಚ ಇನ್ನಷ್ಟು ಏರಿತು. ೫೦೦,೦೦೦ಕ್ಕಿಂತಲೂ ಹೆಚ್ಚು ಜನ ಆಡಳಿತ ವ್ಯವಸ್ಥೆಯಲ್ಲಿ ಸೇರಿಕೊಂಡರು. ವೆನಿಜುವೇಲದ ೫ ಮಿಲಿಯನ್ ಕಾರ್ಮಿಕರಲ್ಲಿ ಶೇಕಡಾ ೧೦ರಷ್ಟು ಜನ ನಿರುದ್ಯೋಗಿಗಳು. ಅಲ್ಯೂಮಿನಿಯಮ್ ಸಂಸ್ಥೆ ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ಆದಾಯ ತೋರಿಸಿದರೂ ಇತರ ಎಲ್ಲ ಸರಕಾರಿ ಸಂಸ್ಥೆಗಳು ನಷ್ಟವನ್ನೇ ತೋರಿಸಿದುವು.

ವೆನಿಜುವೇಲದವನೊಬ್ಬನ ಪ್ರಕಾರ ಈ ತೊಂದರೆಗಳಿಗೆ ಮೂಲ ಕಾರಣ "ಆರ್ಥಿಕತೆಯ ಅಜೀರ್ಣತೆ". ಇದು ಅತ್ಯಧಿಕ ಹಣವನ್ನು ಅತಿ ಬೇಗನೇ ನುಂಗುವುದರಿಂದ ಬರುವುದು. "ಅದ್ಭುತವಾದ ತೈಲಾದಾಯ ನಮ್ಮ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುವಂತೆ ಮಾಡಿತು". ಪೆರೆಝ್ ಆಲ್ಫೋನ್ಸೋ ಅವನ ಸಾವಿಗೆ ಮುನ್ನ ೧೯೭೯ರಲ್ಲಿ ಈ ರೀತಿ ಹೇಳಿದುಕೊಂಡಿದ್ದನು. —"ಆದಾಯವನ್ನು ಯಾವುದೇ ರೀತಿಯಲ್ಲಿ ಹೂಡಿಕೆ ಹಾಕಿದರೂ ಅದಾಗಿಯೇ ದೇಶದ ಹಿತಕ್ಕಾಗಿ ಮರುಲಾಭವನ್ನು ಕೊಡುವುದು ಎಂಬ ತಪ್ಪು ಗ್ರಹಿಕೆಯನ್ನು ಹೊಂದಿದ್ದೆವು. ಈಗ ನಾನು ನೋಡುತ್ತಿರುವಂತೆ ಫಲಿತಾಂಶ ವ್ಯತಿರಿಕ್ತವಾಗಿದೆ".

ಹುಚ್ಚುಗತಿಯಲ್ಲಿ ಹೆಜ್ಜೆಯಿಡುತ್ತಿದ್ದ ಔದ್ಯೋಗೀಕರಣ ಶೀಘ್ರವಾಗಿ ರಾಷ್ಟ್ರದ ನುರಿತ ಅಧಿಕಾರಿ ಮತ್ತು ಪರಿಣಿತ ತಾಂತ್ರಿಕ ವರ್ಗದವರನ್ನೆಲ್ಲಾ ಸೆಳೆದುಕೊಂಡಿದೆ. ಹೊಸ ವಿಭಾಗಗಳಿಗೆ ಮುಖ್ಯಸ್ಥರಾಗಿ ಬಡ್ತಿಗೊಂಡ ಈಗಷ್ಟೇ ಶಾಲೆಗಳಿಂದ ಹೊರಬಂದ, ಅನನುಭವಿ ಹುಡುಗರನ್ನು ನೇಮಿಸಿದ್ದರಿಂದ ಉಕ್ಕಿನ ಉದ್ಯಮ ಶೇಕಡಾ ೨೯ರಷ್ಟು ಉತ್ಪಾದನಾ ಕಡಿತ ಅನುಭವಿಸಿತು.

ವೆನಿಜುವೇಲಕ್ಕೆ ತೈಲ ಮಾರಾಟದಲ್ಲಿ ತೊಂದರೆ ಇಲ್ಲದೆ, ತೈಲ ಬಾಹುಳ್ಯದ ಇಂದಿನ ದಿನಗಳಲ್ಲೂ ತೈಲ ಬರಿದಾಗುವ ದಟ್ಟ ಛಾಯೆ ಆ ದೇಶದ ಮೇಲೆ ಹಬ್ಬಿಕೊಂಡಿದೆ. ಈ ಶತಮಾನದ ಅಂತ್ಯದಷ್ಟರಲ್ಲಿ ಈಗ ೬೦ ವರ್ಷಗಳಷ್ಟು ಹಳೆಯದಾದ ಲೇಕ್ "ಮಾರಾಕೈಬೋ" ತೈಲನಿಕ್ಷೇಪಗಳು ಬರಿದಾಗಿ ಕೇವಲ ಈ ರಾಷ್ಟ್ರದ ಬೇಡಿಕೆಯನ್ನೇ ಪೂರೈಸಲು ಕಷ್ಟಸಾಧ್ಯವಾಗಬಹುದು. ಹೊಸ ಅನ್ವೇಷಣೆಯಿಂದ ಕೆರಿಬ್ಬಿಯನ್ ತೀರದಲ್ಲಿ ಸ್ವಲ್ಪ ಪ್ರಮಾಣದ ಅನಿಲದ ಶೋಧನೆಯಾಯಿತು. ಓರಿನೋಕೋ ನದಿ ದಂಡೆಯ ವಿಶಾಲವಾದ ತೈಲಪಟ್ಟಿಯನ್ನು ತೀವ್ರವಾಗಿ ಪರೀಕ್ಷಿಸಲಾಗುತ್ತಿದೆ. ಆದರೆ ಇಲ್ಲಿಯ ಕಚ್ಚಾತೈಲ ಡಾಂಬರಿ

ನಂತೆ ಅಂಟಾಗಿರುವುದರಿಂದ (ಸ್ನಿಗ್ಧತ್ವವನ್ನು ಹೊಂದಿದುದರಿಂದ) ಮೇಲಕ್ಕೆ ಎಳೆಯಲು ಅಗಾಧ ವೆಚ್ಚ ತಗಲುವುದು.

ವೆನಿಜುವೇಲದ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಸಂಯಮ ಮತ್ತು ಮಿತವ್ಯಯದಿಂದಲೇ ಎದುರಿಸಬೇಕಷ್ಟೆ.

ಹೀಗಿದ್ದರೂ ದೇಶದ ಪರಿಸ್ಥಿತಿಯ ಬಗ್ಗೆ ಹತಾಶರಾಗಬೇಕಿಲ್ಲ. ಇಪ್ಪತ್ತೈದು ವರ್ಷಗಳಿಂದಲೂ ನೀಗದ ಕೊರತೆಯಾಗಿದ್ದ ಸರಕಾರಿ ಪೆಟ್ರೋಕೆಮಿಕಲ್ ಉದ್ಯಮ ಆದಾಯವನ್ನು ತೋರಿಸಲು ಮೊದಲಾಯಿತು. ಇಲ್ಲಿ ರಾಜಕೀಯತೆಯಿಂದ ನೇಮಿಸಲ್ಪಟ್ಟವರನ್ನು ಓಡಿಸಿ ಅವರ ಸ್ಥಾನಕ್ಕೆ ಸರಿಯಾದ ಕಾರ್ಯನಿರ್ವಾಹಕರನ್ನು ನೇಮಿಸಿ ವೇತನವನ್ನು ಕಡಿಮೆ ಮಾಡಿ ಉತ್ಪಾದನೆಯನ್ನು ಹೆಚ್ಚಿಸಿದರು. ಇತರ ಉದ್ಯಮಗಳನ್ನೂ ಇದೇ ರೀತಿ ಉಳಿಸಿಕೊಳ್ಳಬಹುದು.

ಇತರ ದಕ್ಷಿಣ ಅಮೇರಿಕನರಿಗಿಂತ ವೆನಿಜುವೇಲನರು ಇಂದಿಗೂ ಉತ್ತಮ ಜೀವನ ನಡೆಸುತ್ತಿದ್ದರೂ ತಮ್ಮ ದೇಶದ ಭವಿಷ್ಯ ಮತ್ತು ಸರಕಾರ—ಇದು ಯಾವುದೇ ಪಕ್ಷದ್ದಾಗಿರಲಿ—ಇವುಗಳ ಬಗ್ಗೆ ವಿಶ್ವಾಸ ಹಿಂದೆಂದೂ ಕಾಣದಷ್ಟು ಮಾಸಿಕೊಂಡಿದೆ. 'ರೆಸುಮೆನ್' ಪತ್ರಿಕೆಯ ಸಂಪಾದಕ ಈ ರೀತಿ ಹೇಳುತ್ತಿದ್ದಾನೆ. —"ಓರಿನೋಕೋ ಮತ್ತು ಹೊರ ಕಿನಾರೆಯ ತೈಲನಿಕ್ಷೇಪ ಫಲಕರವಾಗದಿದ್ದಲ್ಲಿ ವೆನಿಜುವೇಲದ ಸ್ಥಿತಿ 'ಎಲ್ ಸಾಲ್ವಡಾರ್'ಗಿಂತ ಭಿನ್ನವಾಗಿರಲು ಸಾಧ್ಯವಿಲ್ಲ". ಬಹು ಜನರು ಈ ಭಾವನೆಯನ್ನೇ ಹೊಂದಿದ್ದಾರೆ.

ವಿಜಯಾ ಎಚ್. ಹೆಗ್ಡೆ



ದುಷ್ಕೃತ್ಯಗಳನ್ನು ಅಳೆಯುವುದು ಅವುಗಳ ಫಲದ ಮಾನದಂಡದಿಂದಲ್ಲ,
ಮಾಡಿದವರ ಯೋಗ್ಯತೆಯ ಮಾನದಂಡದಿಂದ.

—ಸಿಸಿರೋ

ನಮ್ಮ ಶತ್ರು ಆ ಕ್ಷಯ ರೋಗಾಣು

ಕ್ಷಯರೋಗ ನಿವಾರಣಾ ಕಾರ್ಯಕ್ರಮವು ಕ್ಷಯರೋಗ ಮತ್ತು ರೋಗಿಗಳನ್ನು ಕಂಡು ಹಿಡಿದು ಮಾಡುವ ಹೋರಾಟವೆಂದು ಭಾವಿಸಲಾಗಿದೆ. ಆದರೆ ಇದು ಒಂದು ಪಾರ್ಶ್ವದ ಹೋರಾಟವಾಗಿ ಪರಿಣಮಿಸಿ ರೋಗಿಗಳನ್ನು ಕಂಡು ಹಿಡಿದು ಔಷಧೋಪಚಾರ ಮಾಡುವುದೆಂದು ಅರ್ಥವಾಗುತ್ತದೆ. ನಮ್ಮ ನಿಜವಾದ ಹೋರಾಟ ಕ್ಷಯರೋಗವನ್ನು ಉತ್ಪತ್ತಿಮಾಡುವ ರೋಗಾಣುಗಳ ವಿರುದ್ಧ ಮಾತ್ರ. ಈ ಒಂದು ಯುದ್ಧದಲ್ಲಿ ಶತ್ರುವಿನ ವರ್ತನೆ, ಶತ್ರುವಿನ ಚಲನೆ, ಆತನ ಉದ್ದೇಶ ಮತ್ತು ಅವನನ್ನು ನಿಶ್ಶಕ್ತಿ ಮಾಡುವ ಕುರುಹುಗಳನ್ನು ಚೆನ್ನಾಗಿ ಅರಿತುಕೊಂಡಿದ್ದು ಸರಿಯಾದ ಯುದ್ಧವ್ಯೂಹವನ್ನು ರಚಿಸಿ ಹೋರಾಡಿದರೆ ಮಾತ್ರ ಆ ನಮ್ಮ ಶತ್ರುವಾಗಿರುವ ಕ್ಷಯರೋಗಾಣುವನ್ನು ತಡೆಹಿಡಿಯಲು ಸಾಧ್ಯ. ಕ್ಷಯರೋಗಾಣು ಮಾನವನ ಮೇಲೆ ಯುದ್ಧ ಮಾಡಲು ಬಂದಂತಹ ರೋಗಾಣು ಅಲ್ಲ. ಆದರೆ ಅದು ತನ್ನ ಉಳಿವಿಗಾಗಿ ಬದುಕಲು ಇದ್ದಂತಹ ರೋಗಾಣು. ಪ್ರಕೃತಿಯಲ್ಲಿ ಯಾವ ಜೀವಾಣುವಾಗಲಿ, ಸೂಕ್ಷ್ಮಾಣುವಾಗಲಿ, ಪ್ರಾಣಿಯಾಗಲಿ, ಸಸ್ಯವಾಗಲಿ, ಮಾನವನಾಗಲಿ ತಾನು ಸದಾ ಹೋರಾಡಿ ತನ್ನ ಬದುಕನ್ನು ಜೀವಂತವಾಗಿ ಇರಿಸಿಕೊಳ್ಳಲು ಸದಾ ಹೋರಾಡುತ್ತಿರುತ್ತವೆ. ಡಾರ್ವಿನ್‌ರವರು ಈ ಪ್ರಕೃತಿಯಲ್ಲಿ ನಡೆಯುವ ಘರ್ಷಣೆ ಮತ್ತು ಅದರ ಮುಖ್ಯ ಸಿದ್ಧಾಂತವೇನೆಂದರೆ ಯೋಗ್ಯವಾದ ಮತ್ತು ಅರ್ಹತೆಯುಳ್ಳ ವ್ಯಕ್ತಿ ಅಥವಾ ಪ್ರಕೃತಿಯ ಮುಖ್ಯ ಜೀವಾಣುಗಳು ಮಾತ್ರ ಬದುಕಿ ಉಳಿಸಲು ಸಾಧ್ಯವೆಂದು ಹೇಳಿದ್ದಾರೆ.

ಕ್ಷಯರೋಗಾಣುವಿನ ಬಗ್ಗೆ ನಮಗೆ ತಿಳಿದಿರುವುದೇನು?

ಕ್ಷಯರೋಗಾಣುಗಳ ಬಗ್ಗೆ ನಮಗೆ ಅಲ್ಪಸ್ವಲ್ಪ ಮಾತ್ರ ತಿಳಿದಿದೆ. ನಾವು ಅವನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಿ ಕಂಡುಹಿಡಿಯಬಹುದು. ಅವನ್ನು ಪ್ರಯೋಗ ಶಾಲೆಯಲ್ಲಿ ಅದಕ್ಕೆ ಬೇಕಾದ ಸಾಮಾನು ಸಲಕರಣೆಗಳನ್ನು ಒದಗಿಸಿ ಬೆಳೆಸಬಹುದು. ಹಾಗೂ ಈ ರೋಗಾಣುವಿನ ಚರ್ಯೆ ಮತ್ತು ಗುಣಗಳನ್ನು ಪ್ರಯೋಗ ನಾಳದಲ್ಲಿ ಬೆಳೆಸಿ ಮತ್ತು ಪ್ರಾಣಿಗಳ ಮೇಲೆ ಪ್ರಯೋಗ ಮಾಡಿ ಹೆಚ್ಚಿನ ಮಾಹಿತಿಯನ್ನು ತಿಳಿದಿದ್ದೇವೆ.

ಈ ಕೆಳಕಂಡ ಅತ್ಯುನ್ನತ ಮುಖ್ಯ ವಿಷಯಗಳನ್ನು ನಮ್ಮ ಗಮನದಲ್ಲಿಟ್ಟು

ಕೊಂಡು ಈ ಕ್ಷಯರೋಗಾಣುವಿನ ಬಗ್ಗೆ ಹೋರಾಡಬೇಕಾಗಿದೆ.

೧) ಕ್ಷಯರೋಗಾಣುವು ಸರ್ವಸಾಧಾರಣವಾಗಿ ನಿಧಾನವಾಗಿ ತನ್ನ ವಂಶಾಭಿವೃದ್ಧಿಯನ್ನು ಬೆಳೆಸುತ್ತದೆ. ಕೋಲಿ ಮತ್ತು ಸಾಲ್ಮೊನೆಲ್ಲ ರೋಗಾಣುಗಳ ಪ್ರತಿ ಅರ್ಧ ಗಂಟೆಯಲ್ಲಿ ಎರಡಾಗಿ ವಿಭಾಗವಾಗುತ್ತದೆ. ಈ ಒಂದು ಅಂಕುರಣ ಕಾಲವು ಕ್ಷಯರೋಗಾಣುವಲ್ಲಿ ೨೦ ಗಂಟೆಗಳಾಗಿರುತ್ತದೆ. ಈ ಒಂದು ಅಂಕುರಣ ಅವಧಿಯು ಕ್ಷಯರೋಗಾಣುವಿನ ದುರ್ಬಲ ಬಿಂದುವಾಗಿ ಪರಿಣಮಿಸಿದೆ.

೨) ಕ್ಷಯರೋಗಾಣುವು ಪ್ರಾಣಿಗಳ ಶರೀರದ ಹೊರಗಡೆ ಇದ್ದು ವೃದ್ಧಿಸಲು ಆಗುವುದಿಲ್ಲ. ಪ್ರಯೋಗನಾಳದಲ್ಲಿ ಅವನ್ನು ಬೆಳೆಸಲು ಸಾಧ್ಯ. ಆದರೆ ಅವು ವಾತಾವರಣದಲ್ಲಿ ಬದುಕಿ ಉಳಿಯಬಲ್ಲವು.

೩) ಭೌತಿಕ ಪರಿಸ್ಥಿತಿಯ ನಿಗಮದಲ್ಲಿ ಕೊಲ್ಲಲ್ಪಡುವ ಅನೇಕ ಸೂಕ್ಷ್ಮ ರೋಗಾಣುಗಳಿಗಿಂತ ಕ್ಷಯರೋಗಾಣುವು ಬಹುಮಟ್ಟಿಗೆ ಪ್ರತಿರೋಧ ಶಕ್ತಿಯನ್ನು ಪಡೆದಿದೆ. ಈ ಗುಣವನ್ನು ನಾವು ಸದುಪಯೋಗ ಪಡಿಸಿಕೊಂಡು ರೋಗಾಣುಗಳನ್ನು ಮಾದರಿಯ ರೂಪದಲ್ಲಿ ಬೆಳೆಸಲು ಅನುಕೂಲ ಮಾಡಿಕೊಂಡಿದ್ದೇವೆ. ಕಫದ ಮಾದರಿಯನ್ನು ಸೋಡಿಯಂ ಹೈಡ್ರಾಕ್ಸೈಡ್ ಅಥವಾ ಸಲ್ಫ್ಯೂರಿಕ್ ಆಸಿಡ್‌ನಲ್ಲಿ ಇಟ್ಟು ವರ್ತಿಸಿದರೆ ಅನೇಕ ಸೂಕ್ಷ್ಮಾಣುಗಳು ನಾಶವಾಗಿ ಕ್ಷಯರೋಗಾಣುಗಳು ಮಾತ್ರ ಉಳಿಯುತ್ತವೆ. ಕ್ಷಯರೋಗಾಣುಗಳು ಕಫದ ತುಂತುರುಗಳಾಗಿ ಒಣಗಿ ಧೂಳಿನ ಕಣಗಳಾಗಿದ್ದಾಗ್ಯೂ ಕೂಡ ಬೆಳಕು ಮತ್ತು ಪ್ರತ್ಯಕ್ಷ ಸೂರ್ಯ ರಶ್ಮಿಯು ಅಲ್ಪಕಾಲದಲ್ಲಿ ರೋಗಾಣುಗಳನ್ನು ಕೊಲ್ಲುತ್ತವೆ.

೪) ಪ್ರಾಣಿಗಳಲ್ಲಿ ಮಾಡಿದ ಪ್ರಯೋಗಗಳಲ್ಲಿ ಕ್ಷಯರೋಗಾಣುಗಳು ಪ್ರಾಣಿಗಳ ಅಂಗಾಂಶದಲ್ಲಿ ಮೂಲತಃ ವಿಶಾಕ್ತತೆಯನ್ನುಂಟುಮಾಡುವಲ್ಲಿ ಅತಿ ಕಡಿಮೆ ಅಂತಸ್ತನ್ನು ಹೊಂದಿರುವುದಾಗಿ ತಿಳಿದಿದೆ. ಈ ರೋಗಾಣುಗಳನ್ನು ಗಿನೀಪಿಗ್‌ಗಳಮೇಲೆ ಸ್ವಲ್ಪ ಕಾಲ ಹಾಯಿಸಿದಾಗ ಸಜೀವ ಕ್ಷಯರೋಗಾಣುಗಳು ಮೂಗಿನ ಮೂಲಕ ಶ್ವಾಸನಾಳವನ್ನು ತಲುಪಿ ಅಂಗಾಂಶದಲ್ಲಿ ನಿಧಾನವಾಗಿ ಪ್ರತಿಕ್ರಿಯೆಯನ್ನುಂಟುಮಾಡುತ್ತವೆ. ಈ ಪ್ರತಿಕ್ರಿಯೆಯು ರೋಗಾಣುಗಳು ವೃದ್ಧಿಸಿದಾಗ ಮಾತ್ರ. ಅಂದರೆ ೧೦ ರಿಂದ ೧೪ ದಿನಗಳಲ್ಲಿ ಅತಿ ಹೆಚ್ಚಾಗಿ ಕಾಣುತ್ತವೆ. ಈ ನಿಧಾನವಾದ ಪ್ರತಿಕ್ರಿಯೆಯು ಕ್ಷಯರೋಗಾಣುಗಳಿಗೆ ತಮ್ಮ ಕುಟುಂಬ

ವನ್ನು ಬೆಳೆಸಲು ಅನುಕೂಲಕರವಾಗಿದೆ. ರೋಗಾಣುಗಳು ಅಂಗಾಂಶದಲ್ಲಿ ತಲುಪಿದ ಎರಡು ವಾರಗಳ ಮೇಲೆ ಶರೀರದಲ್ಲಿ ಪ್ರತಿರಕ್ಷಕ ಶಕ್ತಿಯು ಉತ್ಪತ್ತಿಯಾಗುತ್ತದೆ. ತದನಂತರ ರೋಗಾಣುಗಳು ಕ್ರಮೇಣವಾಗಿ ಕುಂದುತ್ತಾ ಬರುತ್ತವೆಂದು ತಿಳಿದಿದೆ.

೫) ಕ್ಷಯರೋಗಾಣುಗಳು ಮೈಕೊಬ್ರೀ ಬ್ಯಾಕ್ಟೀರಿಯ ಎಂಬ ವಂಶದ ಗುಂಪಿಗೆ ಸೇರಿದವುಗಳಾಗಿವೆ. ಇವುಗಳಲ್ಲಿ ಮನುಷ್ಯರಲ್ಲಿ ಮತ್ತು ಪಕ್ಷಿಗಳಲ್ಲಿ ರೋಗವನ್ನುಂಟುಮಾಡುವ ಕ್ಷಯರೋಗಾಣುಗಳೆಂದು ಎರಡು ವಿಧಗಳಾಗಿವೆ. ಇವುಗಳಲ್ಲಿ ಮಾನವರಲ್ಲಿ ರೋಗವನ್ನುಂಟುಮಾಡುವ ಕ್ಷಯ ರೋಗಾಣುವಿನ ಬಗ್ಗೆ ಹೆಚ್ಚಾಗಿ ನಮ್ಮ ಗಮನವನ್ನು ಹರಿಸಬೇಕಾಗಿದೆ. ಕಾರಣ ಇದರಿಂದ ರೋಗೋತ್ಪತ್ತಿಯಾಗಿ ಜನಗಳು ಸಾವಿಗೀಡಾಗುವುದಲ್ಲದೆ ರೋಗವು ಒಬ್ಬರಿಂದ ಒಬ್ಬರಿಗೆ ಹರಡುತ್ತಾ ಇರುತ್ತದೆ.

ಕ್ಷಯ ರೋಗಾಣುಗಳ ಅಂಕುರಣ ಕಾಲ ಮತ್ತು ವಂಶಾಭಿವೃದ್ಧಿ

ಕ್ಷಯರೋಗಾಣು ತನ್ನ ವಂಶಾಭಿವೃದ್ಧಿಯನ್ನು ಬೆಳೆಸಲು ಹೋರಾಡುತ್ತದೆ. ಯಾವುದೇ ಜೀವಾಣುಗಳು ತಮ್ಮ ಬೆಳವಣಿಗೆಯನ್ನು ಯಥಾವತ್ತಾಗಿ ಬೆಳೆಸಿ ಸಾಕಷ್ಟು ಪ್ರಮಾಣದಲ್ಲಿದ್ದು ಬಾಳಿಬದುಕಿರುವುದು ಸಹಜ. ಹಾಗೆಯೇ ಈ ರೋಗಾಣುಗಳು ಯಾವ ವ್ಯಕ್ತಿಯಲ್ಲಿದ್ದು, ಆ ವ್ಯಕ್ತಿಯ ಅಂಗಾಂಶದಲ್ಲಿ ಬೆಳೆದು, ಬಾಳಿ ಬದುಕಿರುತ್ತದೆಯೋ ಆ ವ್ಯಕ್ತಿಯನ್ನು ರೋಗಾಣುಗಳು ಅತಿಥೇಯನನ್ನಾಗಿ ಬಳಸಿಕೊಳ್ಳುತ್ತವೆ. ಹೀಗೆ ಬೆಳೆದಂಥ ರೋಗಾಣುಗಳು ಆ ವ್ಯಕ್ತಿಯ ಶರೀರದಿಂದ ಹೊರ ಬಂದು ಇನ್ನೊಬ್ಬ ವ್ಯಕ್ತಿಯನ್ನು ಸೇರಿ ಆ ವ್ಯಕ್ತಿಯನ್ನು ಹೊಸ ಅತಿಥೇಯನನ್ನಾಗಿ ಮಾಡಿ ತಮ್ಮ ಬೆಳವಣಿಗೆಯನ್ನು ಸಾಗಿಸಿಕೊಳ್ಳುತ್ತವೆ.

ಸಮಾಜದಲ್ಲಿ ಕ್ಷಯ ರೋಗಾಣು ಹೆಚ್ಚಾಗಿದ್ದರೂ ಕೂಡ ರೋಗಾಣುಗಳಿಗೂ ಮತ್ತು ಮಾನವರಲ್ಲಿ ಅನೇಕ ತರವಾದ ಘಟನೆಗಳು ಸಂಭವಿಸುತ್ತಾ ಬಂದಿವೆ. ಆದರೆ ಈ ಘಟನೆಗಳು ಮಾನವನ ಕಣ್ಣಿಗೆ ಸರಿಯಾಗಿ ಕಾಣುವುದಿಲ್ಲ. ಹೀಗೆ ಕಾಣದಿರುವುದೇ ರೋಗಾಣುಗಳಿಗೆ ಸೂಕ್ತವಾಗಿ ಕಂಡು ಬಂದಿದೆ. ಹಾಗೂ ಸಮಾಜದಲ್ಲಿ ಅವು ಬಾಳಿ ಬದುಕಲು ಒಂದು ಮುಚ್ಚುಮರೆಯ ತೆರೆಯಾಗಿ ಮಾನವನಿಗೆ ಕಾಣದಂತಾಗಿದೆ.

ಮಾನವನ ಶರೀರದಲ್ಲಿ ಎರಡು ವಾರಗಳ ತನಕ ಸುಖವಾಗಿ ನಿರ್ಭಯವಾಗಿ ರೋಗಾಣುಗಳು ಜೀವಿಸುತ್ತಾ ಇರುತ್ತವೆ. ನಂತರ ಸೂಕ್ತವಾದ ಮತ್ತು ಸರಿಯಾದ ಪ್ರತಿರಕ್ಷಕ ರಚನೆಯು ಶರೀರದ ಅಂಗಾಂಶದಲ್ಲಿ ಹುಟ್ಟಿ ರೋಗಾಣು ಗಳ ಕ್ರಿಯೆಯನ್ನು ಪ್ರತಿಭಟಿಸಲು ಘರ್ಷಣೆ ನಡೆಯುತ್ತದೆ. ಇದಕ್ಕೆ ಆಂಟಿಜನ್ ಆಂಟಿಬಾಡಿ ಘರ್ಷಣೆಯೆಂದು ಕರೆಯುತ್ತೇವೆ. ಕೆಲವು ಸಮಯದಲ್ಲಿ ರೋಗಾಣು ಗಳಿಗೂ ಮತ್ತು ಶರೀರದ ಅಂಗಾಂಶದಲ್ಲಿ ನಡೆದ ಘರ್ಷಣೆಯಲ್ಲಿ ರೋಗಾಣು ಗಳನ್ನು ಅಂಗಾಂಶದ ಕೋಶಗಳು ನುಂಗಿ ನಾಶಮಾಡಬಹುದು; ಸರ್ವೇ ಸಾಮಾನ್ಯ ರೋಗಾಣುಗಳು ಕೋಶಗಳಲ್ಲಿಯೇ ಸಿಕ್ಕಿ ಬಿದ್ದು ಹೊರಗೆ ಬರಲಾಗದೆಯೂ ಹಾಗೂ ಗುಣವಾಗದೆಯೂ ಇರಬಹುದು. ಹೀಗಿರುವ ರೋಗಾಣುಗಳು ಜೀವಂತವಾಗಿದ್ದು ಕೋಶದಲ್ಲಿ ಸತ್ತಂತಿರುತ್ತವೆ. ಇವುಗಳನ್ನೇ ನಿರಂತರ ರೋಗಾಣುಗಳೆಂದು (ಪರ್ಸಿಸ್ಟರ್) ಕರೆಯುತ್ತೇವೆ. ಈ ನಿರಂತರ ರೋಗಿಾಣುಗಳು ವ್ಯಕ್ತಿಯ ಕೋಶದಲ್ಲಿನ ನಿಯಂತ್ರಕ ಶಕ್ತಿಯು ಕುಂದಿದಾಗ ತಮ್ಮ ವಂಶಾಭಿವೃದ್ಧಿಯನ್ನು ಮಾಡಲು ಅನುವಾಗುತ್ತವೆ. ಹೀಗೆ ಶರೀರದ ಶ್ವಾಸಕೋಶದ ಪುಪ್ಪಸವನ್ನು ಹೊಕ್ಕಂಥ ರೋಗಾಣುಗಳು ಅಂಗಾಂಶದಲ್ಲಿ ಬೆಳೆದು ಕೋಶಗಳನ್ನೆಲ್ಲಾ ಕೊಳೆಸಿ, ತೂತು ಅಥವಾ ಪೊಟರೆ ಮಾಡು (ಕ್ಯಾವಿಟಿ) ತ್ತವೆ. ಈ ಕೊಳೆತ ಅಂಶದಲ್ಲಿ ಲಕ್ಷಲಕ್ಷಾಂತರ ರೋಗಾಣುಗಳು ಇದ್ದು ವ್ಯಕ್ತಿಯಲ್ಲಿ ಕೆಮ್ಮನ್ನು ಉತ್ಪತ್ತಿ ಮಾಡಿ, ವ್ಯಕ್ತಿಯು ಕೆಮ್ಮಿದಾಗ ಶ್ವಾಸ ನಾಳದ ಮೂಲಕ ತುಂತುರು ತುಂತುರಾಗಿ ಹೊರಬಂದು ವಾತಾವರಣದಲ್ಲಿ ಹರಡುತ್ತವೆ.

ಕ್ಷಯರೋಗಾಣುಗಳು ಮಾನವನ ಸಂಗಡ ಯುದ್ಧ ಮಾಡಲು ಬಂದವು ಗಳಲ್ಲ. ಆದರೆ ಅವು ತಮ್ಮ ಉಳಿವಿಗಾಗಿ ಜೀವಿಸಲು ಇರುವ ರೋಗಾಣುಗಳು. ಈ ರೋಗಾಣುಗಳು ವಾತಾವರಣದಲ್ಲಿದ್ದು ವ್ಯಕ್ತಿಯ ಕರುಳುಗಳನ್ನು ಸೇರಿ ನೆಲೆಸಿದರೆ, ಕರುಳುಗಳಲ್ಲಿ ಮತ್ತು ಗ್ರಂಥಿಗಳಲ್ಲಿ ರೋಗಾಣುಗಳು ಗುಣಕವಾಗಿ ಕೋಶಗಳು ಕೊಳೆತು ಅಲ್ಲಿಯೇ ಇರಬೇಕಾಗುತ್ತದೆ. ಹೀಗಾಗುವುದರಿಂದ ಅವುಗಳ ಬೆಳವಣಿಗೆ ಅಲ್ಲಿಗೆ ನಿಂತು ಬೇರೆಯವರಿಗೆ ಹರಡಲು ಸಾಧ್ಯವಾಗುವುದಿಲ್ಲ. ಕ್ಷಯ ರೋಗಾಣುಗಳು ಶ್ವಾಸಕೋಶವನ್ನು ಬಿಟ್ಟು ಇತರೆ ಅಂಗಾಂಶಗಳನ್ನು ಸೇರಿದರೆ ಅವುಗಳ ನೆಲೆಯು ಸಾವಿನ ಅಂತ್ಯವಾಗಿ ಪರಿಣಮಿಸುತ್ತದೆ.

ಶ್ವಾಸಕೋಶದ ಖಾಯಿಲೆಯುಳ್ಳ ವ್ಯಕ್ತಿಯು ಒಂದು ವರ್ಷದಲ್ಲಿ ಕ್ಷಯ ರೋಗಾಣುಗಳನ್ನು ಹೊಂದಿ ಈ ರೋಗಾಣುಗಳು ಸುಮಾರು ಐದು ಯಶಸ್ವಿ

ಪ್ರಸರಣವನ್ನು ಉತ್ಪತ್ತಿ ಮಾಡುತ್ತವೆ. ಈ ಪ್ರಸರಣವು ಬೇರೆ ಗಾಳಿಯಲ್ಲಿ ರಡುವ ಇನ್‌ಫ್ಲೂಯೆನ್ಜಾ ಕಾಮನ್ ಕೋಲ್ಡ್ ಮೀಸಲ್ಸ್ ರೋಗಾಣುಗಳ ಂತ ಬಹಳ ಕಡಿಮೆ ಪ್ರಮಾಣದ್ದಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವು ಾದರೆ ಆ ರೋಗಗಳಿಗೆ ಹೋಲಿಸಿದಾಗ ಕ್ಷಯವು ಅಷ್ಟು ಸಾಂಸರ್ಗಿಕ ಖಾಯಿಲೆ ಯಾಗಿ ಕಾಣುವುದಿಲ್ಲ.

ಕ್ಷಯರೋಗಾಣುಗಳ (ಜರ್ಮಿನೇಷನ್ ಟೈಂ) ಅಂಕುರಣ ಕಾಲವು ಇಪ್ಪತ್ತು ಂಟೆಗಳಿಗೊಂದಾವರ್ತಿ ನಡೆಯುತ್ತದೆ. ಈ ರೋಗಾಣುಗಳು ೧೦ರಿಂದ ೧೪ ನಗಳ ತನಕ ಅಂಗಾಂಶದ ಕೋಶದಲ್ಲಿದ್ದು ತಮ್ಮ ವಂಶಾಭಿವೃದ್ಧಿ ಮಾಡು ತ್ತಿರುತ್ತವೆ. ಹೀಗೆ ನಡೆಯುವ ಕ್ರಿಯೆಯನ್ನು ಗಮನಿಸಿ ನೋಡಿದಾಗ ೧೨ ಮತ್ತು ೧೭ ಅಂಕುರಣ ಕಾಲದಲ್ಲಿ ರೋಗಾಣುವಿನ ವಂಶವು $೨^{೧೨}$=೪೦೯೬ (ಸು. ೪,೦೦೦-೦೦) ಮತ್ತು $೨^{೧೭}$=೧೩೧೦೭೨ (ಸು. ೧,೦೦,೦೦೦-೦೦) ಅನುಕ್ರಮವಾಗಿ ಬೆಳೆಯುತ್ತವೆ. ಹೀಗೆ ಬೆಳೆದಂಥ ರೋಗಾಣುಗಳು ಶ್ವಾಸ ಕೋಶದಲ್ಲಿ ಪ್ರತಿಕ್ರಿಯೆಯನ್ನು ನಡೆಸಿ ಮೂರು ದಿನಗಳ ನಂತರ ಗಂಟನ್ನು (ನಾಡ್ಯೂಲ್) ಉತ್ಪತ್ತಿ ಮಾಡಿ ತದನಂತರ ಅಂಗಾಂಶದಲ್ಲಿ ಕೊಳೆತು ಕಫದಲ್ಲಿ ರೋಗಾಣುಗಳು ಕೆಮ್ಮಿದಾಗ ಹೊರ ಬರುತ್ತವೆ. ಇಂತಹ ಕಫವನ್ನು ಶುಚಿಯಾದ ಜಾರುಗಾಜಿನ ಮೇಲೆ ಮಧ್ಯಭಾಗದಲ್ಲಿ ಒಂದು ನಯಾ ಪೈಸೆಯ ಅಗಲ ಬಳಿದು ಒಣಗಿಸಿ ಜೀಲ್ ನೀಲ್‌ಸನ್ ಸ್ಟೈನ್ ಪ್ರಕಾರ ಅನಿಲೀನ್ ಡೈಗಳನ್ನು ಹೊದಿಸಿ ಕರಿ ಮಾಡಿದ ನಂತರ ಜಾರುಗಾಜನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಿ ದಾಗ ಮೆಥಿಲಿಯನ್ ಬ್ಲೂನ ನೀಲಿಯ ಹಿಂಬದಿಯಲ್ಲಿ ಕಾರ್ಬಾಲ್ ಫಕ್ಸಿನ್ ನನ್ನು ಹೀರಿಕೊಂಡು ರೋಗಾಣುಗಳು ತುಂಡುತುಂಡಾದ ಕೆಂಪುಕಡ್ಡಿಗಳಂತೆ ಕಾಣುತ್ತವೆ.

ಡಾ॥ ಜಿ. ಎಕ್ಕೇಶ್ವರಯ್ಯ

ದೋಷಗಳನ್ನು ಕಾಣುವುದು ಸುಲಭವಾದರೂ ಅವನ್ನು ಸಾಧಿಸುವುದು ಕಷ್ಟ. ಗುಣಗಳನ್ನು ಕಾಣುವುದು ಕಷ್ಟವಾದರೂ ಸಾಧಿಸುವುದು ಸುಲಭ. ಆದುದರಿಂದ ಗುಣವನ್ನೇ ಅರಸಿ ಅದನ್ನು ಪ್ರಶಂಸಿಸುವುದು ಉಪ ಯುಕ್ತವೂ ಸುಲಭವೂ ಆಗಿದೆ.

—ಪರಮಹಂಸ

ಬೆಚ್ಚುಗೊಂಬೆ

ನಮ್ಮ ಸಂಸ್ಕೃತಿಯಲ್ಲಿ 'ಬೆಚ್ಚುಗೊಂಬೆ'ಯು ಕಲ್ಪನೆ ವಿಶಿಷ್ಟವಾಗಿದೆ. ಗ್ರಾಮೀಣ ಮತ್ತು ನಾಗರಿಕ ಪರಿಸರದಲ್ಲಿ ಅವುಗಳ ಬಳಕೆಯನ್ನು ಎರಡು ಹಂತಗಳಲ್ಲಿ ಕಾಣಬಹುದು. ರೈತರು ತಾವು ಬೆಳೆದ ಸಮೃದ್ಧ ಬೆಳೆಯನ್ನು, ಮಾಗಿದ ಹಣ್ಣು ಮತ್ತು ತರಕಾರಿಗಳನ್ನು ದುಷ್ಟ ಪ್ರಾಣಿ ಪಕ್ಷಿಗಳಿಂದ ರಕ್ಷಿಸಬೇಕಾಗಿತ್ತು. ಅದಕ್ಕಾಗಿ ಅವರು ಬೆಳೆಯನ್ನು ಕಾಯುವುದು, ಕವಣೆ ಬೀಸುವುದು, ಹಳೆಡಬ್ಬವನ್ನಾಗಲೀ, ತಮಟೆಯನ್ನಾಗಲೀ ಬಾರಿಸುವುದು, ಬೆಂಕಿ ಹಾಕಿ ಬೊಬ್ಬೆಯಿಟ್ಟು ಪ್ರಾಣಿ, ಪಕ್ಷಿಗಳನ್ನು ಬೆದರಿಸಿ ತಮ್ಮ ಬೆಳೆಯನ್ನು ಕಾಪಾಡುತ್ತಿದ್ದರು. ದಿನಕಳೆದಂತೆ ಕೆಲವು ವಿಕಾರ ಮನುಷ್ಯಾಕೃತಿಗಳನ್ನು ಮಾಡಿಟ್ಟು ತಮ್ಮ ಬೆಳೆಯನ್ನು ಕಾಪಾಡಲು ಪ್ರಾರಂಭಿಸಿದರು. ಹೀಗೆ ಬಳಕೆಗೆ ಬಂದದ್ದೇ 'ಬೆಚ್ಚುಗೊಂಬೆ'. ಇದು ಗ್ರಾಮೀಣರಿಗೆ ಒಕ್ಕಲು ತನದಲ್ಲಿ 'ರೈತನ ಗೆಳೆಯ', 'ರಕ್ಷಕ'. ದೃಷ್ಟಿ ಪರಿಹಾರಾರ್ಥವಾಗಿ ಕೂಡ ಬೆಚ್ಚುಗೊಂಬೆಯನ್ನು ಉಪಯೋಗಿಸಿಕೊಂಡಿರುವರು, ನಾಗರಿಕರು ಇದೇ ಕಲ್ಪನೆಯನ್ನು ಜನಪದರಿಂದ ತೆಗೆದುಕೊಂಡು ತಾವು ಕಟ್ಟುವ ಮನೆ, ಕಾರ್ಖಾನೆ, ದೇವಾಲಯ, ಅಣೆಕಟ್ಟು, ಸೇತುವೆ, ಬೆಳೆದ ಬೆಳೆಗೆ ದೃಷ್ಟಿ ತಾಗದಿರಲಿ ಎಂದು ಗೊಂಬೆಗಳನ್ನು ಉಪಯೋಗಿಸಿಕೊಂಡರು. ಆಯಾಸಂಸ್ಕೃತಿಯ ಆಯಾಪರಿಸರದ ನಂಬಿಕೆಗಳಿಗನುಗುಣವಾಗಿ 'ಬೆಚ್ಚುಗೊಂಬೆ'ಗಳ ಸ್ವರೂಪ ರೂಪುಗೊಂಡಿತು.

ಪ್ರಾಣಿ–ಪಕ್ಷಿಗಳನ್ನು ಬೆದರಿಸಿ ಓಡಿಸಿ ಪೈರನ್ನು ಕಾಪಾಡುವುದಕ್ಕಾಗಿಯೇ ಮತ್ತು ದೃಷ್ಟಿಪರಿಹಾರಾರ್ಥವಾಗಿಯೇ ಬೆಚ್ಚುಗೊಂಬೆಗಳು ಬಳಕೆಗೆ ಬಂದವು ಎಂಬ ಜನಪದದ ಮೂಲಭೂತ ನಂಬಿಕೆಗೆ ಸಾಕಷ್ಟು ಆಧಾರಗಳಿವೆ. ಒಂದು ಕೋಲಿಗೆ ಮಡಕೆಯನ್ನಾಗಲೀ, ಹಳೆಯಡಬ್ಬವನ್ನಾಗಲೀ ಸಿಕ್ಕಿಸಿ ಅದಕ್ಕೆ ಹರುಕು ಅಂಗಿಯನ್ನು ತೊಡಿಸಿ ಮನುಷ್ಯಾಕೃತಿಯನ್ನು ನಿರ್ಮಿಸಿ ಫಲವತ್ತಾಗಿ ಬೆಳೆದ ಜೋಳ, ಬತ್ತ, ರಾಗಿ, ಗೋಧಿ—ಹೊಲಗಳಲ್ಲಿ ಇಂದಿಗೂ ನಿಲ್ಲಿಸುವುದನ್ನು ಕಾಣಬಹುದಾಗಿದೆ. ಹಾಗೆಯೇ ಕಟ್ಟುತ್ತಿರುವ ಮನೆ, ಕಾರ್ಖಾನೆ, ದೇವಾಲಯದ ಮುಂದೆ ನಿಲ್ಲಿಸುವುದೂ ಸರ್ವೇಸಾಮಾನ್ಯ. ಹಂಚು ಅಥವಾ ಹಲಗೆಯ ಮೇಲೆ ಮಸಿ ಇಲ್ಲವೆ ಸುಣ್ಣದಿಂದ ಮನುಷ್ಯನ ಚಿತ್ರ ಬರೆದು ನಿಲ್ಲಿಸುವುದೂ ಉಂಟು.

ಪ್ರಾದೇಶಿಕವಾಗಿ ಕಾಣಸಿಗುವ ಬೆಚ್ಚುಗೊಂಬೆಗಳ ಆಕೃತಿಯಲ್ಲಿ ಹೆಚ್ಚಿನ

ವ್ಯತ್ಯಾಸವಿಲ್ಲ, ಕೆಲವರು ಉದ್ದಕೋಲಿಗೆ ಚಿಂದಿ ಬಟ್ಟೆಯನ್ನು ಕಟ್ಟಿ ಬಾವುಟದಂತೆ ಬಳಸಿದರೆ, ಇನ್ನು ಕೆಲವರು ಕೃತ್ರಿಮ ಮನುಷ್ಯಾಕೃತಿ ಮಾಡಿ ಬಳಸುವರು. ಕರ್ನಾಟಕದಲ್ಲಿಯೇ ಅಲ್ಲದೆ ಪ್ರಪಂಚದ ಇತರೆಡೆಗಳಲ್ಲೂ 'ಬೆಚ್ಚುಗೊಂಬೆ'ಯ ಕಲ್ಪನೆ ಕಂಡುಬರುತ್ತದೆ. ಜಪಾನಿನಲ್ಲಿ ರೈತರು ನೂರಾರು ವರ್ಷಗಳಿಂದ ತಮ್ಮ ಬತ್ತದ ಬೆಳೆಯನ್ನು ಹಕ್ಕಿಗಳಿಂದ ರಕ್ಷಿಸಲು ಇಂಥ ಗೊಂಬೆಗಳನ್ನು ಬಳಸುತ್ತಿದ್ದಾರೆ. ಹಳೆಯ ಗ್ರೀಸಿನ ರೈತರು ತಾವು ಬೆಳೆದ ಜವೆ, ಕಲ್ಲಂಗಡಿ ಮತ್ತು ದ್ರಾಕ್ಷಿಹಣ್ಣಿನ ಬೆಳೆಗಳನ್ನು ಪಕ್ಷಿಗಳಿಂದ ರಕ್ಷಿಸಲು ಪ್ರೈಪಸ್ ದೇವತೆಯ ಕುರೂಪಾಕೃತಿಯನ್ನು ಬಳಸುತ್ತಿದ್ದಾರೆ. ಅಮೆರಿಕದ ಕೊಲಂಬಸ್ ಮತ್ತು ರೆಡ್ ಇಂಡಿಯನ್ನರು ಕಪ್ಪು ಹಕ್ಕಿಗಳಿಂದ ಜೋಳದ ಗದ್ದೆಗಳನ್ನು ಕಾಪಾಡಲು ಪ್ರಾಚೀನದಿಂದಲೂ ವಿಚಿತ್ರಗೊಂಬೆಗಳ ಆಕೃತಿಯನ್ನು ಬಳಕೆಮಾಡುತ್ತ ಬಂದಿದ್ದಾರೆ.

ಶಿಷ್ಟ ದೇವಾಲಯಗಳಲ್ಲಿ ಕಾಣುವ ಕೆಲವು ವ್ಯಂಗ್ಯ ಬೊಂಬೆಗಳ ಮೂಲೋದ್ದೇಶವೂ ಜನಪದರ ಬೆಚ್ಚುಗೊಂಬೆಯಂತೆ ದೃಷ್ಟಿ ಪರಿಹಾರಾರ್ಥವೇ, ಇಂದಿಗೂ ಉತ್ಸವದ ಮುನ್ನ ನಡೆಸುವ 'ಬಲಿಪ್ರದಾನ'ದ ಉದ್ದೇಶವೂ ದೃಷ್ಟಿ ಪರಿಹಾರಾರ್ಥವೇ, ದೇವಾಲಯಗಳಲ್ಲಿ ಕೆತ್ತಿರುವ ವಿಚಿತ್ರ ರೀತಿಯ ಬೊಂಬೆಯ ಚಿತ್ರಗಳೂ ರಥದ ಮೇಲಿನ ಆಕೃತಿಗಳೂ ಗಮನಾರ್ಹವಾದವು.

ಕರ್ನಾಟಕದಲ್ಲಿ ಪ್ರಾದೇಶಿಕವಾಗಿ 'ಬೆಚ್ಚುಗೊಂಬೆ'ಯು ಬೇರೆ, ಬೇರೆ ಹೆಸರಿನಿಂದ ಬಳಕೆಯಲ್ಲಿದೆ. ಹಾಸನ-ಶಿವಮೊಗ್ಗ ಜಿಲ್ಲೆಗಳಲ್ಲಿ 'ಬೆಚ್ಚುಗೊಂಬೆ' ಎಂದರೆ, ಚಿತ್ರದುರ್ಗ–ದಾವಣಗೆರೆಯಲ್ಲಿ 'ಬೆಚ್ಚುಗುಮ್ಮ' ಎಂದೂ ಮೈಸೂರಿನ ಸುತ್ತಮುತ್ತ 'ಬೆದರುಗೊಂಬೆ' ಎಂದೂ ಕರೆಯುವರು. ಪದಕೋಶಗಳಲ್ಲಿರುವ ಬೆಚ್ಚ, ಬೆರ್ಚ, ಬೆಜ್ಚಲ್, ಬೆದಱಿಟ್ಟು, ಬೆಚ್ಚಪ್ಪ, ಬೆಚ್ಚುಗುಮ್ಮ—ಇವೆಲ್ಲ ಸಮಾನಾರ್ಥಕ ಪದಗಳೇ. ಇವೆಲ್ಲವೂ ಪಶು-ಪಕ್ಷಿಗಳನ್ನು ಬೆದರಿಸಿ ಓಡಿಸಲು ಹೊಲದಲ್ಲಿ ಹುಲ್ಲು, ಹಳೆ ಚಿಂದಿಬಟ್ಟೆ, ಹೊಟ್ಟು ಇತ್ಯಾದಿಯಿಂದ ಮಾಡಿಟ್ಟ ಕೃತ್ರಿಮ ಮನುಷ್ಯಾಕೃತಿಗಳು ಎಂಬರ್ಥದಿಂದ ಬಳಕೆಯಾಗಿವೆ.


'ಬೆಚ್ಚುಗೊಂಬೆ'ಗಳ ತಯಾರಿಕೆಯ ರೀತಿ ಸಾಮಾನ್ಯವಾದುದು. ಎರಡು ಕೋಲನ್ನು ಅಡ್ಡವಾಗಿಟ್ಟು ಅವಕ್ಕೆ ಹರುಕು ಬಟ್ಟೆಯನ್ನು ತೊಡಿಸಿ, ಅದರ ತಲೆಯನ್ನು ಹಳೆಯ ಚೀಲ ಅಥವಾ ಕಾಲು ಚೀಲದಲ್ಲಿ ತುಂಬಿದ ಹೊಟ್ಟಿನಿಂದ ಮಾಡಿ, ನೈಜಮನುಷ್ಯನಂತೆ ತಯಾರಿಸಬಹುದು. ಮಕ್ಕಳುಕೂಡ ಈ ಕಾರ್ಯದಲ್ಲಿ ಸಹಕರಿಸಬಹುದು. ಕೆಲಮಂದಿ ಕುಶಲಿಗಳು, ಕಲೆಯಲ್ಲಿ ಅಭಿರುಚಿಯುಳ್ಳ

ರೈತರು ವಿಭಿನ್ನರೀತಿಯ ಬೆಚ್ಚುಗೊಂಬೆಗಳನ್ನು ತಯಾರಿಸುವುದುಂಟು. ಅವ ಕೆಲವೊಮ್ಮೆ ಕಲಾತ್ಮಕವಾಗಿದ್ದು ನೋಡುಗರನ್ನು ಸೂರೆಗೊಳ್ಳುವಂತಿರುತ್ತವೆ

ಅಮೆರಿಕದ ಆ್ಯನ್‌ಪಾರ್ಕರ್ ಮತ್ತು ಜರ್ಮನಿಯ ಹ್ಯಾನ್ಸ್‌ಸ್ಲಿವೆಸ್ಟರ ಎಂಬ ಹೆಸರಾಂತ ಛಾಯಾಗ್ರಾಹಕರು ಪ್ರಪಂಚದ ಗ್ರಾಮಾಂತರ ಪ್ರದೇ ಗಳಲ್ಲಿ ಪರ್ಯಟನಮಾಡಿ ಸ್ವತಂತ್ರ ಕಲಾತ್ಮಕ ಬೆಚ್ಚುಗೊಂಬೆಯ ನೂರಾರು ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಇವರ ಈ ಛಾಯಾ ಚಿತ್ರಗಳು ಎಂತಹವರನ್ನು ಮನಸೂರೆಗೊಳ್ಳುವಂತಿರುವುದು ವಿಶೇಷ ಉಲ್ಲೇಖಕ್ಕೆ ಅರ್ಹವಾದ ಸಂಗ ಯಾಗಿದೆ.

ಪ್ರಪಂಚಾದ್ಯಂತ ಒಂದಲ್ಲ ಒಂದು ರೂಪದಿಂದ ಕಂಡುಬರುವ ಈ ವಿಸ್ಮಯ ಕಾರಿ ಆಕೃತಿಗಳು ಪ್ರಾಚೀನ ಕಲೆಯಷ್ಟೇ ಮೌಲ್ಯವನ್ನು ಉಳಿಸಿಕೊಂಡಿವ ಎನ್ನುವುದಕ್ಕೆ ಈ ಛಾಯಾಚಿತ್ರಗಳು ನಿದರ್ಶನವಾಗಿವೆ.

ಸಿ. ಎಸ್. ರಾಮಚಂದ್ರ



ಮೈಗಳ್ಳತನದಿಂದ ಪರರ ನೆರವನ್ನೇ ಯಾಚಿಸುತ್ತ, ಬಾಳುವೆ ನಡೆಸುವವನಿಗೆ ಸ್ವಾವಲಂಬನವೇ ತನಗೆ ತಾರಕ," ಎಂದು ಮನಗಾಣುವ ದಿನ ಬಂದೇ ಬರುತ್ತವೆ.

—ಮಾಂಟೇಗ್ಯೂ

ಮನುಷ್ಯನಲ್ಲಿ ದೇವತ್ವವೂ ಇದೆ. ದಾಸತ್ವವೂ ಇದೆ. ತಪ್ಪು ಮಾಡುವುದು ಹೇಗೆ ಅವನ ನೈಜಗುಣವೋ, ಅದನ್ನು ಒಪ್ಪಿ ಪಶ್ಚಾತ್ತಾಪ ಪಡುವುದೂ ಹಾಗೆಯೇ ಅವನ ಸಹಜ ಸ್ವಭಾವ.

—ಡೋನ್ ವಾರ್ಟನ್

ಬಂಡವಾಳಶಾಹಿ ಹಾಂಗ್‌ಕಾಂಗ್ ವಸಾಹತು ಕವಲುದಾರಿಯಲ್ಲಿ

ಹಾಂಗ್‌ಕಾಂಗ್ ಪ್ರಪಂಚದಲ್ಲಿಯೇ ಅತ್ಯಂತ ಗಜ್ಜಲಮಯವಾದ ನಗರ. ಈ ನಗರ ಜಿಲ್ಲೆಯ ಒಂದು ಹೆಕ್ಟೇರ್ ವಿಸ್ತೀರ್ಣದಲ್ಲಿ ೧೨,೦೦೦ಕ್ಕೂ ಹೆಚ್ಚು ಜನರಿದ್ದಾರೆ. ಬಳಕೆಯಲ್ಲಿರುವ ಪ್ರತಿಯೊಂದು ಕಿಲೋಮೀಟರ್ ರಸ್ತೆಗೆ ಸುಮಾರು ೨೮೦ ವಾಹನಗಳಿವೆ. ಇದು ಪ್ರಪಂಚದಲ್ಲಿಯೇ ಅತ್ಯಂತ ಸಂಚಾರ ದಟ್ಟನೆ ಇರುವ ಸ್ಥಳ. ಅಲ್ಲಿನ ಸಾರಿಗೆ ಉಪಕಾರ್ಯದರ್ಶಿ ಹೇಳುವಂತೆ "ಎಲ್ಲಾ ವಾಹನಗಳನ್ನೂ ಒಂದರಹಿಂದೊಂದರಂತೆ ನಿಲ್ಲಿಸಿದರೆ ಸಮಗ್ರ ರಸ್ತೆ ವ್ಯವಸ್ಥೆಯನ್ನೇ ಚಲಿಸದ ಒಂದೇ ಸಾಲನ್ನಾಗಿ ಮಾರ್ಪಡಿಸಬಹುದು."

ಇಂತಹ ಸ್ಥಳಕ್ಕೆ ಬರಲು ಯಾರು ಬಯಸುತ್ತಾರೆ? ಉತ್ತರ, ಲಕ್ಷಾಂತರ ಪ್ರವಾಸಿಗಳು, ನಿರಾಶ್ರಿತರು ಮತ್ತು ಆಕಾಂಕ್ಷಿತ ವ್ಯಾಪಾರಸ್ಥರು, ಹಾಂಗ್‌ಕಾಂಗ್ ನಗರ ಉದಾರ ವ್ಯವಹಾರದ ಬಂಡವಾಳ ಪದ್ಧತಿಯ ತಾಣ. ಅಲ್ಲಿ ಖಾಸಗಿ ಉದ್ಯಮಕ್ಕೆ ಸರ್ಕಾರದ ನಿರ್ಬಂಧಗಳು ಬಹಳ ಕಡಿಮೆ. ಹಾಂಗ್‌ಕಾಂಗ್ ವಿಸ್ತೀರ್ಣದಲ್ಲಿ (೧೦೬೦ ಚದರ ಕಿ. ಮೀ.ಗಳು) ಮತ್ತು ಜನಸಂಖ್ಯೆಯಲ್ಲಿ (೫.೨ ಮಿಲಿಯನ್) ಚಿಕ್ಕದಾಗಿದ್ದರೂ ಪ್ರಪಂಚದ ಹದಿನೇಳನೇ ದೊಡ್ಡ ವ್ಯಾಪಾರ ರಾಷ್ಟ್ರ. ಸಾಮಾನ್ಯ ಹತ್ತಿ ಬಟ್ಟೆಗಳು, ಹೆಣಿಗೆ ಉಡುಪುಗಳು, ರೇಡಿಯೋಗಳು, ಆಟದ ವಸ್ತುಗಳು, ಎಲೆಕ್ಟ್ರಾನಿಕ್ ಗಡಿಯಾರಗಳು ಮತ್ತು ಕ್ರೀಡಾ ಸಲಕರಣೆಗಳಿಗೆ ಸಂಬಂಧಿಸಿದಂತೆ ಪ್ರಮುಖ ರಫ್ತು ಕೇಂದ್ರ. ನ್ಯೂಯಾರ್ಕ್ ಮತ್ತು ಲಂಡನ್‌ಗಳ ನಂತರದ ಪ್ರಪಂಚದ ಮೂರನೇ ಮುಖ್ಯ ಹಣಕಾಸು ವ್ಯವಹಾರದ ಕೇಂದ್ರ. ಹಾಂಗ್‌ಕಾಂಗ್‌ನ ಸಾಗಣೆ ಹಡಗುಪಡೆ ಅಮೇರಿಕ ಸಂಯುಕ್ತ ಸಂಸ್ಥಾನದ ಹಡಗುಪಡೆಗೆ ಮಾತ್ರ ಎರಡನೆಯದು.

ಹಾಂಗ್‌ಕಾಂಗ್‌ನ ಜನರಿಗೆ ಜೇಬಲ್ಲಿ ಹಣವಿದ್ದಾಗ ಅದನ್ನು ನಾಳೆ ದಿಂಬುದು ಬರುವುದಿಲ್ಲವೆನ್ನುವಂತೆ ಖರ್ಚುಮಾಡುತ್ತಾರೆ. ಹೇಳಬೇಕೆಂದರೆ ಅವರು ಪ್ರಪಂಚದಲ್ಲೇ ಅತಿಹೆಚ್ಚು ತಲಾವಾರು ಪ್ರಮಾಣದಲ್ಲಿ ಉತ್ಕೃಷ್ಟ ಫ್ರೆಂಚ್‌ಕೊನ್ಯಾಕ್ ಮದ್ಯವನ್ನು ಉಪಯೋಗಿಸುತ್ತಾರೆ. ಪ್ರತಿ ಚದರ ಕಿ.ಮಿ.ಗೆ ಇತರ ಯಾವುದೇ ಸ್ಥಳಕ್ಕಿಂತ ಇಲ್ಲಿ ಹೆಚ್ಚು ರೋಲ್ಸ್‌ರಾಯ್ಸ್ ಕಾರುಗಳಿವೆ.

೧೯೮೨ರ ಡಿಸೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ 'ಕ್ಯಾಪಿಟಲಿಸ್ಟ್ ಹಾಂಗ್‌ಕಾಂಗ್ ಕಾಲೋನಿ ಅಟ್ ಕ್ರಾಸ್ ರೋಡ್ಸ್' ಎಂಬ ಲೇಖನದ ಅನುವಾದ.

ಇಲ್ಲಿ ಯಾವುದೇ ನೀಟಾದ ಹೋಟೆಲಿನಲ್ಲಿ ಒಂದು ರಾತ್ರಿ ಇಳಿದುಕೊಳ್ಳಲು ತೆರಬೇಕಾದ ವೆಚ್ಚ ೫,೫೦೦ ಹಾಂಗ್‌ಕಾಂಗ್ ಡಾಲರುಗಳು (ರೂ. ೯೩೫೦) ಗಂಟೆಗೆ ೨೪೦ ಕಿ.ಮೀ. ಓಡುವ ಆಸ್ಟೀನ್ ಮಾರ್ಟಿನ್ ಕಾರಿನ ಏಜೆಂಟರು ತಮ್ಮ ಪ್ರದರ್ಶನ ಮಳಿಗೆ ತೆರೆಯುವ ಮೊದಲೇ ೨೦೦,೦೦೦ ಅಮೆರಿಕ ಡಾಲರುಗಳು (೧೮ ಲಕ್ಷ ರೂ.) ೬ ಯಂತ್ರಗಳನ್ನು ಮಾರಿದರು. ಒಬ್ಬ ಹಾಂಗ್‌ಕಾಂಗ್ ಲೇವಾದೇವಿಗಾರ ಹೇಳುವಂತೆ "ಈ ಪಟ್ಟಣದಲ್ಲಿರುವ ಸುಮಾರು ೧೦೦೦ ಕುಟುಂಬಗಳಲ್ಲಿ ಪ್ರತಿಯೊಂದು ಕುಟುಂಬವೂ ಅಮೇರಿಕದ ೨೦೦ ಮಿಲಿಯನ್ ಡಾಲರುಗಳನ್ನು (೧೮೦ ಕೋಟಿ) ಸುಲಭವಾಗಿ ಜೊತೆಗೂಡಿಸಬಲ್ಲದು." ಬಾಡಿಗೆ ದರ ಮತ್ತು ಭೂ ಸ್ವತ್ತಿನ ಬೆಲೆಗಳು ನಿಜಕ್ಕೂ ದಿಗ್ಭ್ರಮೆ ಹಿಡಿಸುತ್ತವೆ. ಸಾಧಾರಣವಾದ ಮೂರು ಮಲಗುವ ಕೊಠಡಿಗಳಿರುವ ಮನೆಯ ಬಾಡಿಗೆ ತಿಂಗಳಿಗೆ ಸುಮಾರು ೭೦೦೦, ಅಮೆರಿಕ ಡಾಲರುಗಳು (೬೩,೦೦೦ರೂ). ೧೯೮೨ರ ಫೆಬ್ರವರಿಯಲ್ಲಿ ಹಾಂಗ್‌ಕಾಂಗ್‌ನ ಸೆಂಟ್ರಲ್ ಡಿಸ್ಟ್ರಿಕ್ಟ್‌ನಲ್ಲಿರುವ ಒಂದು ತುಣುಕು ನೆಲ ಚದರ ಮೀಟರಿಗೆ ೩೩,೦೦೦ ಹಾಂಗ್‌ಕಾಂಗ್ ಡಾಲರುಗಳಂತೆ (೫೫೦೦೦ರೂ.) ಮಾರಾಟವಾಯಿತು. ಇದು ವಿಶ್ವದಲ್ಲೇ ಅತ್ಯಧಿಕ ದಾಖಲೆಬೆಲೆ.

ಆದಾಗ್ಯೂ ಹಾಂಗ್‌ಕಾಂಗ್‌ನ ಆರ್ಥಿಕತೆಗೆ ಜೀವರಸ ಪೂರೈಕೆಯಾಗುತ್ತಿರುವುದು ಹಿಂಬದಿಯ ಬೀದಿಗಳಲ್ಲಿ ಕಿಕ್ಕಿರಿದಿರುವ ಹಾಗೂ ಈ ವಸತಿಯ ಅಸ್ತವ್ಯಸ್ತತೆಗೆ ಕಾರಣವಾಗಿರುವ ಸಣ್ಣ ಪುಟ್ಟ ಉದ್ಯಮ ಸಂಸ್ಥೆಗಳಿಂದ. ಛಾಯಾಚಿತ್ರ ತೆಗೆಯುವ ಪ್ರವಾಸಿಗಳು ಹಾಪ್ ಆನ್ ಬೈಸಿಕಲ್ ಕಂಪನಿ, ಲೀಕೀ ಮೋಟಾರು ಬೋಟ್‌ಸರ್ವಿಸ್ ಮತ್ತು ಲೀ ಕೀ ಕನ್‌ಸ್ಟ್ರಕ್ಷನ್ ಕಂಪನಿಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಅಭಿರುಚಿಯುಳ್ಳವರು ಯುಫ್ಯಾಟ್ ರೆಸ್ಟೊರೆಂಟ್ ಮತ್ತು ಮೀಫ್ಯಾಟ್ ಗಾರ್ಮೆಂಟ್ ಕಂಪನಿಗಳನ್ನು ನೆನೆಸಿಕೊಳ್ಳುತ್ತಾರೆ.

ಹಾಂಗ್‌ಕಾಂಗ್ ಇನ್ನೂ ಬಹುಮಟ್ಟಿಗೆ ಇನ್ನೊಂದು ಸಂಸ್ಕೃತಿಯ ಭಾಗವಾಗಿದೆ. ಇತ್ತೀಚೆಗೆ ಕೊವ್‌ಲೂನ್ ಬೇ ಫ್ಯಾಕ್ಟರಿ ನಿವೇಶನದ ೪೦ ಮಿಲಿಯನ್ ಅಮೆರಿಕನ್ ಡಾಲರ್‌ಗಳ (೩೬ ಕೋಟಿರೂ.) ಹರಾಜು, ಹಿಲ್ಟನ್ ಹೋಟೆಲ್‌ನ ನರ್ತನ ಶಾಲೆಯಲ್ಲಿ ನಡೆಯಿತು. ಆಗ ಮಾರುವವರ ಆಸ್ತಿಯ ಮ್ಯಾನೇಜರನು ಅತ್ಯಧಿಕಮಟ್ಟದ ಬೆಲೆಗೆ ಹರಾಜಾಗುವ ಪರಿಸ್ಥಿತಿ ನಿರ್ಮಿಸಲು ಫಂಗ್‌ಶು (ಅಕ್ಷರಶಃ: ಗಾಳಿ ಮತ್ತು ನೀರು) ಮಾಂತ್ರಿಕನನ್ನು ಕರೆಸಿದ್ದನು. ಮದ್ಯಪಾನೀಯ ಬಾರನ್ನು ತೆಗೆದ ಮೇಲೆ, ಗೋಡೆಯಲ್ಲಿದ್ದ ಕೊಳವೆ ಕಿಂಡಿಯನ್ನು

ಮುಚ್ಚಿದ ಮೇಲೆ, ನರ್ತನ ಶಾಲೆಯನ್ನು ಪುನರ್‌ಜೋಡಿಸಿದ ಮೇಲೆ (ಅದೃಶ್ಯ ಶಕ್ತಿಗಳು ನೇರವಾಗಿ ಕೊಠಡಿಗೆ ಪ್ರವೇಶಿಸದಂತೆ ತಡೆಯಲು) ಮಾರಾಟ ಸುಗಮವಾಗಿ ನಡೆಯಲು ಸಾಧ್ಯವೆಂದು ತಿಳಿಸಲಾಗಿತ್ತು. ವಸಾಹತುವಿನ ಸೆಂಟ್ರಲ್ ಡಿಸ್ಟ್ರಿಕ್ಟ್‌ನಲ್ಲಿ ನಿರ್ಮಾಣವಾಗುತ್ತಿರುವ ೪೧ ಮಹಡಿಯುಳ್ಳ ಹಾಂಗ್‌ಕಾಂಗ್ ಮತ್ತು ಷಾಂಗೈ ಬ್ಯಾಂಕಿಂಗ್ ಕಾರ್ಪೊರೇಷನ್‌ಗಳ ಕೇಂದ್ರ ಕಛೇರಿಯಂತಹ ಬೃಹತ್‌ಕಟ್ಟಡಗಳ ನಿರ್ಮಾಣದ ವಿವರಗಳನ್ನು ಡೇವಿಡ್ ಲುಂಗ್ ಎಂಬ ಸ್ಥಳೀಯ ಭವಿಷ್ಯಕಾರನಿಂದ ಪಡೆಯಲಾಗುತ್ತದೆ.

ಹಾಂಗ್‌ಕಾಂಗ್‌ನ ಸ್ಥಾಪನೆಯೇ ಶುಭದಾಯಕವಾಗಿಲ್ಲ. ೧೮೪೧ರಲ್ಲಿ ಇದನ್ನು ಬಲಪ್ರದರ್ಶನ ಮಾಡಿ ಚೀನಾ ಚಕ್ರವರ್ತಿಯಿಂದ ಬ್ರಿಟನ್ ಪಡೆದು ಕೊಂಡಿತು. ಆಗ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಲಾರ್ಡ್ ಪಾಮರ್ಸ್ಟನ್ನನು ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದ ಯಾಂಗ್ಟ್ಸೆ ನದಿ ಮುಖಜ ಭೂಮಿಯ ದ್ವೀಪಗಳನ್ನು ಚೀನಾದಿಂದ ಪಡೆಯಬೇಕೆಂದು ಬಯಸಿದ್ದ. ಆದರೆ ಅದನ್ನು ಪಡೆಯಲು ಯತ್ನಿಸದೆ ಹಾಂಗ್‌ಕಾಂಗನ್ನು ಪಡೆಯುವ ಒಪ್ಪಂದ ಮಾಡಿಕೊಂಡ ನತದೃಷ್ಟ ಅಧಿಕಾರಿಯನ್ನು ಪಾಮರ್ಸ್ಟನ್ ಸೇವೆಯಿಂದ ವಜಾಮಾಡಿದ. ಶತಮಾನದ ಕೊನೆಯ ಹೊತ್ತಿಗೆ ಮರದ ನಾವೆಗಳ ಬದಲು ಕಬ್ಬಿಣದ ಕವಚದ ಉಗಿ ಹಡಗುಗಳು ಕಾಣಿಸಿಕೊಂಡವು; ಅದು ಚೀನಾ ತೀರದ ಅತ್ಯುತ್ತಮ ಸ್ವಾಭಾವಿಕ ಬಂದರಾಯಿತು. ಆಗ ಬ್ರಿಟಿಷ್ ಸರ್ಕಾರ ಈ ಬಂದರಿನ ಬೆಲೆಯನ್ನು ಅರಿಯಿತು.

ಉತ್ಪಾದನಾ ವ್ಯವಸ್ಥೆ : ಈ ಸೌಲಭ್ಯಗಳನ್ನು ಬಳಸಿಕೊಂಡ ಮೊದಲ ಪಾಶ್ಚಿಮಾತ್ಯ ಬಂಡವಾಳಗಾರರೆಂದರೆ ಬ್ರಿಟಿಷ್ ಅಫೀಮು ಕಳ್ಳಸಾಗಣೆದಾರರು. ೧೯೦೦ರ ಹೊತ್ತಿಗೆ ಹಾಂಗ್‌ಕಾಂಗ್ ದೂರ ಪ್ರಾಚ್ಯದಲ್ಲಿ ವ್ಯಾಪಾರ ನಡೆಸುತ್ತಿದ್ದ ಮುಖ್ಯ ವರ್ತಕ ಮನೆತನಗಳ ಕೇಂದ್ರ ಸ್ಥಳವಾಯಿತು. ಕಳ್ಳಸಾಗಣೆದಾರರಲ್ಲಿ ಅನೇಕರು ಪ್ರಾಮಾಣಿಕ ವ್ಯವಹಾರಕ್ಕಿಳಿದು ಹಾಂಗ್‌ಕಾಂಗ್‌ನ ಕೆಲವು ಬೃಹತ್ ಕಂಪನಿಗಳನ್ನು ಸ್ಥಾಪಿಸಿದರು. ಹತ್ತೊಂಬತ್ತನೆ ಶತಮಾನದ ಇಬ್ಬರು ಅಫೀಮು ವರ್ತಕರು ಸೇರಿ ಜಾರ್ಡಿನ್ ಮ್ಯಾಥೆಸನ್ ಅಂಡ್ ಕಂಪನಿ ಎಂಬ ಬ್ರಿಟಿಷ್ ವ್ಯವಸ್ಥಾಪನೆಯ ಅತ್ಯಂತ ಪ್ರಭಾವಿತ ವ್ಯಾಪಾರಿ ಕಂಪನಿಯನ್ನು ಪ್ರಾರಂಭಿಸಿದರು. ವಿಲಿಯಂ ಜಾರ್ಡೈನ್‌ನ ವಂಶಸ್ಥರಲ್ಲಿ ಇಬ್ಬರು ಈಗಲೂ ಕಂಪನಿಯ ಮಂಡಲಿಯಲ್ಲಿದ್ದಾರೆ.

ವಸಾಹತು ಕಾಲದಿಂದಲೂ ಹಾಂಗ್‌ಕಾಂಗ್ ಸರ್ಕಾರದ ಪದ್ಧತಿಯಲ್ಲಿ

ಹೆಚ್ಚೇನು ಬದಲಾವಣೆಯಾಗಿಲ್ಲ. ಲಂಡನ್‌ನಿಂದ ನೇಮಕವಾದ ಗವರ್ನರ್ ಒಬ್ಬರು ಕೆಲವು ಆಯ್ದ ನಾಗರಿಕರ ಮಂಡಲಿಯ ಸಲಹೆಯ ಮೇರೆಗೆ ಆದರ ಆಡಳಿತ ನಡೆಸುತ್ತಾರೆ. ವಸಾಹತುವಿನ ಪ್ರಭಾವಶಾಲಿಗಳ ಹಿತಸಂರಕ್ಷಿಸಲು ಪ್ರಾರಂಭದಿಂದಲೂ ಇಲ್ಲಿನ ಆರ್ಥಿಕತೆಯಲ್ಲಿ ವ್ಯಾಪಾರ ವ್ಯವಹಾರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇಂದೂ ಕೂಡ ಸುಂಕಗಳಾಗಲಿ ಅಬ್ಕಾರಿ ಶುಲ್ಕಗಳಾಗಲಿ ಇಲ್ಲ. ಹೇಳಬೇಕೆಂದರೆ ಶೇಕಡ ೧೫ರಷ್ಟು ಆದಾಯ ತೆರಿಗೆಯೇ (ಲಾಭಾಂಶಗಳ ಮೇಲೆ ತೆರಿಗೆ ಇಲ್ಲ) ಗರಿಷ್ಠ ಪ್ರಮಾಣದ್ದು ಮತ್ತು ಶೇಕಡ ಹದಿನಾರುವರೆಗಿಂತ ಹೆಚ್ಚಿನ ಕಂಪನಿ ತೆರಿಗೆ ಇಲ್ಲ. ಗಳಿಕೆ ಮತ್ತು ಲಾಭದ ಮೇಲೆ ಯಾವುದೇ ಕೈಗಾರಿಕಾ ರಾಜ್ಯದಲ್ಲೂ ಇಷ್ಟು ಕಡಿಮೆ ಪ್ರಮಾಣದ ತೆರಿಗೆ ಪದ್ಧತಿ ಇಲ್ಲ.

ಆದರೂ ಮುಕ್ತ ಆರ್ಥಿಕ ಪದ್ಧತಿಯು ಸರ್ಕಾರ ಉತ್ಪಾದಕರವೂ ಜನೋಪಯೋಗಿಯೂ ಆಗಿರಬಹುದೆಂದು ಹಾಂಗ್‌ಕಾಂಗ್ ತೋರಿಸಿಕೊಟ್ಟಿದೆ. ೧೯೪೯ರಲ್ಲಿ ಕಮ್ಯೂನಿಸ್ಟರು ಚೀನಾವನ್ನು ವಶಕ್ಕೆ ತೆಗೆದುಕೊಂಡಾಗ ಹಲವಾರು ಚೀನೀ ಪ್ರಸಿದ್ಧ ಉದ್ಯಮಿಗಳು ಹಾಂಗ್‌ಕಾಂಗ್‌ಗೆ ಬರಿಗೈಯಲ್ಲಿ ಓಡಿಬಂದರು.

ಹಾಂಗ್‌ಕಾಂಗ್‌ನ ಉದಾರ ಕಾನೂನುಗಳಿಂದಾಗಿ ಕೆಲವೇ ದಿವಸಗಳಲ್ಲಿ ಹೊಸ ಕಂಪನಿಗಳನ್ನು ನೋಂದಾಯಿಸಲು ಸಾಧ್ಯವಿದೆ. ಸಿರಿವಂತ, ದೀರ್ಘಕಾಲದಿಂದ ಸ್ಥಾಪಿತವಾದ ಬ್ರಿಟಿಷ್ ಬ್ಯಾಂಕುಗಳು ವ್ಯಾಪಾರಿ ಸಾಹಸಗಳಿಗೆ ಉದಾರವಾಗಿ ಸಾಲಗಳನ್ನು ನೀಡುತ್ತವೆ. ಕಡಿಮೆ ತೆರಿಗೆಗಳು ಬಂಡವಾಳದ ಶೀಘ್ರ ಸಂಗ್ರಹಣೆಗೆ ಮತ್ತು ಪುನರ್ ಹೂಡಿಕೆಗೆ ಅವಕಾಶ ಕಲ್ಪಿಸಿವೆ. ಇದರ ಪರಿಣಾಮವಾಗಿ ೧೯೫೦ ಮತ್ತು ೧೯೬೦ರ ನಡುವೆ ವಸಾಹತುವಿನ ಆರ್ಥಿಕ ಅಭಿವೃದ್ಧಿ ತೀವ್ರ ಪ್ರಗತಿ ಕಂಡಿತು. ಅಮೆರಿಕದ ಅರ್ಥಶಾಸ್ತ್ರಜ್ಞ ಅಲ್ವಿನ್ ರಬೂಷ್ಕರವರ ಪ್ರಕಾರ ಔದ್ಯಮಿಕ ಉತ್ಪಾದನೆಯ ಸರಾಸರಿ ಬೆಳವಣಿಗೆ ವರ್ಷಂಪ್ರತಿ ಶೇಕಡ ೩೦ರಷ್ಟಿದೆ.

೧೯೪೯ರಲ್ಲಿ ಪಾವೊಯ್ಯೂ-ಕಾಂಗ್ ಎಂಬ ಸಾಹಸೋದ್ಯಮಿ ಷಾಂಗೈಯಿಂದ ಹಾಂಗ್‌ಕಾಂಗ್‌ಗೆ ಓಡಿ ಬಂದನು. ಅವನು ಆಗ ಬ್ಯಾಂಕಿಂಗ್‌ನಲ್ಲಿ ಉನ್ನತ ಕಾರ್ಯನಿರ್ವಾಹಕನಾಗಿದ್ದ ೩೦ರ ಪ್ರಾಯದ ಯುವಕ. ಪಾವೊ ತನ್ನ ಕುಟುಂಬದೊಡನೆ ಇಲ್ಲಿ ನೆಲಸಿ ಆಮದು-ರಫ್ತು ವ್ಯಾಪಾರದಲ್ಲಿ ತೊಡಗಿದ. ಕೆಲವೇ ವರ್ಷಗಳಲ್ಲಿ ಅವನ ಉದ್ಯಮ ಬೆಳೆಯಿತು ಮತ್ತು ಈ ಕುಟುಂಬ ೨೭ ವರ್ಷಗಳಷ್ಟು ಹಳೆಯದಾದ ಕಲ್ಲಿದ್ದಲಿನಿಂದ ಓಡಿಸುವ ಸರಕುರವಾನೆ ಹಡಗನ್ನು ಕೊಂಡುಕೊಂಡಿತು. ಹೀಗೆ ಹಳೆಯ ಸರಕು ಸಾಗಣೆ ಹಡಗನ್ನು ಇಟ್ಟುಕೊಂಡಿದ್ದ

ವನು, ಇಂದು ೨೦ ಮಿಲಿಯನ್ ಟನ್ ಭಾರ ಸಾಗಿಸಬಲ್ಲ ಹಡಗುಪಡೆಯ ಮಾಲೀಕನಾಗಿರುವ ಪಾವ್ಲೋ ಸರ್‌ಯ್ಯೂ-ಕಾಂಗ್ ಪಾವ್ಲೋ ಎಂದು ಕರೆಸಿಕೊಳ್ಳುತ್ತಿದ್ದಾನೆ. ಇವನ ಬಳಿಯಿರುವ ಹಡಗುಪಡೆ ಚೀನಾದ ಇಡೀ ವಾಣಿಜ್ಯ ಹಡಗುಪಡೆಯ ಎರಡರಷ್ಟು ದೊಡ್ಡದು.

ಇಂತಹ ಪ್ರಗತಿಯನ್ನು ಚೀನೀ ನಿರಾಶ್ರಿತರ ಬೆವರು ಮತ್ತು ಕಣ್ಣೀರಿನ ಬೆಲೆತೆತ್ತು ಕೊಳ್ಳಲಾಗುತ್ತಿದೆ ಎಂದು ಹೇಳಲೇಬೇಕಾಗುತ್ತದೆ. ಆದರೆ ಹಾಂಗ್‌ಕಾಂಗ್‌ನ ಆರ್ಥಿಕ ಅಂಶಗಳ ಪ್ರಮುಖ ಲಕ್ಷಣಗಳೆಂದರೆ ಚೀನೀ ಕಾರ್ಮಿಕರಿಗೆ ಇಲ್ಲಿ ಅವರ ತಾಯ್ನಾಡಿಗಿಂತಲೂ ಕೆಲಸಮಾಡುವ ಅವಕಾಶಗಳು ಹೆಚ್ಚಾಗಿರುವುದು. ಹಾಂಗ್‌ಕಾಂಗ್‌ನ ಬಹುಪಾಲು ಉದ್ಯಮಗಳು ಸಾವಿರಾರು ಸಣ್ಣ ಪ್ರಮಾಣದ ಮತ್ತು ಗೃಹ ಕೈಗಾರಿಕೆಗಳನ್ನು ಆಧರಿಸಿವೆ.

ತಾಣ: ಇಂದು ಹಾಂಗ್‌ಕಾಂಗ್ ಕಮ್ಯೂನಿಸ್ಟ್ ಚೀನಾದ ಮುಖ್ಯ ಆರ್ಥಿಕ ತಾಣಗಳಲ್ಲೊಂದಾಗಿದೆ. ಅದಕ್ಕೆ ವಿದೇಶಗಳಿಂದ ಯಂತ್ರ ಸಲಕರಣೆಗಳನ್ನು ಆಯುಧೋಪಕರಣಗಳನ್ನು ಮತ್ತು ತಂತ್ರಜ್ಞಾನವನ್ನು ಪಡೆಯಲು ಅತ್ಯಾವಶ್ಯಕವಾಗಿ ವಿದೇಶಿ ವಿನಿಮಯದ ಅಗತ್ಯವಿದೆ. ಆದ್ದರಿಂದ ಚೀನಾವು ಈ ವಸಾಹತುವಿನಲ್ಲಿ ತನ್ನ ವಾಣಿಜ್ಯ ಆಸಕ್ತಿಗಳನ್ನು ತ್ವರಿತವಾಗಿ ವಿಸ್ತರಿಸುತ್ತಿದೆ. ಚೀನೀ ಬ್ಯಾಂಕುಗಳು, ಸುಮಾರು ೭೦ರಷ್ಟು ಸರಕು ಮಳಿಗೆಗಳು, ಎರಡು ಜೀವವಿಮಾ ಕಂಪನಿಗಳು, ಹಣಕಾಸು ವ್ಯವಹಾರದ ಸಿಂಡಿಕೇಟ್‌ಗಳು ಮತ್ತು ಹಲವಾರು ರೆಸ್ಟೋರೆಂಟ್‌ಗಳು, ಹೂ ಅಂಗಡಿಗಳು, ಪೀಠೋಪಕರಣಗಳ ಅಂಗಡಿಗಳು ಮತ್ತು ಪ್ರಕಾಶನ ಸಂಸ್ಥೆಗಳು ಹಾಂಗ್‌ಕಾಂಗ್‌ನಲ್ಲಿ ನೆಲೆಗೊಂಡಿವೆ. ಚೀನೀ ಉತ್ಪಾದನಾ ಸರಕುಗಳ ಬೃಹತ್ ವ್ಯಾಪಾರ ಸಂಸ್ಥೆ ಯ್ಯೂಹ್ವಾ ಆಸ್ಟ್ರೇಲಿಯಾ ಮತ್ತು ಕೆನಡಾದಲ್ಲಿ ವ್ಯವಹಾರ ಆಡಳಿತದಲ್ಲಿ ಮಾಸ್ಟರ್ ಪದವಿ ಪಡೆದ ಅನೇಕ ಹಾಂಗ್‌ಕಾಂಗ್ ಪದವೀಧರರನ್ನು ನೇಮಿಸಿಕೊಂಡಿದೆ. ಅದರ ಕೊಳ್ಳುವ ಇಲಾಖೆ ಮಾರುಕಟ್ಟೆಗೆ ಬರುವ ವಸ್ತುಗಳ ಹೊಸ ಮಾದರಿಗಳನ್ನು ಮತ್ತು ಬಳಕೆದಾರರ ಒಲವಿನ ಬಗ್ಗೆ ಮಾಹಿತಿಯನ್ನು ಅವಿರತವಾಗಿ ಚೀನಾ ಸರ್ಕಾರಕ್ಕೆ ಕಳುಹಿಸುತ್ತಲೇ ಇರುತ್ತದೆ. ಪಾಶ್ಚಾತ್ಯರಿಗೆ ರುಚಿಸುವ ಮದ್ಯವನ್ನು ಹಾಂಗ್‌ಕಾಂಗ್‌ನ ಅನೇಕ ಸರಕು ಮಳಿಗೆಗಳಿಗೆ ಚೀನಾದಿಂದ ರಫ್ತುಮಾಡಲಾಗುತ್ತದೆ.

ಪೀಕಿಂಗ್‌ನಿಂದ ನಿಯಂತ್ರಿತವಾದ ಕೆಲವು ಕಂಪನಿಗಳು ವಿದೇಶೀ ಉದ್ಯಮ ಸಂಸ್ಥೆಗಳೊಂದಿಗೆ (ಅಮೆರಿಕವೂ ಸೇರಿದಂತೆ) ಪಾಲುದಾರರಾಗಿ ಅಗಾಧವಾದ

ಖಾಸಗಿ ಗೃಹ ನಿರ್ಮಾಣ, ಅಭಿವೃದ್ಧಿ ಮತ್ತು ವಾಣಿಜ್ಯ ಕಟ್ಟಡಗಳ ನಿರ್ಮಾಣದಿಂದ ಹಿಡಿದು ಬೃಹತ್ ಸಿಮೆಂಟ್ ಕಾರ್ಖಾನೆಯವರೆಗೂ ವಿವಿಧ ಯೋಜನೆಗಳಲ್ಲಿ ಬಂಡವಾಳ ಹೂಡಿವೆ. ಹಾಂಗ್‌ಕಾಂಗ್ ಇಂದು ಚೀನಾದ ಒಟ್ಟು ವಿದೇಶಿ ವಿನಿಮಯ ಗಳಿಕೆಯಲ್ಲಿ ಸುಮಾರು ಮೂರನೆ ಒಂದು ಭಾಗಕ್ಕೆ ಮೂಲ ಅಥವಾ ತಾಣವಾಗಿದೆ ಹಾಗೂ ಚೀನಾಕ್ಕೆ ಪಾಶ್ಚಿಮಾತ್ಯ ವಾಣಿಜ್ಯ, ಉದ್ಯಮ ಮತ್ತು ತಂತ್ರಜ್ಞಾನದ ಅಮೂಲ್ಯ ದ್ವಾರವಾಗಿದೆ. ಹೋಟೆಲ್ ವ್ಯವಸ್ಥಾಪನೆಯಿಂದ ಹಿಡಿದು ಕಂಪ್ಯೂಟರ್ ಕಾರ್ಯಕ್ರಮ ನಿರೂಪಣೆಯವರೆಗೆ ಪ್ರತಿಯೊಂದು ವಿಷಯಗಳಲ್ಲೂ ಶಿಕ್ಷಣ ಪಡೆಯಲು ಚೀನೀ ಮ್ಯಾನೇಜರರುಗಳ, ಪ್ರೊಫೆಸರ್‌ಗಳ ಮತ್ತು ಕಾರ್ಮಿಕರ ತಂಡಗಳು ಹಾಂಗ್‌ಕಾಂಗ್‌ಗೆ ನಿಯತವಾಗಿ ಬಂದು ಹೋಗುತ್ತಿವೆ.

ಅದರಲ್ಲಿ ಪಾವೋ ಯೂಕಾಂಗ್ ಎಂಬ ಹಿಂದಿನ ನಿರಾಶ್ರಿತನ ನೇತೃತ್ವದಲ್ಲಿರುವ ವರ್ಲ್ಡ್‌ವೈಡ್ ಷಿಪ್ಪಿಂಗ್‌ಗ್ರೂಪ್ ಕಂಪನಿಯೂ ಒಂದು. ಚೀನೀಯರಿಗೆ ಹಾಂಗ್‌ಕಾಂಗ್‌ನಲ್ಲಿ ತರಬೇತಿ ಪಡೆಯಲು ಹಡಗು ಕಂಪನಿಗಳು ನೆರವಾಗುತ್ತಿವೆ. ಪಾವೋ ಮತ್ತು ಎರಡು ಚೀನೀ ಸರ್ಕಾರಿ ಕಾರ್ಪೊರೇಷನ್‌ಗಳು ಇನ್ನೊಂದು ಕಂಪನಿಯನ್ನು ಸ್ಥಾಪಿಸಿಕೊಂಡು ಅಂತರರಾಷ್ಟ್ರೀಯ ಮಾರುಕಟ್ಟೆಗಾಗಿ ಹಡಗುಗಳನ್ನು ಕಟ್ಟಲು, ಕೊಳ್ಳಲು, ಮಾರಲು, ಬಾಡಿಗೆಗೆ ಕೊಡಲು ಮತ್ತು ಇಟ್ಟುಕೊಳ್ಳಲು ಯೋಜಿಸಿವೆ.

ಇತಿಹಾಸದ ಸಂಧಿಕಾಲ: ಹಾಂಗ್‌ಕಾಂಗ್ ಸರಹದ್ದಿನಲ್ಲಿ ಚೀನಾದ 'ವಿಶೇಷ ಆರ್ಥಿಕವಲಯ' ನಿರ್ಮಿತವಾಗಿದೆ. ಹಾಂಗ್‌ಕಾಂಗ್ ಮತ್ತು ವಿದೇಶಿ ಬಂಡವಾಳಗಾರರು ಕಮ್ಯೂನಿಸ್ಟರೊಡನೆ ಸೇರಿಕೊಂಡು ಈ ೩೨೭ ಚದರ ಕಿಲೋಮೀಟರ್ ವಿಸ್ತಾರದ ಪ್ರದೇಶವನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ. ಅಲ್ಲಿ ಚೀನೀ ಜನಸಂಖ್ಯೆ ಎರಡು ಮಿಲಿಯನ್ ಇದ್ದು ಅದು ಫೋರ್ಡ್ ವಾಹನ ಬಿಡಿ ಭಾಗಗಳ ಜೋಡಣೆ ಉದ್ಯಮ ಹಾಗೂ ಪೆಪ್ಸಿಕೋಲವನ್ನು ಸೀಸೆಗೆ ತುಂಬುವ ಉದ್ಯಮ ನಡೆಸುತ್ತಿವೆ. ಚೀನಾದಿಂದ ಹೊರಹೋದವರು ತಮ್ಮ ತಾಯ್ನಾಡಿಗೆ ಮರಳಲು ಮತ್ತು ಅಲ್ಲೇ ಮುಕ್ತಿಹೊಂದಲು ಬಯಸುವವರಿಗೆ ಸ್ಮಶಾನಗಳಿಗಾಗಿ ತುಂಡು ಜಮೀನುಗಳನ್ನು ಮಾರಲು ಹಾಂಗ್‌ಕಾಂಗ್ ಇನ್‌ವೆಸ್ಟ್‌ಮೆಂಟ್ ಕಂಪನಿಗೆ ಶೂಮ್ಚುನ್ ಆಡಳಿತ ಅನುಮತಿ ನೀಡಿವೆ.

ಆದರೆ ಚೀನಾಕ್ಕೆ ಹಾಂಗ್‌ಕಾಂಗ್‌ನಿಂದ ಇಷ್ಟೆಲ್ಲ ಉಪಯುಕ್ತತೆಯಿದ್ದರೂ ಅಲ್ಲಿನ ಸಮುದಾಯದಲ್ಲಿ ಒಂದು ಬಗೆಯ ಆತಂಕ ಆವರಿಸಿದೆ. ಇತಿಹಾಸದ

ಸಂಧಿಕಾಲದಿಂದಾಗಿ ಖಾಸಗಿ ಆಸ್ತಿಯ ದುರ್ಗವಾದ ಇದರ ಒಡೆತನದಲ್ಲಿ ಸ್ಥಿರತೆ ಇಲ್ಲ. ಹಾಂಗ್‌ಕಾಂಗ್ ದ್ವೀಪವೂ ಸೇರಿದಂತೆ ವಸಾಹತುವಿನ ೨೩೬ ದ್ವೀಪಗಳು ಮತ್ತು ನಡುಗಡ್ಡೆಗಳಲ್ಲಿ ಅನೇಕವಕ್ಕೆ ನೀರಿನ ಅಭಾವವಿದೆ ಮತ್ತು ಅನೇಕವು ವಾಸಕ್ಕೆ ಅನಾನುಕೂಲಕರವಾಗಿವೆ. ಆದ್ದರಿಂದ ತನ್ನ ಶೇಕಡಾ ೩೦ ರಷ್ಟು ನೀರಿನ ಅಗತ್ಯ ಮತ್ತು ಶೇಕಡಾ ೬೦ರಷ್ಟು ಆಹಾರ ಪೂರೈಕೆಗಾಗಿ ಹಾಂಗ್‌ಕಾಂಗ್ ತನ್ನ ಬೃಹತ್ ನೆರೆಯ ದೇಶವನ್ನು ಅವಲಂಬಿಸಬೇಕಾಗಿದೆ.

ಮಿಗಿಲಾಗಿ, ಹಾಂಗ್‌ಕಾಂಗ್‌ನ ಉಳಿವು ಮುಖ್ಯ ಭೂ ಭಾಗದ ನ್ಯೂ ಟೆರ್ರಿಟರೀಸ್ ಎಂದು ಕರೆಯಲ್ಪಡುವ ೯೮೮ ಚ.ಕಿ.ಮೀ. ವಲಯದ ಮೇಲೆ ನಿಂತಿದೆ. ಅದನ್ನು ಚೀನಾದಿಂದ ಬ್ರಿಟನ್‌ಗೆ ಗುತ್ತಿಗೆಯಾಗಿ ಕೊಡಲಾಗಿತ್ತು. ಈ ಕರಾರಿನ ಅವಧಿ ಈಗ್ಗೆ ಸರಿಯಾಗಿ ೧೫ ವರ್ಷಗಳಿಗೆ ಮುಗಿದುಹೋಗುತ್ತದೆ. ಬ್ರಿಟನ್ನಾಗಲಿ, ಚೀನಾವಾಗಲಿ ಭವಿಷ್ಯದ ಬಗ್ಗೆ ಯಾವುದೇ ಯೋಜನೆಯನ್ನು ಪ್ರಕಟಿಸಿಲ್ಲ. ಬ್ರಿಟನ್ ಮತ್ತು ಚೀನಾಗಳು ಬೇರೆ ರೀತಿಯಲ್ಲಿ ಯೋಚಿಸದೆ ಹೋದರೆ ನಮಗೆ ತಿಳಿದಂತೆ ಹಾಂಗ್‌ಕಾಂಗ್ ೧೯೯೭ರ ಜೂನ್ ೩೦ರ ಮಧ್ಯ ರಾತ್ರಿಗೆ ಸರಿಯಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.

ಪೀಕಿಂಗ್‌ಗೆ ಕಳೆದ ಸೆಪ್ಟಂಬರ್‌ನಲ್ಲಿ ಬ್ರಿಟಿಷ್ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಭೇಟಿ ನೀಡಿದ ಮೇಲೆ ಚೀನೀಯರು ಮತ್ತು ಬ್ರಿಟಿಷ್ ರಾಜ ತಂತ್ರಜ್ಞರು ವಸಾಹತುವಿನ ಭವಿಷ್ಯದ ಬಗ್ಗೆ ಮಾತುಕತೆ ನಡೆಸುತ್ತಿದ್ದಾರೆ. ಅತ್ಯಂತ ರಹಸ್ಯವಾಗಿ ನಡೆಯುತ್ತಿರುವ ಈ ಬಹುಸಂಕೀರ್ಣವಾದ ಸಂಧಾನ ಸುಮಾರು ಒಂದು ವರ್ಷಕ್ಕೂ ಹೆಚ್ಚುಕಾಲ ತೆಗೆದುಕೊಳ್ಳುವ ಸಾಧ್ಯತೆ ಇದೆ. ಪೀಕಿಂಗ್‌ನಿಂದ ಈ ಹಿಂದೆ ಹೊರಟ ಹೇಳಿಕೆಗಳು ಚೀನೀಯರು ಪೂರ್ಣ ಸಾರ್ವಭೌಮತ್ವದ ಪುನರ್ ಸ್ಥಾಪನೆಗೆ ಒತ್ತಾಯಿಸಬಹುದೆಂದು, ಸೂಚಿಸುತ್ತವೆ. ಬ್ರಿಟನ್ನಿನ ಸಮುದಾಯದ ಬಂಡವಾಳಶಾಹಿ ವ್ಯವಸ್ಥಾಪನೆಯಲ್ಲಿ ಮಧ್ಯ ಪ್ರವೇಶಿಸದೆ ಚೀನಾವು ತನ್ನ ನಿಯಂತ್ರಣವನ್ನು ಪಡೆಯುವಂತಹ ಹೊಸ ಸೂತ್ರವೊಂದು ಹೊರಬರಬಹುದೆಂದು ಬ್ರಿಟಿಷರು ನಿರೀಕ್ಷಿಸಿದ್ದಾರೆ.

ಈ ಕುತೂಹಲಕಾರಿ ರಾಜತಾಂತ್ರಿಕ ಜೂಜಿನಲ್ಲಿ ಬ್ರಿಟಿಷರಿಗಿರುವ ಮುಖ್ಯ ದಾಳವೆಂದರೆ ಹೆಚ್ಚು ದೊಡ್ಡದಾದ ಮತ್ತು ಚೀನಾದಿಂದ ಹೊರಗಿರುವ ಹಾಗೂ ರಾಷ್ಟ್ರೀಯ ಚೀನೀ ಸರ್ಕಾರದ ನಿಯಂತ್ರಣದಲ್ಲಿರುವ ದ್ವೀಪ ಪ್ರಾಂತ್ಯವಾದ ತೈವಾನ್‌ನ (೧೮ ಮಿಲಿಯನ್ ಜನಸಂಖ್ಯೆ) ಭವಿಷ್ಯ. ಹಾಂಗ್‌ಕಾಂಗ್‌ನಂತೆಯೇ ತೈವಾನ್ ಕೂಡ ಬಂಡವಾಳಶಾಹಿ ಆರ್ಥಿಕತೆಹೊಂದಿದ್ದು ಕಮ್ಯೂನಿಸ್ಟ್

ಸಮಾಜದಲ್ಲಿ ವಾಸಿಸಲು ಒಲ್ಲದ ದೊಡ್ಡ ಪ್ರಮಾಣದ ಮಧ್ಯಮ ವರ್ಗದಿಂದ ಕೂಡಿದೆ. ಹಾಂಗ್‌ಕಾಂಗ್‌ನ ಮೇಲೆ ಯಾವುದೇ ಬದಲಾವಣೆಗಳನ್ನು ಹೇರಿದರೆ ಅದರಿಂದ ಅಲ್ಲಿನ ಹಣಕಾಸು ವ್ಯವಸ್ಥೆಯು ಕುಸಿಯುತ್ತದೆ. ಅಥವಾ ವಸಾಹತುವಿನಿಂದ ಬೃಹತ್ ಪ್ರಮಾಣದಲ್ಲಿ ನಿರಾಶ್ರಿತರು ಹೊರಹೋಗುತ್ತಾರೆ. ಇದರಿಂದ ತೈವಾನನ್ನು ಶಾಂತಿಯುತವಾಗಿ ಮುಖ್ಯ ಭೂ ಭಾಗದೊಂದಿಗೆ ಏಕೀಕೃತಗೊಳಿಸಬೇಕೆಂಬ ಚೀನಾದ ಭರವಸೆ ಎಂದೆಂದಿಗೂ ಅವಸಾನವಾದಂತೆಯೇ.

ಅದೇ ವೇಳೆಗೆ ಹಾಂಗ್‌ಕಾಂಗ್‌ನ ಬಹುಸಂಖ್ಯಾತ ಆಶಾವಾದಿಗಳು ಚೀನಾ ಹಾಕಿಕೊಂಡಿರುವ ಆರ್ಥಿಕ ಕಾರ್ಯಕ್ರಮಕ್ಕೆ ಈ ವಸಾಹತುವಿನ ಮಹತ್ವ ಸಾಕಷ್ಟಿದೆ ಎಂಬ ಅಂಶದತ್ತ ಬೆಟ್ಟು ತೋರಿಸುತ್ತಾರೆ ಹಾಗೂ ಅವರು "ಒಂದು ರೊಟ್ಟಿ ಕಸಿದುಕೊಳ್ಳುವುದರಿಂದ ನಿನ್ನ ಹಸಿವು ತೀರದು" ಎಂಬ ಚೀನೀ ಗಾದೆಯನ್ನು ಅನುಮೋದಿಸುತ್ತಾರೆ. ಇತಿಹಾಸದಲ್ಲಿನ ಅತ್ಯಂತ ದೊಡ್ಡ ಮತ್ತು ಸಂಪತ್ಭರಿತವಾದ ಬಂಡವಾಳಶಾಹಿ ರೊಟ್ಟಿಯ ಬಗ್ಗೆ ರಾಜಿಮಾಡಿಕೊಳ್ಳುವುದು ಮತ್ತು ಭರವಸೆ ನೀಡುವುದು ಚೀನಾದ ಕೈಯಲ್ಲಿದೆ. ಕೇವಲ ಒಂದು ರೊಟ್ಟಿಗಾಗಿ ಆಶಿಸದ ಇಡೀ ರೊಟ್ಟಿ ಅಂಗಡಿಯನ್ನು ಯಾರು ನಡೆಸಬೇಕೆಂಬ ವಿಷಯದ ಬಗ್ಗೆ ಇತ್ಯರ್ಥಮಾಡಿಕೊಳ್ಳಲಾದರೂ ಕೆಲವು ವರ್ಷಗಳ ಕಾಲ ಯಥಾಸ್ಥಿತಿಯನ್ನು ಮುಂದುವರಿಸುವುದು ಅನಿವಾರ್ಯವೆಂಬ ಭಾವನೆಯನ್ನು ಪೀಕಿಂಗ್ ತಳೆಯಬಹುದೆಂಬ ನಿರೀಕ್ಷೆ ಇನ್ನೂ ಹಾಂಗ್‌ಕಾಂಗ್‌ನಲ್ಲಿದೆ.

ಡಿ. ಎಸ್. ಜಯಪ್ಪಗೌಡ



ಅಜ್ಞಾನವು ಚಂದ್ರತಾರೆಗಳಿಲ್ಲದ ಒಂದು ರಾತ್ರಿಯೇ ಸೈ.

—ಕನ್‌ಫ್ಯೂಶಿಯಸ್

ಗಿಡಮರಗಳನ್ನು ಪ್ರೀತಿಸಿದಾತ

ಬಿಳಿಯ ಅಧಿಕಾರಿಯೊಬ್ಬ ಭಾರತದಲ್ಲಿ ಅರಣ್ಯವನ್ನು ನೆಟ್ಟು ಬೆಳೆಸಿದ. "ಮರಗಳನ್ನಾತ ಹೃತ್ಪೂರ್ವಕ ಪ್ರೀತಿಸಿದ. ಪ್ರತಿಯಾಗಿ ಅವುಗಳೂ ಪ್ರೀತಿ ತೋರಿಸಿದುವೆಂದು ನನ್ನೆಣಿಕೆ."

ಒಂದು ಬೆಳಗ್ಗೆ ನನ್ನ ತಾತನ ಜತೆ ಮನೆಯ ಜಗಲಿಯ ಮೆಟ್ಟಿಲಲ್ಲಿ ಕುಳಿತಿದ್ದೆ. ಹತ್ತಿರದಲ್ಲೇ ಒಂದು ದ್ರಾಕ್ಷಿ ಬಳ್ಳಿಯ ಕುಡಿ ಚಾಚಿಕೊಂಡಿತ್ತು. ಉತ್ತರ ಭಾರತದ ಚಳಿಗಾಲದ ಮೃದು ಬಿಸಿಲು. ಆ ಎಳೆ ಚಿಗುರು ತಾತನ ಬಳಿಗೆ ಸರಿಯತೊಡಗಿತು. ನೋಡುತ್ತಿದ್ದಂತೆಯೇ ನಿಧಾನವಾಗಿ ಚಲಿಸುತ್ತಾ ಮೆಟ್ಟಿಲುಗಳನ್ನು ದಾಟಿ ತಾತನ ಪಾದ ಸ್ಪರ್ಶಿಸುತ್ತಿದೆ! ನಾವಿಬ್ಬರೂ ಮಂತ್ರಮುಗ್ಧರಾದೆವು! ಪರಮಾಶ್ಚರ್ಯ ಹೊಂದಿದೆವು!

ನೀವು ಇದಕ್ಕೆ ವೈಜ್ಞಾನಿಕ ವಿವರಣೆ ನೀಡಬಹುದು—ಬೆಳಕಿಗಾಗಿ ಬಿಸಲಿಗಾಗಿ ಈ ರೀತಿಯ ಚಲನೆ ಸಸ್ಯಗಳಲ್ಲಿ ಸ್ವಾಭಾವಿಕ ಎಂದೆಲ್ಲ ಹೇಳಬಹುದು. ಆದರೆ ನಾನು ತಿಳಿಯುವ, ಮೆಚ್ಚುವ, ಭಾವನೆ—ಆ ಬಳ್ಳಿ ತಾತನ ಸಾಮಿಪ್ಯ ಬಯಸುತ್ತಿದೆ; ಅವನ ಬಳಿಯಲ್ಲೇ ಸುಳಿದಾಡುವ ತವಕದಿಂದಿದೆ!"

ತೋಟದಲ್ಲಿ ಒಮ್ಮೊಮ್ಮೆ ಯಾವುದಾದರೊಂದು ಮರದ ಬುಡದಲ್ಲಿ ಕುಳಿತಿದ್ದರೆ, ನನಗೇಕೋ ಏಕಾಂಗಿಯಾದಂತೆನಿಸಿ ಮನಸ್ಸು ವ್ಯಾಕುಲಗೊಳ್ಳುತ್ತಿರುತ್ತಿದೆ. ಆದ್ರೆ, ನಮ್ಮ ತಾತ ಜತೆ ಸೇರಿದರೆ ಸಾಕು, ತೋಟವೆಲ್ಲ ಒಂದು ಆನಂದ ವನವಾಗಿ ಮಾರ್ಪಡುವುದು!

ತಾತ ಭಾರತದ ಅರಣ್ಯ ಇಲಾಖೆಯಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದರು. ಗಿಡಮರಗಳನ್ನು ಪ್ರೀತಿಸುವುದು ಅವರ ಸ್ವಭಾವವೇ ಆಗಿತ್ತು. ಕೆಲಸದಿಂದ ನಿವೃತ್ತರಾದ ಮೇಲೆ 'ಡೆಹ್ರಾ' ಪಟ್ಟಣದ ಹೊರವಲಯದಲ್ಲೊಂದು ಬಂಗಲೆಯನ್ನು ಕಟ್ಟಿಸಿ, ಸುತ್ತೆಲ್ಲ ಗಿಡಮರಗಳನ್ನು ಬೆಳೆಸಿದರು. ನಿಂಬೆ, ಮಾವು, ಕಿತ್ತಳೆ, ಸೀಬೆಗಳಲ್ಲದೆ ನೀಲಗಿರಿ, ಜಕರಾಂಡಾ, ಸುವಾಸನೆಯುಳ್ಳ ಪರ್ಶಿಯನ್ ಲಿಲಿಯಾಕ್ ಹೂಮರಗಳನ್ನೂ ಬೆಳೆಸಿದ್ದರು. ಫಲವತ್ತಾದ ಆ 'ಡೂನ್' ಕಣಿವೆಯಲ್ಲಿ ಮರಗಳು ಸುಪುಷ್ಟವಾಗಿ ಎತ್ತರವಾಗಿ ಬೆಳೆಯುತ್ತಿದ್ದವು.

ಹಿತ್ತಿಲಿನ ಮೇರೆಯೊಳಗೆ, ಮನೆ ಕಟ್ಟಿಸುವುದಕ್ಕೂ ಮೊದಲೇ ದೊಡ್ಡ

ಆಧಾರ: ೧೯೮೦ರ ಸೆಪ್ಟೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ರಸ್ಕಿನ್ ಬಾಂಡ್‌ರ 'ಎ ಮ್ಯಾನ್ ಲವ್ಡ್ ಟ್ರೀಸ್' ಎಂಬ ಲೇಖನದ ಕನ್ನಡಾನುವಾದ.

ದೊಂದು ಅಶ್ವತ್ಥ ಮರವಿತ್ತು. ಅದು ಹಳೆಯ ಕೊಟ್ಟಿಗೆಯ ಗೋಡೆಯನ್ನೊಡೆಯುತ್ತಾ, ಇಟ್ಟಿಗೆಗಳನ್ನು ಕದಲಿಸಿ ಕೆಡವುತ್ತಾ, ಬಿರುಸಾಗಿ ಬೆಳೆಯುತ್ತಿತ್ತು. ಅಶ್ವತ್ಥ ಮರಗಳು ಯಾವಾಗಲೂ ನಯನ ಮನೋಹರವಾಗಿರುತ್ತವೆ. ಬೀಸುವ ಗಾಳಿ ಇರಲಿ, ಇಲ್ಲದಿರಲಿ, ಅದರ ಹರವಾದ ಎಡೆಯ ಬಳುಕುವ ನಡುವಿನ ಎಲೆಗಳು ಬುಗುರಿಯಂತೆ ಗಲಗಲಿಸುತ್ತ, ಕಂಪಿಸುತ್ತ ನಿಮ್ಮನ್ನು "ಬಳಿಗೆ ಬನ್ನಿರಿ; ನೆರಳಿಗೆ ಬನ್ನಿ" ಎಂದು ಕರೆಯುತ್ತಿರುವುದಂತೂ ನಿಶ್ಚಯ.

ನಮ್ಮ ಅಜ್ಜಿ ಅದನ್ನು ಕಡಿದುಹಾಕಲು ಹೇಳುತ್ತಿದ್ದಳು. ಆದರೆ ತಾತ "ಇರಲಿ ಬಿಡೇ, ಮರ ಹಾಗೇ ಇರಲಿ. ಬೇರೆ ಕೊಟ್ಟಿಗೆ ಕಟ್ಟಿಸುವುದೇನೂ ದೊಡ್ಡ ವಿಷಯವಲ್ಲ" ಎನ್ನುತ್ತಿದ್ದರು. ಅಜ್ಜಿಗೆ ಮರಗಳ ಮೇಲೆ ಅಷ್ಟೇನೂ ಆಸಕ್ತಿ ಇರಲಿಲ್ಲ. ಆದರೆ ಹೂಗಿಡದ ಮೇಲೆ ಬಹಳ ಪ್ರೀತಿ. ಅವಳು ಯಾವಾಗಲೂ ಹೂಗಳ ನಾಮಾವಳಿಗಳ ಕೆಟಲಾಗುಗಳನ್ನು ತರಿಸುತ್ತಿದ್ದಳು. ಬೀಜಗಳನ್ನೂ ತರಿಸಿ ಹೂದೋಟ ಬೆಳೆಸುತ್ತಿದ್ದಳು. ತಾತನೂ ಅವಳ ಜತೆ ಸೇರಿಕೊಳ್ಳುತ್ತಿದ್ದರು. ಇದರರ್ಥ ಅವರಿಗೆ ಹೂಗಳ ಮೇಲೆ ವ್ಯಾಮೋಹವೆಂದೇನೂ ಅಲ್ಲ. ಅವರಿಗಿದ್ದ ಮೋಜೆಂದರೆ ಹೂಗಳ ಮೇಲೆ ಅತ್ತಿಂದಿತ್ತ ಹಾರಾಡುವ ಪತಂಗಗಳನ್ನು ನೋಡುತ್ತಿರುವುದು, ಅವರನ್ನುತ್ತಿದ್ದರು. ಪತಂಗಗಳನ್ನು ಆಕರ್ಷಿಸಲು ಒಂದು ಉಪಾಯವೆಂದರೆ ಅವುಗಳಿಗಾಗಿ ಹೂಗಳನ್ನು ಬೆಳೆಸುವುದು.

ತಾತನಿಗೆ ತನ್ನ ಚಿತ್ತಿಲೊಳಗೆ ಮಾತ್ರ ಗಿಡಮರ ಬೆಳೆಸುವುದರಲ್ಲಿ ತೃಪ್ತಿ ಇರಲಿಲ್ಲ. ಮಳೆಗಾಲದಲ್ಲಿ ನಾವು ನದೀ ಪ್ರದೇಶದ ಆಚೆಗಿನ ಕಾಡೊಳಗೆ ಹೋಗುತ್ತಿದ್ದೆವು. ಕೈಯಲ್ಲಿ, ಹೆಗಲಲ್ಲಿ ಎಳೆಯ ಗಿಡಗಳ, ಗೆಲ್ಲುಗಳ ಹೊರೆ ಹೊತ್ತಿರುತ್ತಿದ್ದೆವು. ಇವುಗಳನ್ನು ಕಾಡಿನಲ್ಲಿ ನೆಡುತ್ತಿದ್ದೆವು. ಮೊದಲನೇ ಬಾರಿ ಈ ರೀತಿ ನೆಡುತ್ತಿದ್ದಾಗ ನಾನು ವಿರೋಧಿಸಿದೆ. "ಇಲ್ಲಿಗೆ ಯಾರೂ ಬರುವುದಿಲ್ಲ. ಇವುಗಳ ಅಂದಚಂದ ನೋಡಲು ಯಾರಿದ್ದಾರೆ?" ಎಂದೆ ನಾನು.

ಅದಕ್ಕೆ ಅಜ್ಜನ ಉತ್ತರ—"ನಾವು ಈ ರೀತಿ ನೆಡುವುದು ಬರೀ ಕಾಡಿನ ಸೌಂದರ್ಯ ಹೆಚ್ಚಿಸಲಿಕ್ಕಾಗಿ ಅಲ್ಲ. ನಾವು ಕಾಡು ಬೆಳೆಸುವುದು ಕಾಡಿಗಾಗಿ; ಇಲ್ಲಿ ಬದುಕಿ ಬಾಳುವ ಮೃಗ ಪಕ್ಷಿಗಳಿಗಾಗಿ; ಅವುಗಳಿಗೆ ಇನ್ನೂ ಹೆಚ್ಚಿನ ಆಸರೆಗಾಗಿ; ಆಹಾರಕ್ಕಾಗಿ".

ತಾತ ಇನ್ನೂ ಹೇಳಿದರು "ಮನುಷ್ಯರಿಗೂ ಕಾಡು ಅತೀ ಅವಶ್ಯಕ. ಮರುಭೂಮಿಯನ್ನು ದೂರವಿಡಲು; ಮಳೆಯುಂಟುಮಾಡಲು; ನದಿಗಳು ಅಕ್ಕ

ಪಕ್ಕದ ಮಣ್ಣನ್ನು ತೊಳೆದು ಕೊರೆಯದಂತೆ ಮಾಡಲು; ಹಣ್ಣಿಗಾಗಿ, ಹೂವಿಗಾಗಿ, ಕಾಯಿಗಾಗಿ, ಎಲೆಗಾಗಿ, ಬೀಜಗಳಿಗಾಗಿ, ನಮಗೆ ಕಾಡು ಬೇಕು; ಮೋಪಿಗಂತೂ ಬೇಕೇ ಬೇಕು. ಆದರೆ ಜನ ಮರಗಳನ್ನು ಕಡಿಯುತ್ತಾರೆಯೇ ವಿನಾ ಪುನಃ ಆ ಜಾಗದಲ್ಲಿ ನೆಡುವ ಗೋಜಿಗೆ ಹೋಗುವುದಿಲ್ಲ. ಕೆಲವನ್ನಾದರೂ ನಾವು ನೆಡದೇಹೋದಲ್ಲಿ ಜಗತ್ತು ಒಂದು ದೊಡ್ಡ ಮರುಭೂಮಿಯಾಗುವ ಕಾಲ ಬಂದೀತು!

"ಭೂಮಿಯೆಲ್ಲ ಮರುಭೂಮಿಯಾದರೆ.... ಒಂದು ಮರವೂ ಇಲ್ಲದೇ ಹೋದರೆ ಈ ಭಾವನೆ ಭಯಂಕರ ಸ್ವಪ್ನದಂತೆ ನನ್ನ ಅಂತರ್ಯವನ್ನು ನಡುಗಿಸಿತು. ಆ ಬಳಿಕವೆಲ್ಲ ನಾನು ತಾತನ ಜತೆ ಗಿಡಮರಗಳನ್ನು ನೆಡುವುದರಲ್ಲಿ ಅತ್ಯುತ್ಸಾಹದಿಂದ ಸಹಕರಿಸತೊಡಗಿದೆ. ಕೆಲಸ ಮಾಡುತ್ತ ಅವರು "ಜೋರ್ಜ್ ಮೋರಿಸ್"ರ ಕವನವೊಂದನ್ನು ಹಾಡಿದರು—

ಮರ ಕಡಿವಾತನೇ! ಈ ಮರವನುಳಿಸು
ಇದರ ಕಡಿ ಯೊಂದನು ಮುಟ್ಟದರೂ ಜೋಕೆ!
ತನ್ನ ಯೌವನದಿ ರಕ್ಷಿಸಿತ್ತದು ತನ್ನ
ಇಂದದರ ರಕ್ಷಕನು ನಾನು! ತಡೆ!

ತಾತ ಭಾವಪೂರ್ಣರಾಗಿ ಹೇಳಿದರು—

"ಒಂದು ದಿನ ಮರಗಳು ಪುನಃ ನಡೆಯತೊಡಗಲಿಕ್ಕಿದೆ! ನೋಡುತ್ತಿರು. ಸಾವಿರಾರು ವರ್ಷಗಳಿಂದ ಅವು ನಿಂತಲ್ಲೇ ನಿಂತಿವೆ. ಆದರೆ ಅದಕ್ಕೆ ಹಿಂದೆ ಒಂದು ಕಾಲವಿತ್ತು. ಆಗ ಅವು ಮನುಷ್ಯರಂತೆ ನಡೆದಾಡುತ್ತಿದ್ದುವು. ಆದರೆ ಯಾರೋ ಒಬ್ಬ ಅಧಿಕಪ್ರಸಂಗಿ ಅವಸರದಲ್ಲೊಂದು ಶಾಪವಿತ್ತ! ಅವು ನಿಂತಲ್ಲೇ ಬೇರುಬಿಡುವಂತೆ—ಸ್ಥಾವರವಾಗುವಂತೆ ಮಾಡಿದ. ಹಾಗಿದ್ದರೂ ಗಿಡಗಳು ತಮ್ಮ ಚಲಿಸುವ ಪ್ರಯತ್ನವನ್ನು ನಿಲ್ಲಿಸಲಿಲ್ಲ. ನೋಡು! ಅವು ಹೇಗೆ ತಮ್ಮ ಕೈಗಳನ್ನು ದೂರ ದೂರಕ್ಕೆ ಚಾಚುತ್ತಿವೆ! ಕೆಲವು ಮರಗಳಂತೂ ಆಲದ ಮರದಂತೆ ತಮ್ಮ ಸಂಚಾರೀ ಬೇರುಗಳಿಂದ ದೂರ ಸಾಗುವ ಯತ್ನದಲ್ಲೇ ಇವೆ!

ನದಿಯು ಹಾವು, ಮಳೆ ಬಂದರೂ ಅಲ್ಲಲ್ಲಿ ಒಣಗಿಕೊಂಡೇ ಇತ್ತು. ಅಲ್ಲೊಂದು ದ್ವೀಪವೂ ಇತ್ತು. ಅದರಲ್ಲಿ ಬಂಡೆಗಲ್ಲುಗಳು ತುಂಬಿದ್ದುವು. ಆ ನದಿ ಬೇಸಿಗೆಯಲ್ಲಿ ಪೂರಾ ಬತ್ತಿಹೋಗುತ್ತಿತ್ತು. ಈ ರೀತಿ ಗುಡ್ಡಬೆಟ್ಟಗಳ ಇಳಿಜಾರುಗಳಲ್ಲಿ, ತಪ್ಪಲು ಪ್ರದೇಶದಲ್ಲಿ, ನದಿಗಳು ಮಳೆಗಾಲದಲ್ಲಿ ಉಕ್ಕಿ

ಹರಿಯುವುದು, ಬೇಸಿಗೆ ಬಂದರೆ ಸಂಪೂರ್ಣ ಒಣಗಿ ಹೆಸರಿಲ್ಲದಂತಾಗುವುದು ಸರ್ವಸಾಮಾನ್ಯ. ಆ ದ್ವೀಪದಲ್ಲಿ ಒಂದು ಚಿಕ್ಕ ಮಾವಿನ ಮರವು ಬೆಳೆಯತೊಡಗಿತ್ತು. "ಇಲ್ಲಿ ಒಂದು ಮಾವು ಬೆಳೆಯಬಲ್ಲುದಾದರೆ ಬೇರೆ ಮರಗಳೂ ಬೆಳೆದಾವು." ಇದು ಅಜ್ಜನ ವಾದ! ನದಿ ತುಂಬಿ ಹರಿಯುವುದಕ್ಕೆ ಮೊದಲೇ ನಡೆದು ದಾಟುವಂತಿದ್ದಾಗ, ಒಂದು ದಿನ, ನಾವು ಹಲವಾರು ಹುಣಸೆ ಸಸಿಗಳನ್ನು, ಲೆಬರ್‌ನಮ್ (ಹಳದಿ ಹೂಗಳನ್ನು ಬಿಡುವ ಪೊದೆಯಂತೆ ಬೆಳೆವ ಗಿಡ) ಪ್ರವಾಳ ವಿದ್ರುಮ (ಹವಳ ಬಣ್ಣದ ಹೂಬಿಡುವ ಮರ-ಹಾಲವಾಣದ ಮರ) ಗಳ ಗೆಲ್ಲುಗಳನ್ನು ಹೊತ್ತು ಆ ದ್ವೀಪಕ್ಕೆ ಹೋದೆವು. ಆ ದಿನವೆಲ್ಲ ಆ ಗಿಡಗಳನ್ನು ನೆಡುತ್ತಾ ಕಳೆದವು.

ಮಳೆಗಾಲ ಮನಬಂದಂತೆ ಸುತ್ತಾಡಲು ಹಿತವಾಗಿದೆ. ಒಂದೊಂದು ಜಾಗವೂ ಒಂದೊಂದು ಹೊಸತನವನ್ನು ಪಡೆದಿದೆ! ಬೋಳಾಗಿದ್ದ ಕೊಂಬೆಗಳಲ್ಲಿ, ನೆಲದಲ್ಲಿ, ಕಲ್ಲುಬಂಡೆಗಳಲ್ಲಿ, ಎಲ್ಲೆಲ್ಲೂ ಮಳೆಯ ಮಂತ್ರ ಸ್ಪರ್ಶದಿಂದ ಜೀವಕಳೆ ತುಂಬಿದೆ. ವನವೆಲ್ಲ ಚಿಗುರಿ ಹಸಿರು ಹಬ್ಬಿದೆ. ಕ್ಷೀಣಗೊಂಡ ದ್ರಾಕ್ಷಿ ಬಳ್ಳಿಯ ಎಲೆಗಳು ಹರವಾಗಿ ಪಸರಿಸತೊಡಗಿವೆ. ಇದುವರೆಗೆ ಕಾಣದಿದ್ದ ಗಿಡಗಳು ಸಿಕ್ಕಸಿಕ್ಕಲ್ಲಿ ಹುಟ್ಟಿ ಬೆಳೆದಿವೆ. ಮಾಡಿನ ಮೇಲೆ ಅಶ್ವತ್ಥ ಗಿಡ ಹುಟ್ಟಿ ಬೇರು ಬಿಟ್ಟಿದೆ. ಕಿಟಕಿಯ ಅಂಚಿನಲ್ಲಿ ಮಾವು ಮೊಳೆತು ಸಸಿಯಾಗತೊಡಗಿದೆ. ಅವುಗಳನ್ನು ಕಿತ್ತೆಸೆಯಲು ನನಗಿಷ್ಟವಾಗುತ್ತಿಲ್ಲ. ಆದರೂ ಮನೆ ಬಿದ್ದು ಹೋಗದಿರಬೇಕಾದರೆ ಅವನ್ನು ಕೀಳಲೇಬೇಕು!


"ನೀವು ಬೇಕಿದ್ದರೆ ಮರದಲ್ಲೇ ವಾಸಮಾಡಿ. ನನ್ನದೇನೂ ಅಡ್ಡಿ, ಆಕ್ಷೇಪವಿಲ್ಲ." ನಮ್ಮಜ್ಜಿ ಖಾರವಾಗಿ ಹೇಳಿದಳು—"ನನಗೆ ಮಾತ್ರ ನೆತ್ತಿಯ ಮೇಲೊಂದು ಮಾಡು ಬೇಕೇಬೇಕು. ಕಾಡು ಬೆಳೆದು ನನ್ನ ಮನೆ ನೆಲಕ್ಕುರುಳುವುದನ್ನು ನಾನು ಸಹಿಸಲಿಲ್ಲ."

ಎರಡನೇ ಮಹಾಯುದ್ಧ ಪ್ರಾರಂಭವಾದಾಗ ನನ್ನನ್ನು ಶಾಲಾ ಬೋರ್ಡಿಂಗಿಗೆ ಕಳಿಸಿಕೊಟ್ಟರು. ರಜಾದಿನಗಳಲ್ಲಿ ಡಿಲ್ಲಿಯ ನನ್ನ ತಂದೆಯ ಮನೆಯಲ್ಲಿರುತ್ತಿದ್ದೆ. ಕೆಲ ದಿನಗಳಲ್ಲಿ ನನ್ನ ತಾತ, ಅಜ್ಜಿ, ಆ ಹಿತ್ತಿಲು ಮನೆಯನ್ನು ಮಾರಿ ಇಂಗ್ಲೆಂಡಿಗೆ ಹೊರಟುಹೋದರು. ಎರಡು ಮೂರು ವರ್ಷ ಕಳೆದು ಮುಂದಿನ ಶಿಕ್ಷಣಕ್ಕಾಗಿ ನಾನೂ ಇಂಗ್ಲೆಂಡಿಗೆ ಹೋದೆ. ಆ ಬಳಿಕ ಹಲವಾರು ವರ್ಷ ಭಾರತದಿಂದ ದೂರವೇ ಇದ್ದೆ. ಈಗ ಸದ್ಯವೇ "ಡೆಹರಾ"ಕ್ಕೆ ಬರುವ ಅವಕಾಶ ಸಿಕ್ಕಿತು.

ಮೊದಲಾಗಿ ಮಾಡಿದ ಕೆಲಸವೆಂದರೆ, ನಮ್ಮ ಹಳೆ ಮನೆಯನ್ನೊಮ್ಮೆ ನೋಡಲು ಹೋದುದು—ಅದು ಮಾತ್ರ ಏನೂ ಬದಲಾಗಿರಲಿಲ್ಲ. ಅಲ್ಲಿಂದ ನದೀ ಪ್ರದೇಶಕ್ಕೆ ಬಂದೆ. ಅದು ಫೆಬ್ರುವರಿ ತಿಂಗಳಾಗಿತ್ತು. ನದೀ ಪಾತ್ರವೆಲ್ಲ ಒಣಗಿಹೋಗಿತ್ತು. ಅಲ್ಲಿಂದಾಚೆಗೆ ನನ್ನನ್ನು ಆಕರ್ಷಿಸಿದ್ದು ಪ್ರವಾಳವಿದ್ರುಮದ ಸುಂದರ ಕೆಂಪು ಹೂಗೊಂಚಲುಗಳಿಂದ ತುಂಬಿದ ರಮಣೀಯ ನೋಟ. ಬೆಂಗಾಡಿನಂತಿರುತ್ತಿದ್ದ ಕುದುರಿಗೆ ಬದಲಾಗಿ ಪುಟ್ಟ, ಹಸಿರು, ನಂದನವನ ಒಂದು ನಿರ್ಮಿತವಾಗಿತ್ತು. ಆ ಮರಗಳ ಒಳಗೆ ಹೋದೆ. ಅಲ್ಲಿ ಕೆಲ ಅಳಿಲುಗಳು ವಾಸವಾಗಿದ್ದವು! ಕೋಗಿಲೆ-ಉದ್ದ ಬಾಲದ ಕುಕ್ಕೂ—ನನ್ನನ್ನು ತರಾಟೆಗೆ ತೆಗೆದುಕೊಳ್ಳುತ್ತಿದೆಯೋ ಎಂಬಂತೆ 'ನೀ....ನ್ಯಾ....ರೂ....ನೀ.... ನ್ಯಾ....ರೂ....ಎಂದು ಅಲೆ ಅಲೆಯಾಗಿ ಉಲಿಯಿತು!

ಅವರೆ ಮರಗಿಡಗಳು ನನ್ನ ಪರಿಚಯವಿದ್ದವುಗಳಂತೆ ಒಂದು ಇನ್ನೊಂದರೊಡನೆ ಪಿಸುದನಿಯಲ್ಲಿ ಮಾತಾಡಿಕೊಂಡಂತೆ ನನ್ನನ್ನು ಕೈಬೀಸಿ ಒಳಗೆ ಬಾರೆಂದು ಕರೆದುವು. ಸುತ್ತೆಲ್ಲ ಕಣ್ಣು ಹಾಯಿಸಿದೆ. ಹಲವು ಚಿಕ್ಕ ಮರಗಳು, ಕಾಡು ಸಸಿಗಳು, ಹುಲ್ಲು ಪೊದೆಗಳು ಹುಟ್ಟಿಕೊಂಡಿದ್ದುವು—ನಾವು ನೆಟ್ಟ ಮರಗಳ ಕೆಳಗೆ ಸುರಕ್ಷಿತವಾಗಿ ಬೆಳೆದಿದ್ದುವು—ಹೌದು! ಎಷ್ಟೋ ಹಿಂದೆ ನಾವೇ ನೆಟ್ಟ ಮರಗಳಿವು! ಅವರೆ ಅವೆಲ್ಲ ಇಮ್ಮಡಿಮುಮ್ಮಡಿಯಾಗಿ ಎಲ್ಲೆಲ್ಲೂ ಬೆಳೆದಿವೆ! ಅವು ಪುನಃ ನಡೆಯುತೊಡಗಿವೆ! ನಮ್ಮ ತಾತನ ಕನಸು ಜಗತ್ತಿನೊಂದು ಮೂಲೆಯಲ್ಲಿ ನೆನಸಾಗಿದೆ!

ಸರಸ್ವತಿ ಬಡಕ್ಕಿಲ



ಅಜ್ಞಾನ, ಅಶಿಸ್ತುಗಳೇ ಮಾನವನ ಎಲ್ಲ ತೊಂದರೆಗಳಿಗೂ ಮೂಲ. —ಕೌಟಿಲ್ಯ

ಖೇಜದಾಲಿಯ ವೀರರು

ಉತ್ತರಪ್ರದೇಶದ ಗಡವಾಲ್‌ನಲ್ಲಿ ಬಹುಗುಣ ಹುಟ್ಟುಹಾಕಿದ 'ಮರ ಉಳಿಸುವ ಚಿಪ್ಕೊ ಚಳುವಳಿ'ಗೆ ಸ್ಫೂರ್ತಿ ೨೫೦ ವರ್ಷಗಳ ಹಿಂದೆ ರಾಜಾಸ್ಥಾನದ ಖೇಜದಾಲಿಯಲ್ಲಿ ನಡೆದ ಒಂದು ಘಟನೆ. ಮರಕಟುಕರ ಕತ್ತಿಗೆ ಅಮೃತಾದೇವಿ ತಲೆ ಒಡ್ಡಿದಳು. ಅವಳೊಂದಿಗೆ ಅವಳ ಮಕ್ಕಳು ಹಾಗೂ ಆ ಗ್ರಾಮದ ೩೬೩ ಮಂದಿ ಮರಗಳನ್ನುಳಿಸುವ ಸಲುವಾಗಿ ಆತ್ಮಾರ್ಪಣೆ ಮಾಡಿದರು. ಈ ನಿಜ ಘಟನೆಯನ್ನು ಆಧರಿಸಿದ ನಾಟಕ ಖೇಜದಾಲಿಯ ವೀರರು.

ಕಥೆಗಾರ: ಹದಿನೈದನೇ ಶತಮಾನ ರಾಜಸ್ಥಾನದ ಒಂದು ಹಳ್ಳಿ.

ಒಬ್ಬ: ಜಾಂಜೋಜಿ ಮಹಾರಾಜ್ ಇಲ್ಲಿವರೆಗೆ ಹಾಗೂ ಹೀಗೂ ನೀರು ಪೂರೈಸ್ತಿದ್ದ ಕೆರೆಯೂ ಪೂರ್ತಿ ಬತ್ತಿ ಹೋಯ್ತು. ಆಷಾಢ ಬಂದರೂ ಮಳೆ ನಿಸಾನೆಯೇ ಇಲ್ಲ. ಜನರಿಗೆ ಕುಡಿಯಾಕೆ ನೀರಿಲ್ಲದಾಗ ಇನ್ನೂ ನಮ್ಮ ಜಾನುವಾರಗಳ ಕಥೆ ಕೇಳೋದೆ ಬ್ಯಾಡ. ಈಗಾಗ್ಲೆ ಮುಕ್ಕಾಲು ಮೂರು ವಾಶಿ ಜಾನುವಾರ್ ಸತ್ತುಹೋದ್ರೋ. ಇನ್ನೂ ಆಳಿದುಳಿದ್ದನ್ನೂ ಉಳಿಸ್ಕೊಂಡು ನಾವೂ ಉಳೀಬೇಕಾದ್ರೆ ಎಲ್ಲಾದ್ರು ಗುಳೇಹೋಗ್ಬೇಕು.

ಇನ್ನೊಬ್ಬ: ನಾನು ನನ್ನ ಮಗನ್ನ ಕಳಕಂಡೆ. ಇನ್ನು ಮಳೆ ಬಂದ್ರು ಉಳಾಕೆ ಎತ್ತಿಲ್ಲ. ಇನ್ನುಳಿದ ಒಬ್ಬ ಮಗನ್ನ ಉಳಿಸ್ಕೋ ಬೇಕೊಂದ್ರೆ ಗುಳೇ ಹೋಗೋದೆ ಸೈ. ಎಲ್ಲಾರೂ ಹೋಗ್ತಾನ ಜಾಂಜೋಜಿ ಮಾರಾಜ್. ನೀವು ಇಲ್ಲೀ ತನಕ ಗೋವುಗಳ ಶ್ಯಾವೆ ಉಳಿಸ್ಕೊಂಡು ಬಂದ್ರಿ. ದೂರದೂರ ಹೋಗಿ ನೀರು ಮೇವು ತಂದಾಕಿ ಸಲಯಿದ್ರಿ. ಆದ್ರೂನೂವೆ ನಿಮ್ಮ ಗೋಸಾಲೆ ಖಾಲಿ ಆಯ್ತಾ ಆದೆ. ನೀವು ನಮ್ಮ ಊರಿಗೆ ಗುರುಗಳಾಗಿದ್ರಿ. ನಿಮ್ಮ ಬಿಟ್ಟ ನಾವು ಯಾವ ಕೆಲಸಾನು ಮಾಡಾಕಿಲ್ಲ. ಈಗ ಗುಳೇ ಓಗಾಕೆ ನೀವೇ ಮುಂದಾಗ ಬೇಕು.

ಜಾಂಜೋಜಿ: ನೀನು ಹೇಳೋದು ನಿಜ ಅಜ್ಜ, ಆದ್ರೆ ನಾನು ಬರೋದಿಲ್ಲ. ನನ್ನ ಹಿರಿಯರು ಹುಟ್ಟಿ ಬೆಳೆದ ಊರು. ನಾನೂ ನನ್ನ ಅರ್ಧ ಆಯುಷ್ಯ ಈ ಊರಿನಲ್ಲಿ ಕಳೆದಿದೇನೆ. ಈ ಊರು ನನ್ನ ಗೋಶಾಲೆ ಇವುಗಳ ಸಂಬಂಧ ಕಡಿಯೋದು ನಾನು ಸತ್ತಾಗ ಮಾತ್ರ. ನಾನು ಈ ಬರಗಾಲದಿಂದ ಅನ್ನ ನೀರಿಲ್ಲದೇ ಇಲ್ಲೇ ಪ್ರಾಣ ಬಿಟ್ಟರೂ ಸರಿ, ನಾನು ಗುಳೇ ಹೋಗೋನಲ್ಲ.

ಒಬ್ಬ: ಹಾ ಹೀಂಗಂದ್ರೆ ಹ್ಯಾಂಗೆ ದೇವ್ರು. ಇಡೀ ಊರೇ ಗುಳೇ ಓಯ್ತಾ ಆದೆ. ನೀವೊಬ್ರೆ ಉಳಿದಾದರೂ ಏನು ಮಾಡಾಕೆ ಆಯ್ತದೆ? ಜನ ಜಾನುವಾರು

ಇಲ್ಲಿದ ಊರಾಗೆ ಇರಾಕೆ ಹ್ಯಾಂಗೆ ಆದೀತು? ಊರ ಬಿಡಾಕೆ ನಮಗೇನು ಸಂತೋಸ ಅಂದಕಂಡೀರಾ? ನಮಗೂ ಬೇಜಾರೇ. ಏನು ಮಾಡಾದು, ದೇವ್ರು ಮುನಿಸ್ಕಂಡವ್ನೆ ಈ ಒಡಪಾಯಿಗಳ ಮ್ಯಾಗೆ, ನಾವು ಮಾಡದ ಪೂಜೆ ಇಲ್ಲ. ನಮ್ಮೂರಿನ ದ್ಯಾವ್ರಿಗೆ ಪರ್ಜನ್ಯ ಮಾಡಿದೆವು. ದೂರ ಊರಿಂದ ಪುರೋಹಿತರನ್ನು ಕರೆಸಿ ಹ್ವಾಮ ಮಾಡಿಸಿದ್ವು. ಆದ್ರೂ ಇನ್ನೂ ದೇವ್ರು ಮಾತ್ರ ನಮ್ಮ ಮ್ಯಾಲೆ ಕೆಂಡ ಕಾರತಾನೆ ಅವ್ನೆ. ಅವನ ಕ್ವಾಪ ಎದುರಿಸ್ಕಂಡು ಬಾಳಕಾಯ್ತದಾ? ನಮ್ಮ ತಂದೆ ಹಾಂಗಿರೋ ನಿಮ್ಮನ್ನೂ ಬಿಟ್ಟು ಹೋಗಾದು ಆಗದ ಮಾತು. ಬನ್ನಿ ಹೋಗಾನ, ಅರ ಮಾಡಬ್ಯಾಡಿ.

ಜಾಂಜೋಜಿ: ಹಿರಿಯ, ನೀನು ಹೇಳೋದು ನಿಜ. ನೀವೆಲ್ಲ ಊರು ಬಿಟ್ಟು ಹೊರಟಿರೋದು ನೋಡಿದ್ರೆ ನನಗೂ ಕರುಳುಬಳ್ಳಿ ಕತ್ತರಿಸ್ಕೊಂಡ ಹೋದ ಹಾಗೆ ಅನ್ನಿಸ್ತಾ ಇದೆ. ನಾವು ಇಡೀಊರ ಜನ ಒಂದೇ ಮನೆ ಮಕ್ಕಳು ಇದ್ದ ಹಾಗೆ ಇದ್ದೆವು. ಆದರೆ ನಾನು, ಈ ಊರು, ಈ ನನ್ನ ಗೋಶಾಲೆ, ನನ್ನ ತಾತ ಮುತ್ತಾತಂದಿರು ಬಾಳಿ ಬದುಕಿದ ಮನೇನ ಅನಾಥ ಮಾಡಿ ಹೋಗೋದು ಎಂದೂ ಆಗದ ಮಾತು. ಅದೂ ಅಲ್ಲದೆ ಬೇರೆ ಊರಿನಲ್ಲಿ ನನ್ನಲ್ಲಿ ಅಳಿದುಳಿದ ಗೋವುಗಳಿಗೆ ನೀರು ಮೇವು ಸಿಕ್ಕೀತೆಂದು ಏನು ಭರವಸೆ? ಎಲ್ಲಾ ಊರಾಗೂ ಇದೇ ಹಾಡೆ. ಇಡೀ ನಮ್ಮ ದೇಶವೇ ಕ್ಷಾಮ ದಿಂದ ಉರೀತಿದೆ. ನನ್ನ ಕಡೇಗಾಲದಲ್ಲಿ ಎಲ್ಲೆಲ್ಲಿಯೋ ಹೋಗಿ ಸಾಯೋದು ನನಗಿಷ್ಟ ಇಲ್ಲ. ಆದ್ರೆ ನನ್ನ ಜೊತೆ ನೀವೆಲ್ಲಾ ಇಲ್ಲೇ ಇರಿ ಅಂತ ಒತ್ತಾಯಿಸ ಲಾರೆ. ಇಲ್ಲಿ ನಿಮಗೆ ಜೀವನ ಸಾಗಿಸೋದು ಸಾಧ್ಯ ಅಂತ ನನಗೂ ನಂಬಿಕೆ ಇಲ್ಲ. ನಾನು ಮಾತ್ರ ಇಲ್ಲಿಯೇ ನನ್ನ ಆಯುಷ್ಯ ತೀರಿಸ್ತೇನೆ. ಬದುಕಿದ್ದರೆ ಪುನಃ ಸುಭಿಕ್ಷವಾದ ಮೇಲೆ ನೀವು ನನ್ನನ್ನು ನೋಡ್ತೀರಿ, ಇಲ್ಲದಿದ್ದರೆ ಇದೇ ನಮ್ಮ ಕಡೇ ಭೇಟಿ. ನೀವು ಹೋಗಿ ಬನ್ನಿ ಒಳ್ಳೆಯದಾಗಲಿ. ನಾನು ಇಲ್ಲಿಯೇ ಇದ್ದು ನಮ್ಮ ಈ ದುಸ್ಥಿತಿಗೆ ಕಾರಣ ಹುಡುಕುತ್ತೇನೆ. ಹಾಂ ನಿನ್ನ ಮಗಳು ಲಕ್ಷ್ಮೀನ ಹುಷಾರಾಗಿ ನೋಡಿಕೊ.

ಹಿರಿಯ: ಅಂಗಾರೆ ಇದೇ ಕಡೇ ಮಾತ ಬುದ್ಧಿ, ನಮ್ಮ ಸಂಗತಿ ಬರಾಕಿಲ್ವ? ಹಂ ಆಯ್ತು ಒಡೆಯಾ ನಿಮ್ಮಿಚ್ಛೆ. ನಾವು ಬತ್ತೀವಿ, ಅಡ್ಡಬಿದ್ವಿ.

* * *

ಜಾಂಜೋಜಿ: (ಸ್ವಗತ) ಯಾಕೆ ದೇವರು ನಮ್ಮ ಮೇಲೆ ಈ ರೀತಿ ಬೆಂಕಿ ಮಳೆ ಸುರಿಸ್ತಾ ಇದ್ದಾನೆ? ಇಡೀ ಊರೇ ಬರಿದಾಗಿದೆ. ನನ್ನ ಒಡನಾಡಿ ಗೋವು

ಗಳು ಎಷ್ಟು ಸತ್ತುಹೋದುವು. ನೀರಿಲ್ಲದೆ, ಮೇವಿಲ್ಲದೆ ಇಷ್ಟು ವರುಷ ನಾನು ನಡೆಸಿಕೊಂಡು ಬಂದ ಕಾಯಕ ನಿಂತು ಹೋಗ್ತಾ ಇದೆಯಲ್ಲ? ನಾನು ಚಿಕ್ಕವನಿದ್ದಾಗ ಎಷ್ಟು ಮಳೆ ಬೀಳ್ತಾ ಇತ್ತು. ಇಷ್ಟು ಹೊತ್ತಿಗೆ ಎಲ್ಲಾ ಹಚ್ಚ ಹಸಿರಾಗಿ ಕಂಗೊಳಿಸುತ್ತಿತ್ತು! ನನ್ನ ತಂದೆ ಜೊತೆ ಗೋವುಗಳನ್ನು ಮೇಯಿಸೋಕೆ ನಾನು ಹೋಗುತ್ತಿದ್ದೆ! ಹೊಟ್ಟೆ ತುಂಬಾ ಮೇದ ಗೋವುಗಳನ್ನು ಸಂಜೆ ಮನೆಗೆ ಹೊಡಕೊಂಡು ಬರೋದು ಎಷ್ಟು ಸಂತಸದ ವಿಷಯ ಆಗಿತ್ತು! ಆದರೆ ವರುಷವರುಷವೂ ಮಳೆ ಕಡಿಮೆ ಆಗ್ತಾನೇ ಇದೆ. ಈ ವರ್ಷವಂತೂ ಮಳೆ ಬರಲೇ ಇಲ್ಲ. ಅಂದು ಹಸಿರು ನಂದನವಾಗಿದ್ದ ನನ್ನ ಊರು ಇಂದು ಮರುಭೂಮಿಯಾಗಿದೆ. ಈ ೬೦ ವರ್ಷಗಳಲ್ಲಿ ಎಷ್ಟೊಂದು ಬದಲಾವಣೆ? ಪ್ರಕೃತಿಯ ಈ ವಿಕೋಪಕ್ಕೆ ಏನು ಕಾರಣ? ನನ್ನ ಜನಗಳು ಏನು ತಪ್ಪು ಮಾಡಿದ್ದಾರೆ? ಯಾರ ತಪ್ಪಿಗಾಗಿ ಈ ಘೋರ ಶಿಕ್ಷೆ? ಆ ಹಿರಿಯ ಹೇಳಿದ ಹಾಗೆ ದೇವತೆಗಳ ಕೋಪ ಕಾರಣವೇ? ಆದರೆ ದೇವರು ಯಾಕೆ ಕೋಪಗೊಳ್ಳಬೇಕು? ನಮ್ಮೂರ ಜನ ಎಷ್ಟೊಂದು ಮುಗ್ಧರು. ಯಾರಿಗೂ ಅನ್ಯಾಯ ಬಗೆಯದ ಅಸೂಯೆ ಪಡದ ಜನ. ಹಾಗಾದರೆ ಈ ಅನಾವೃಷ್ಟಿಗೆ, ಜನರ ಬವಣೆಗೆ ಕಾರಣ? ಹುಂ. (ನಿಟ್ಟುಸಿರು) ಈ ೬೦ ವರ್ಷಗಳಲ್ಲಿ ಇನ್ನೊಂದು ಬದಲಾವಣೆಯನ್ನು ನಾನು ನೋಡುತ್ತಿದ್ದೇನೆ. ಆಗ ನನ್ನ ಎಳೆ ದಿನಗಳಲ್ಲಿ ಈ ನಾಡಿನ ತುಂಬೆಲ್ಲಾ ಎಷ್ಟೊಂದು ಕಾಡಿತ್ತು. ಹೌದು ಆ ಕಾಡು ಈ ನಾಡನ್ನು ಸದಾ ಹಸಿರಾಗಿ ಇಟ್ಟಿರುತ್ತಿತ್ತು. ಆದರೆ ಕ್ರಮೇಣ ಜನಸಂಖ್ಯೆ ಹೆಚ್ಚಾದ ಹಾಗೆ ನಮ್ಮ ರಾಜಧಾನಿ ಬೆಳೆದ ಹಾಗೆ ಮರಗಳನ್ನು ಕಡಿದು ಕಡಿದೂ ಈಗ ಕಾಡೇ ಇಲ್ಲವಾಗಿದೆ. ಇಂದು ನನ್ನ ಹಸುಗಳು ವಿಶ್ರಮಿಸಿಕೊಳ್ಳಲು ಒಂದು ತಾಣವೇ ಇಲ್ಲವಾಗಿದೆ. ಹತ್ತಿರದಲ್ಲೇ ಹರಿಯುತ್ತಿದ್ದ ಆ ಹೊಳೆಯಲ್ಲಿ ಬೇಸಿಗೆಯಲ್ಲಿ ನೀರನ್ನು ಕಂಡು ವರುಷಗಳೇ ಸಂದವು. ನಮ್ಮ ಈ ಬರಗಾಲಕ್ಕೆ ಕಾರಣ ಈಗ ಹೊಳೀತಾ ಇದೆ. ಹೌದು ಈ ಕಾಡನ್ನು ಕಡಿದಿದ್ದೇ ನನ್ನ ಜನ ಗೊತ್ತಿಲ್ಲದೇ ಮಾಡಿದ ಪಾಪ. ಮರ ಕಡಿಮೆಯಾದಂತೆ ನನ್ನ ನಾಡಿನಲ್ಲಿ ಮಳೆಯೂ ಕಡಿಮೆಯಾಗುತ್ತ ಬಂದಿದೆ. ಅಂದರೆ ಈ ಬರಗಾಲಕ್ಕೆ ಕಾರಣ ನಾವೇ! ನಮ್ಮ ಜನಗಳೇ! ಜೀವದ ಸುಭಿಕ್ಷ ಅರಣ್ಯಗಳ ಮೇಲೆ ಅವಲಂಬಿತ. ಜನ ಸುಖವಾಗಿರುವುದಕ್ಕೆ ಅರಣ್ಯಗಳನ್ನು ರಕ್ಷಿಸಬೇಕು, ಬೆಳೆಸಬೇಕು. ಹೌದು ಇದು ಸತ್ಯ. ಈ ಸತ್ಯವನ್ನು ನಾನು ನನ್ನ ಜನರಿಗೆ ತಿಳಿಸುತ್ತೇನೆ. ಮುಂದಾ

ದರೂ ನನ್ನ ಜನ ಸುಖ ಶಾಂತಿಯಿಂದ ಇರೋದನ್ನ ಕಲೀಲಿ. ಪ್ರಾಣವನ್ನು ಕೊಟ್ಟಾದರೂ ಮರ ಉಳಿಸಲಿ, ಮೃಗ ಪಕ್ಷಿಗಳನ್ನು ರಕ್ಷಿಸಲಿ.

* * *

ಕಥೆಗಾರ: ಸಂತ ಜಾಂಬೋಜಿ ತಾನು ಕಂಡುಕೊಂಡ ಸತ್ಯವನ್ನು ತನ್ನ ಜನರಿಗೆ ಉಪದೇಶಿಸಿದ. ಜಾಂಬೋಜಿಯ ಅನುಯಾಯಿಗಳು ಅವನ ಉಪದೇಶವನ್ನು ನಿಷ್ಠೆಯಿಂದ ಪಾಲಿಸಿದರು. ಈ ವೈಷ್ಣವೀ ಪಂಥದ ಜನ ತಮ್ಮ ಪ್ರದೇಶದಲ್ಲಿ ಮರಗಳಿಗೆ ಅಥವಾ ಪ್ರಾಣಿಗಳಿಗೆ ಜಿದರಿಕೆ ಉಂಟಾದಾಗ ಲೆಲ್ಲಾ ತಮ್ಮ ಪ್ರಾಣವನ್ನು ತೆತ್ತಾದರೂ ಅವುಗಳನ್ನು ರಕ್ಷಿಸುತ್ತಿದ್ದರು. ಸಮುದ್ದೇಶಕ್ಕಾಗಿ ಆತ್ಮಾರ್ಪಣೆ ಮಾಡಿಕೊಳ್ಳುವ ರಾಜಸ್ಥಾನದ ಸಕ ಸಂಪ್ರದಾಯವಾಗಿ ಈ ಚಳುವಳಿ ಬೆಳೆಯಿತು. ಜಾಂಬೋಜಿಯ ಸಂಪ್ರದಾಯದವರಿದ್ದ ಒಂದು ಗ್ರಾಮ ಬೇಜ್‌ದಾಲಿ. ಜಾಂಬೋಜಿ ಸತ್ತು ಸುಮಾರು ೨೦೦ ವರ್ಷಗಳ ಅನಂತರವೂ ಈ ಗ್ರಾಮದಲ್ಲಿ ಜಾಂಬೋಜಿಯ ಸಕ ಸಂಪ್ರದಾಯ ಉಳಿದು ಬಂದಿತ್ತು. ೧೭೩೦ರ ಸೆಪ್ಟೆಂಬರ್ ೯ನೇ ತಾರೀಖು ಅಂದರೆ ೨೫೩ ವರುಷಗಳ ಹಿಂದೆ, ಜೋಧ್‌ಪುರದ ಅರಮನೆಯ ನಿರ್ಮಾಣ ಆಗತಾ ಇತ್ತು. ಸುಣ್ಣದ ಗೂಡಿಗೆ ಸೌದೆ ಬೇಕಾಗಿತ್ತು. ಮರ ಕಡಿಯುವವರನ್ನು ಖೇಜ್‌ದಾಲಿಗೆ ಕಳುಹಿಸಲಾಯಿತು. ಆಗ ಆ ಗ್ರಾಮದ ಮಹಿಳೆ ಅಮೃತಾದೇವಿ....(ಮರಗಳನ್ನು ಕಡಿಯುವ ಶಬ್ದ)

ಅಮೃತಾದೇವಿ: ಯಾವನೋ ಅವನು ಮರ ಕಡಿಯೋನು? ನಿಲ್ಲಿಸೋ ನಿಲ್ಲಿಸೋ.

ಮರ ಕಡಿಯುವವ: ಏ....ಯಾರಪ್ಪ ನೀನು ಬೆಳ್ಳಿ ಬೆಳಿಗ್ಗೆ ಯೋನೋ ಅನಾಹುತ ಆದಾಗೆ ರಾವ್ ಬಡಕೊಂಡು ಕೂಗುತಾ ಇದ್ದೀಯಲ್ಲ ಏನಾಯಿತು?

ಅಮೃತಾದೇವಿ: ಮೊದಲು ಆ ಕೊಡಲಿ ಬಿಸಾಕು, ಇಲ್ಲಿ ಮರದ ಒಂದು ಟೊಂಗೇನೂ ಕತ್ತರಿಸಾಕೆ ಬಿಡಾಕಿಲ್ಲ.

ಮರ ಕಡಿಯುವವ: ಏನಮ್ಮೀ ನೀನೊಳ್ಳೆ ಕಾಡು ನಿಂದೇ ಅನ್ನೋಹಂಗೆ ಮಾತಾಡ್ತೀಯಲ್ಲ? ಕಾಡು ಮಾರಾಜ್ರದ್ದು. ಮಾರಾಜ್ರು ಅರಮನೆ ಕಟ್ಟಿಸ್ತಾ ಅವ್ರೆ. ಸುಣ್ಣದ ಗೂಡಿಗೆ ಭಾಳ ಸೌದೆ ಬೇಕು. ಈ ನಿಮ್ಮ ಖೇಜ್‌ದಾಲೀಲಿ ದೊಡ್ಡ ದೊಡ್ಡ ಮರಗಳಿವೆ ಅಂತ ಗೊತ್ತಾಯ್ತು. ಮಾರಾಜ್ರೆ ಹುಕುಂ ಮಾಡ್ಯವ್ರೆ. ಮರ ಕಡಿದು ಸೌದೆ ತೊಗೊಂಬನ್ನಿ ಅಂತ. ಗೊತ್ತಾಯ್ತಾ? ಸುಮ್‌ಸುಮ್ನೆ ಒದರಬೇಡ. ನಾವೇನೂ ನಿಮ್ಮ ಹಟ್ಟಿ

ಕೀಳಾಕೆ ಬಂದಿಲ್ಲ. ಇಲ್ಲಿರೋ ಮರ ಕಡಿಯಾಕೆ ಬಂದೀವಿ. ಮರ ಕಡಿದರೆ ಸಿಂಗಾಗೋದೇನು? ಸುಮ್‌ಗೆ ಹೊಂಟೋಗು ಇಲ್ಲಿಂದ.

ಅಮೃತಾದೇವಿ: ನಾನ್ ಹೊಂಟೋಗ್‌ಬೇಕಾ? ನೀನು ಇಲ್ಲಿಂದ ಮೊದ್ಲ ಹೊರಡು ಮರ ಕಡಿಯಾಕೆ ನಾ ಬಿಡಾಕಿಲ್ಲ.

ಮರ ಕಡಿಯುವವ: ಬಿಡಾಕಿಲ್ಲ?

ಅಮೃತಾದೇವಿ: ಬಿಡಾಕಿಲ್ಲ ಅಂದ್‌ಮೇಲ್ ಬಿಡಾಕಿಲ್ಲ.

ಮರ ಕಡಿಯುವವ: ಅದೇನ್ ಮಾಡ್ತೀಯಾ? ನಾವ್ ಕಡಿಯೋದೇ ಸೈ.

ಅಮೃತಾದೇವಿ: ಈಗ ಕಡಿ ನೋಡೋಣ? ಮರ ಕಡಿಯಾಕೆ ಮೊದ್ಲ ನನ್ನ ಕಡಿಬೇಕು. (ಮರ ತಬ್ಬಿಕೊಳ್ಳುವಳು)

ಮರ ಕಡಿಯುವವ: ಏನ್ ಅಮ್ಮ ಇದು? ಸುಮ್‌ಸುಮ್‌ಕೆ ನಮ್ ಕೆಲಸಕ್ಕೆ ಅಡ್ಡಾ ಬತ್ತಾ ಇದ್ಯ. ಅಲ್ಲಾ ಮಾರಾಜ್ರು ಕೊತ್ವಾಲರೇ ಕಳ್ದು ಈ ಕೆಲಸ ಮಾಡಿಸ್ತಾ ಅವ್ರೆ. ಅವ್ರು ನಾವು ಹಿಂಗೆ ಒಬ್ಬ ಹೆಂಗಸು ತಡಿತಾ ಅವ್ಳೆ ಅಂದರೆ ನಂಬಾಕಿಲ್ಲ. ನೀನು ಹಿಂಗೆ ಮರಕ್ಕೆ ಅಪ್ಕೊಂಡು ನಿಂತ್‌ಬಿಟ್ರೀಯ, ನನ್ನ ಮೊದಲು ಕಡೀರಿ ಅಂತ, ಹಿಂಗಾದ್ರೆ ನಾವೇನು ಮಾಡನಾ?

ಅಮೃತಾದೇವಿ: ಆ ಮಯ್ಯಂಗೆ ಹೋಗಿ ಹೇಳು. ಹಿಂಗೆ ಮರಾ ಕಡಿಯಾಕೆ ಬಿಡಾಕಿಲ್ಲ ಅಂತ. ಅವನೇ ಬೇಕಾದ್ರೆ ಬರ್‍ಲಿ ಇಲ್ಲಿಗೆ. ನಾನ್ ಮಾತ್ರ ಮರ ಕಡಿಯಾಕೆ ಬಿಡೋಲ್ಲ.

ಮರ ಕಡಿಯುವವ: ಹುಂ. ಹೋಗಲೇಳು, ನಂಗ್ಯಾಕೆ ಉಸಾಬರಿ. ಕೊತ್ವಾಲ್‌ರಿಗೇ ಹೇಳಿ ಬಿಡ್ತೀನಿ, ಏನಾರಾ ಮಾಡ್ಲಿ. ನಡಿಯೋ ತಮ್ಮಾ, ಕೊತ್ವಾಲ್‌ರಿಗೆ ಹೇಳೋಣ. ಇವೊಳ್ಳೆ ಗಾಚಾರ. ಅವರೂ ಅಲ್ಲಿ ಇನ್ನು ಮರಕಡಿದು ಮುಗೀನಿಲ್ಲ ಅಂತ ಗದರಿಕೊಳ್ತಾ ಅವ್ರೆ. ಇಲ್ಲಿ ಈ ಯಮ್ಮ ಮರ ಕಡಿಯಾಕೆ ಬಿಡ್ತಾ ಇಲ್ಲ ನಮಗೊಳ್ಳೇ ಪ್ರಾಣಸಂಕಟ ತಂದಿಟ್ಲಲ್ಲಾ.

* * *

ಮರ ಕಡಿಯುವವ: ಬುದ್ಧೀ ಬುದ್ಧೀ ನೀವ್ ಹೇಳಿದ್ರಲ್ಲಾ ಖೇಜ್‌ದಾಲಿಲಿ ಮರಗಳು ಸೊಂಪಾಗಿ ಬೆಳೆದಿವೇ ಅಂತ ಅಲ್ಲಿ ಮರ ಕಡಿಯಾಕೆ ಹೋಗಿದ್ವಿ. ಮರಕ್ಕೆ ಎರಡು ಕಚ್ಚು ಹಾಕಿದ್ದೆವೋ ಇಲ್ಲವೋ, ಅದೆಲ್ಲಿಂದ ಬಂದ್ಲೋ ರಾಕ್ಷಸಿ ಹಾಂಗೆ ಒಂದು ಹೆಂಗಸು ಬಂದು ತಡೆದುಬಿಟ್ಲು. ಮರ ಕಡಿಯಾಕೇ ಬಿಡಲಿಲ್ಲ,

ಕೊತ್ವಾಲ್: ಏನು? ಒಂದು ಹೆಂಗಸು ಕಾಡಿನಲ್ಲಿರೋ ಮರ ಕಡಿಯಾಕೆ

ಬಿಡಾತ್ತ ಇಲ್ವೆ? ನೀವು ಅದನ್ನು ಕೇಳಿಕೊಂಡು ಓಡಿಬಂದ್‌ಬಿಟ್ರಾ? ಏನು ಗಂಡಸರೋ ನೀವು? ಒಂದು ಹೆಣ್ಣು ಹೆಂಗ್ಸಿಗೆ ಹೆದರಿ ಓಡಿ ಬಂದಿದ್ದೀರಲ್ಲಾ? ನಿಮಗೂ ಅಷ್ಟು ಹೇಳವ್ರು ಯಾರಾದ್ರು ಬೇಕಾಗಿತ್ತು ಬಂದ್‌ಬಿಟ್ರು ಎಲ್ಲಾ ಪ್ಯೈಗಳ್ಳರು; ಮಹಾರಾಜರು ನನಗೆ ಕೆಲಸ ಚುರುಕಾಗಿ ನಡೀತಾ ಇಲ್ಲ ಅಂತ ಗದರಿಸ್ತಾರೆ. ನೀವುಗಳೋ ಅದು ಇದು ಅಂತ ಸಬೂಬು ಹೇಳಿ ಕೆಲಸ ನಿಧಾನ ಮಾಡ್ತಾ ಇದ್ದೀರಿ. ಆ ಹೆಂಗಸಿನ ಮಾತಿಗೆ ಸೊಪ್ಪು ಹಾಕದೆ ನಿಮ್ಮಷ್ಟಕ್ಕೆ ನೀವು ಮರ ಕಡಿದಿದ್ರೆ ಏನಾಗ್ತಿತ್ತು?

ಮರ ಕಡಿಯುವವ: ಬುದ್ಧೀ ನಾವು ಹೆದರಿಸಿದ್ವಿ, ಬಾಳ ಹೇಳ್ ನೋಡಿದ್ವಿ. ಆದ್ರೆ ಆಯಮ್ಮ ಒಳ್ಳೆ ಹುಚ್ಚಿ ಹಾಂಗೆ ಮರ ಅಪ್ಕೊಂಡು ನಿಂತ್‌ಬಿಟ್ಟವಳೆ. ಮರ ಕಡಿಯಾಕೆ ಮೊದ್ಲು ನನ್ ಕಡಿದು ಹಾಕಿ ಅಂತ; ನಾವು ಹ್ಯಾಂಗ್ ಕಡಿಯಾನ ಬುದ್ಧೀ? ಅದಕ್ಕೆ ಬುದ್ಧಿಯವರಿಗೆ ಹೇಳಿಬಿಡೋಣ ಅಂತ ಬಂದ್ವಿ.

ಕೊತ್ವಾಲ್: ಏನು? ಮರ ಕಡಿಯಾಕೆ ಬಿಡಾತ್ತ ಇಲ್ವ? ಏನು ಅರಣ್ಯ ಅವಳ ಸ್ವಂತ ಆಸ್ತಿ ಅಂತ ಮಾಡಿಕೊಂಡಿದ್ದಾಳೋ ಹ್ಯಾಗೆ? ನಡೀರಿ ಹೋಗೋಣ ಅದೇನು ಮಾಡ್ತಾಳೋ ನಾನೂ ನೋಡೇ ಬಿಡ್ತೀನಿ. ಆ ನಾಲ್ಕು ಜನ ಸಿಪಾಯಿಗಳನ್ನು ಕರೆಯೋ.

* * *

ಕೊತ್ವಾಲ್: ಏ ಯಮ್ಮಾ ಮಹಾರಾಜ್ರಿಗೆ ಮರ ಕಡಿಯೋಕೆ ನಿಂದೇನಡ್ಡಿ ಹೋಗಿಲ್ಲಿಂದ.

ಅಮೃತಾದೇವಿ: ಸ್ವಾಮಿರಾ, ಮರ ಕಡಿಸ್ಬೇಡಿ ನಿಮ್ಮನ್ನ ಕೈಮುಗಿದು ಬೇಡಿಕೋತೀನಿ ಸುಮ್ಮನೆ ಹೊಂಟ್ಹೋಗಿ ಬಿಡಿ. ನಾವು ಜಾಂಬೋಜಿಯ ಬಿಷ್ಣೋಯೀ ಪಂಥದವರು. ಈ ಖೇಜ್‌ದಾಲಿ ಗ್ರಾಮದ ಸುತ್ತಮುತ್ತ ಒಂದು ಹೆರೆಕೆ ಮುರಿಯಾಕೆ ನಾವ್ ಬಿಡಾಕಿಲ್ಲ. ಸಕಾ ಮಾಡತೀನಿ. ದಯಮಾಡಿ ಇಲ್ಲಿಂದ ಹೊಂಟ್ಹೋಗಿಬಿಡಿ ನಿಮ್ಮ ದಮ್ಮಯ್ಯ.

ಕೊತ್ವಾಲ್: ಏನು ಈ ಕಾಡೆಲ್ಲಾ ನಿನ್ನ ಅಜ್ಜನ ಆಸ್ತಿ ಅಂತ ತಿಳಿದುಕೊಂಡು ಬಿಟ್ಟಿದ್ದೀಯಾ? ಈ ಭೂಮಿ, ಈ ಕಾಡು ಎಲ್ಲಾ ಮಹಾರಾಜ್ರಿಗೆ ಸೇರಿದ್ದು. ಅವರ ಅರಮನೆಗೆ ಉಪಯೋಗಕ್ಕೆ ಮರ ಕಡಿಯೋದೆ. ತಡೆಯೋದಕ್ಕೆ ನೀನು ಯಾರು?

ಅಮೃತಾದೇವಿ: ಈ ಕಾಡು, ಈ ಭೂಮಿ ದೇವರದ್ದು, ಮಹಾರಾಜರದಲ್ಲ.

ಮರ ಕಡಿಯೋದು, ಪಶುಪಕ್ಷಿ ಕೊಲ್ಲೋದು ಮಹಾಪಾಪ. ಯಾವ ಮರ ಕಟುಕರನ್ನೂ ನಾವು ಇಲ್ಲಿ ಬಿಡಾಕಿಲ್ಲ. ನಮ್ಮ ಪ್ರಾಣ ಆದರೂ ಕೊಟ್ಟು ನಾವು ಮರ ಉಳಿಸಿಕೋತೀವಿ.

ಕೊತ್ವಾಲ್ : ಏನೇ? ಬಾಯಿ ಉದ್ದ ಮಾಡುತಾ ಇದ್ದೀಯಲ್ಲ? ಈ ಕಾಡು ಮಹಾರಾಜ್ರುದಲ್ಲ ಅಂತ ಹೇಳಿ ಅವ್ರಿಗೆ ಅವಿಧೇಯತೆ ತೋರಿಸ್ತಾ ಇದ್ದೀಯ? ಅವರ ಆಸ್ತೀನು ಅತಿಕ್ರಮಣ ಮಾಡುತ್ತಾ ಇದ್ದೀಯ? ಈಗ ನೀನು ಮಾಡಿದ ತಪ್ಪಿಗೆ ದೊಡ್ಡ ದಂಡ ತೆರಬೇಕಾಗುತ್ತದೆ.

ಅಮೃತಾದೇವಿ: ನಾನು ಯಾವ ತಪ್ಪೂ ಮಾಡಿಲ್ಲ. ಯಾವ ದಂಡಾನೂ ತೆರಾಕಿಲ್ಲ. ಮರಾ ಕಡಿಯಾಕೆ ಬಂದಿರೋ ನೀವು, ಕಳಿಸಿರೋ ನಿಮ್ಮ ಮಹಾರಾಜ್ರು ಪಾಪ ಮಾಡುತಾ ಇದ್ದೀರಿ. ಅದನ್ನ ಮಾಡಾಕೆ ನಾ ಬಿಡಾಕಿಲ್ಲ.

ಕೊತ್ವಾಲ್ : ಏಯ್ ಬಾಯಿಮುಚ್ಚು. ಮರ ಕಡಿದರೆ ಪಾಪ ಅಂತ ಅದು ಯಾವ ಪುರಾಣದಲ್ಲಿ ಹೇಳಿದೆ? ನೀನು ಮಹಾರಾಜ್ರಿಗೆ ಅವಮಾನ ಮಾಡುತ್ತಾ ಇದ್ದೀಯ. ಆಳುಗಳಿಗೆ ಲೇ ಮರ ಕಡಿರೋ ಅವಳೇನು ಮಾಡ್ತಾಳೆ.

ಅಮೃತಾದೇವಿ: ಲೇ ಮರಕಟುಕರಾ ನಾನ್ ಜೀವಂತ ಇರೋ ತನಕ ಬಿಡಾಕಿಲ್ಲ. ಅದು ಹ್ಯಾಗೆ ಕಡೀತೀರಿ?

ಮರ ಕಡಿಯುವವ: ಅವ್ವಾ ಸುಮ್ನೆ ಬಿಟ್ಟುಬಿಡು ಹುಂ....ಬಿಡು.

ಅಮೃತಾದೇವಿ: ನನ್ನ ಹೆಣ ಮಾಡಿ ನೀವು ಮರ ಕಡಿಯಿರಿ.

ಕೊತ್ವಾಲ್ : ಕಡಿರೋ, ಅದೇನ್ ನೋಡುತ್ತೀರಿ. ಅವಳು ಬಿಟ್ರೆ ಸರಿ ಇಲ್ಲ ದಿದ್ದರೆ ಅವಳನ್ನ ಕಡಿಯಿರಿ.

ಮರ ಕಡಿಯುವವ: ಸ್ವಾಮಿ ಮರ ತಬ್‌ಕೊಂಡು ನಿಂತ್‌ಬಿಟ್ಟವಳೆ ಹ್ಯಾಂಗೆ ಕಡಿಯೋದು?

ಕೊತ್ವಾಲ್ : ಲೇ ಹೇಡಿಗಳಿರಾ ಇದು ರಾಜಾಜ್ಞೆ. ಕಡೀತೀರೋ ಇಲ್ಲವೋ? ಇಲ್ಲದಿದ್ದರೆ ನೀವು ಸೆರೆಮನೆ ಸೇರಬೇಕಾಗುತ್ತೆ. ಆ ಮಹಾರಾಜರ ಆಜ್ಞೆ ಪಾಲಿಸದಿದ್ದಕ್ಕೆ, ಹುಂ.

ಮರ ಕಡಿಯುವವ: ಕೊತ್ವಾಲ್ ಸಾಹೇಬರೇ ಬೇರೆ ಯಾರಾದ್ರೂ....

ಕೊತ್ವಾಲ್ : ಥೂ ಹೇಡಿಗಳು. ಸಿಪಾಯಿಗಳೇ ಇವಳನ್ನ ಕಡಿದು ಹಾಕಿ.

ಅಮೃತಾದೇವಿ : ಹುಂ, ಕಡಿ.
(ಕಡಿಯುವರು)
ಅಮೃತಾದೇವಿ : ಆ.... (ಕೂಗು)

*　　*　　*

ಹಿರಿಯ : ಏನಾಯ್ತೋ ರಾಮುಲಾಲ್? ಏದುಸಿರು ಬಿಟ್ಕೊಂಡು ಬತ್ತಾ ಇದ್ದೀಯಲ್ಲಾ ?
ರಾಮುಲಾಲ್ : ಅಜ್ಜಾ ಅಜ್ಜಾ ಊರಾಚೆ ಖೇಜಾರಿ ಮರಾ ಕಡಿಯಾಕೆ ಮಾರಾಜ್ರು ಕೊತ್ವಾಲ್‌ರು ಮತ್ತು ಸಿಪಾಯಿಗಳು ಬಂದೌವ್ರೆ. ನಮ್ಮ ಅಮೃತವ್ವ ಅವರನ್ನು ತಡಿಯಾಕೆ ಹೋದಳು. ಅವಳನ್ನು ಕಡಿದುಹಾಕಿ ಮರ ಕಡಿತಾ ಅವ್ರೆ. ಅದ್ನ ತಿಳಿದ ಅವಳ ಮೂರು ಹೆಣ್ಣುಮಕ್ಕಳು ಹೋಗಿ ಮರಕ್ಕೆ ತೆಕ್ಕೆ ಬಿದ್ದರು. ಆ ಕಟುಕರು ಆ ಮಕ್ಕಳನ್ನೂ ಕಡಿದುಹಾಕಿ ಬಿಟ್ಟವರೆ. ಅಲ್ಲಿ ರಕ್ತದ ಕೋಡಿ ಹರಿತಾ ಇದೆ. ಮರ ಕಡಿತಾನೇ ಅವರೆ.
ಹಿರಿಯ : ಏನು? ಮರ ಕಡಿತಾ ಅವ್ರ? ಅಮೃತವ್ವನ್ನ ಅವಳ ಮಕ್ಕಳನ್ನ ಕಡಿದು ಹಾಕಿದರಾ? ಊರಾಗೆ ಎಲ್ಲರನ್ನೂ ಕೂಗು. ಎಲ್ಲರೂ ಬನ್ನಿ ಅಲ್ಲಿಗೆ.
ಗುಂಪು : ಮರ ಕಡಿತಾ ಅವ್ರಂತೆ ಬನ್ನಿರೋ ಬನ್ನಿರೋ. (ಮರ ಕಡಿಯುವ ಜಾಗಕ್ಕೆ ಧಾವಿಸುವರು)
ಹಿರಿಯ : ಯಾವನೋಲೇ ಅವನು ಮರ ಕಡಿಯೋನು? ಇಡೀ ಊರನ್ನೇ ಕೊಚ್ಚಿ ಮರ ಕಡೀರಿ.
ಗುಂಪು : ಜೈ ಜಾಂಬೋಜಿ, ಮರಕಟುಕರಿಗೆ ಧಿಕ್ಕಾರ. ಜೈ ಜಾಂಬೋಜಿ, ಮರಕಟುಕರಿಗೆ ಧಿಕ್ಕಾರ. ಜೈ ಜಾಂಬೋಜಿ, ಮರಕಟುಕರಿಗೆ ಧಿಕ್ಕಾರ.
ಕೊತ್ವಾಲ್ : ಸುಮ್ನೆ ಹೊಂಟೋಗಿ ಇಲ್ಲದಿದ್ರೆ ನಿಮ್ಮೆಲ್ಲರಿಗೂ ಆಯಮ್ಮರಿಗೆ ಅವಳ ಮಕ್ಕಳಿಗೆ ಒದಗಿದ ಗತಿನೇ ಒದಗುತ್ತೆ.
ಹಿರಿಯ : ನಾವು ಹೆದರಾಕಿಲ್ಲ. ಅವರ ಜೊತೆಗೇ ನಾವು ಪ್ರಾಣ ಬಿಡತ್ತೀವಿ ಹೊರತು ಮರಾ ಕಡಿಯಾಕೆ ಬಿಡಾಕಿಲ್ಲ. ನೀವು ಇಲ್ಲಿಂದ ಹೊಂಟೋಗಿ.
ಕೊತ್ವಾಲ್ : ಮಹಾರಾಜ್ರು ಕಾಡಿನಲ್ಲಿ ಮರ ಕಡಿಯಾಕೆ ನಿಮ್ಮ ಅಪ್ಪಣೆ ಬೇಕ? ಸಾಧ್ಯ ಇಲ್ಲ. ನಿಮ್ಮನ್ನ ಕಡಿದು ಮರ ಕಡಕೊಂಡು ಹೋಗ್ತೇವೆ. ಕಡೀರೋ ಅಲ್ಲೇನ್ ನೋಡ್ತೀರಿ.
ಹಿರಿಯ : ನಮ್ಮ ಊರಿನಾಗೆ ಒಂದು ಹುಳ ಜೀವಂತ ಇರೋ ತನಕ ಮರ ಕಡಿಯಾಕೆ ಬಿಡಾಕಿಲ್ಲ. ಹುಂ. ಬನ್ನಿರೋ ಎಲ್ಲರೂ ಮರ ತಬ್ಬಿಕೊಳ್ಳಿ. ಈ

ಕಟುಕರು ನಮ್ಮನ್ನ ಮೊದಲು ಕಡಿದು ಆಮೇಲೆ ಮರ ಕಡೀಲಿ.

ಗುಂಪು: ಜೈ ಜಾಂಬೋಜಿ—ಮರಕಟುಕರಿಗೆ ಧಿಕ್ಕಾರ.

ಕೊತ್ವಾಲ್: ಕಡೀರೋ ಅಲ್ಲೇನು ನೋಡ್ತ್ತೀರಿ.

ಗುಂಪು: (ಕೂಗು) ಜೈ ಜಾಂಬೋಜಿ. ಮರಕಟುಕರಿಗೆ ಧಿಕ್ಕಾರ. (ಸಿಪಾಯಿಗಳು ಜನರನ್ನು ಕೊಚ್ಚತೊಡಗುತ್ತಾರೆ)

* * *

ಮಂತ್ರಿ: ಮಹಾರಾಜರೇ ಆ ಕೊತ್ವಾಲನ ಮೂರ್ಖತನದಿಂದಾಗಿ ತಮಗೆ ಕೆಟ್ಟ ಹೆಸರು ಬಂದಿದೆ. ಜಾಂಬೋಜಿ ಸಂಪ್ರದಾಯದ ಜನ ಖೇಜ್‌ದಾಲಿಗೆ ಗುಂಪು ಗುಂಪಾಗಿ ಧಾವಿಸುತ್ತಿದ್ದಾರಂತೆ. ನಮ್ಮ ಕೊತ್ವಾಲನ ಸೈನಿಕರು ಮರ ಕಡಿಯೋಕೆ ಅಡ್ಡ ಬಂದವರನ್ನು ಕೊಲ್ತಾ ಇದ್ದಾರೆ. ಈ ಹತ್ಯಾಕಾಂಡ ಹೀಗೇ ಮುಂದುವರಿದರೆ ಇಡೀ ಪ್ರಜಾ ಸಮುದಾಯವೇ ದಂಗೆ ಏಳಬಹುದು. ತಾವು ತಕ್ಷಣ ಇದನ್ನು ನಿಲ್ಲಿಸಬೇಕು.

ಮಹಾರಾಜ: ಹುಂ. ನಡೆಯಿರಿ ಮಂತ್ರಿಗಳೇ ನಾನೇ ಖೇಜ್‌ದಾಲಿಗೆ ಬರುತ್ತೇನೆ. ಪ್ರಜೆಗಳ ಕ್ಷಮಾಪಣೆ ಕೇಳುತ್ತೇನೆ. ನನ್ನ ಪ್ರಯಾಣಕ್ಕೆ ಸಿದ್ಧಮಾಡಿ.

* * *

ಗುಂಪು: ಮಹಾರಾಜ್ರು ಬಂದ್ರು—ಮಹಾರಾಜ್ರು ಬಂದ್ರು.

ಮಹಾರಾಜ: ಪ್ರಜೆಗಳೇ ನನ್ನ ಅಧಿಕಾರಿಯ ಅವಿವೇಕಕ್ಕೆ ತಲೆತಗ್ಗಿಸುವಂತಾಗಿದೆ. ಈ ಮಹಾಪರಾಧಕ್ಕೆ ನಾನು ನಿಮ್ಮೆಲ್ಲರ ಕ್ಷಮಾಪಣೆ ಕೇಳ್ತೇನೆ. ಎಲ್ಲರೂ ಶಾಂತರಾಗಿ. ಇನ್ನು ಮೇಲೆ ಈ ಪ್ರದೇಶದಲ್ಲಿ ಮರ ಕಡಿಯೋದನ್ನ ನಿಷೇಧಿಸಲಾಗಿದೆ. ಪಶುಪಕ್ಷಿಗಳನ್ನು ಕೂಡ ಈ ಪ್ರದೇಶದಲ್ಲಿ ಕೊಲ್ಲುವಂತಿಲ್ಲ. ಖೇಜ್‌ದಾಲಿ ಗ್ರಾಮದ ಅಮೃತಾದೇವಿ ಹಾಗೂ ಅವಳೊಂದಿಗೆ ಆತ್ಮಾರ್ಪಣೆ ಮಾಡಿದ ೩೬೨ ಮಂದಿ ವೀರರು ಅಜರಾಮರವಾಗಿ ಉಳೀತಾರೆ. ಈ ಖೇಜ್‌ದಾಲಿಯ ವೀರರ ಸಾಹಸವನ್ನು ಮೆಚ್ಚಿ ತಾಮ್ರ ಪತ್ರ ನೀಡುತ್ತಿದ್ದೇನೆ. ಈ ನರಮೇಧಕ್ಕೆ, ವನಮೇಧಕ್ಕೆ ಇಂದೇ ಕೊನೆ.

ಗುಂಪು: ಜೈ ಜಾಂಬೋಜಿ—ಜೈ ಜಾಂಬೋಜಿ, ಜೈ ಜಾಂಬೋಜಿ.

ಎಚ್. ವಿ. ಕೃಷ್ಣಮೂರ್ತಿ

ಮಾನವನು ತಪ್ಪು ಮಾಡುವುದು ಸ್ವಾಭಾವಿಕ. ಆದರೆ ಅದಕ್ಕೆ ಅಂಟಿಕೊಳ್ಳುವುದು ಹೀನಚಾರಿತ್ರ್ಯದ ದ್ಯೋತಕ. —ಬೋಸ್ವೆ

ಅರಣ್ಯ ಹಾಗೂ ಪರಿಸರ

ಅರಣ್ಯಗಳು ಪರಿಸರದ ಮೇಲೆ ಅಗಾಧ ಪರಿಣಾಮ ಬೀರುತ್ತವೆ. ಇದರ ಅರಿವು ನಮಗೆ ಕಡಿಮೆ. ಅರಣ್ಯಗಳ ಪ್ರತ್ಯಕ್ಷ ಲಾಭ ಮಾತ್ರ ನಾವು ತಿಳಿದಿರುವುದಾಗಿದೆ. ಈ ಪ್ರತ್ಯಕ್ಷ ಲಾಭಕ್ಕಾಗಿಯೇ ಮರಗಿಡಗಳನ್ನು ಕಡಿದು ಉಪಯೋಗಿಸುತ್ತಿದ್ದೇವೆ, ಅರಣ್ಯಗಳ ನಿರಂತರ ನಾಶಕ್ಕೆ ಕಾರಣರಾಗುತ್ತಿದ್ದೇವೆ.

ಅರಣ್ಯ ಪ್ರತ್ಯಕ್ಷವಾಗಿ ನಮಗೆ ಬೇಕಾಗುವ ಕಟ್ಟಿಗೆ, ಹಸಿರು ಎಲೆ, ಹಣ್ಣು, ದಿಮ್ಮಿ, ಅರಗು, ಧೂಪ ಮೊದಲಾದುವನ್ನು ಒದಗಿಸುತ್ತದೆ. ಇವನ್ನು ಹಣದ ರೂಪದಲ್ಲಿ ಲೆಕ್ಕ ಹಾಕಿದರೆ ಒಂದು ಹೆಕ್ಟೇರಿಗೆ ಸರಾಸರಿ ಸಾಧಾರಣ ರೂ. ೬೨೨ ಆದಾಯ ಬರುವುದೆಂದು ಗೊತ್ತಾಗುವುದು. ಲಾಭವನ್ನು ಹಣದ ರೂಪದಲ್ಲಿ ಲೆಕ್ಕ ಹಾಕಿದರೆ ಈ ಸರಾಸರಿ ರೂ. ೬೨೧೬೨ಕ್ಕೆ ಏರುತ್ತದೆ. ಅಲ್ಲಿಗೆ ಅರಣ್ಯ ಪ್ರತ್ಯಕ್ಷ ಲಾಭಕ್ಕಿಂತ ನೂರು ಪಟ್ಟು ಪರೋಕ್ಷ ಲಾಭ ನೀಡುವುದೆಂದು ತಿಳಿಯಬರುತ್ತದೆ. ಆದ್ದರಿಂದ ಯಾವ ಕಾರಣಕ್ಕಾದರೂ ಅರಣ್ಯಗಳನ್ನು ನಾಶಪಡಿಸಬೇಕಾದ ಸಂದರ್ಭದಲ್ಲಿ ಈ ಹಲವಾರು ಲಾಭಗಳನ್ನು ಗಣನೆಗೆ ತಂದುಕೊಳ್ಳಬೇಕಾಗುತ್ತದೆ.

ಅರಣ್ಯ ಪ್ರದೇಶಗಳು ಮಳೆ ರೂಪದಲ್ಲಿ ಬಂದ ನೀರಿನಲ್ಲಿ ಸಾಧಾರಣ ಶೇ. ೫೦ ರಷ್ಟನ್ನು ಭೂಮಿಯಲ್ಲಿ ಇಂಗುವಂತೆ ಮಾಡುತ್ತವೆ. ಈ ರೀತಿ ಭೂಮಿಯೊಳಕ್ಕೆ ಇಂಗಿದ ನೀರು ಪಕ್ಕದ ನದಿಯಲ್ಲೋ, ನೀರಿನ ಚಿಲುಮೆಗಳಲ್ಲೋ, ಕೆರೆಕುಂಟೆಗಳಲ್ಲೋ ಸಾವಕಾಶವಾಗಿ ಹರಿದು ಬಂದು ವರ್ಷಂಪ್ರತಿ ಅಲ್ಲಿ ನೀರಿರುವಂತೆ ಮಾಡುತ್ತವೆ. ಆದ್ದರಿಂದ ಅರಣ್ಯ ಪ್ರದೇಶಗಳು, ನಮ್ಮ ಕೃತಕ ಜಲಾಶಯಗಳಿಗಿಂತ ಎಷ್ಟೋ ಪಾಲು ನೀರನ್ನು ಭೂಮಿಯ ಮೇಲೆ ಹರಿದು, ಮಣ್ಣಿನ ಸವಕಳಿಯನ್ನುಂಟುಮಾಡಿ, ಪಕ್ಕದ ನದಿಯಲ್ಲೋ, ಕೆರೆಯಲ್ಲೋ, ಜಲಾಶಯಗಳಲ್ಲೋ, ನೀರು ಮತ್ತು ಮಣ್ಣನ್ನು ತುಂಬಿ, ಅವುಗಳ ಸಾಮರ್ಥ್ಯವನ್ನು ಕಡಿಮೆಮಾಡುತ್ತವೆ. ಅರಣ್ಯ ಭೂಮಿ ನಮ್ಮ ರಾಷ್ಟ್ರದಲ್ಲಿ ಸಾಧಾರಣ ೨೫ ಮಿಲಿಯನ್ ಹೆಕ್ಟೇರ್ ಮೀಟರ್ ನೀರನ್ನು ತನ್ನ ಮಡಿಲಲ್ಲಿ ಶೇಖರಿಸಿಡುತ್ತದೆಂದು ಅಂದಾಜು ಮಾಡಲಾಗಿದೆ. ಇಷ್ಟು ನೀರನ್ನು ಕೃತಕ ಜಲಾಶಯ ಯೋಜನೆಯ ಪ್ರಕಾರ ಅಣೆಕಟ್ಟೆಯಲ್ಲಿ ಶೇಖರಿಸಿಡಲು ಸಾಧಾರಣ ರೂ. ೧೦ ಲಕ್ಷ ಮಿಲಿಯನ್ ಬೇಕಾಗಬಹುದು.

ಅರಣ್ಯಗಳು ಮಣ್ಣಿನ ಸವಕಳಿಯನ್ನು ಪೂರ್ಣವಾಗಿ ತಡೆಯುತ್ತವೆ. ಈ

ಭೂಮಿಯ ಮೇಲಿರುವ ೦.೫ ಮೀಟರ್ ಮಣ್ಣು ನಮಗೆ ಬಹೋಪಕಾರಿ. ಅದರ ನಾಶವಾದರೆ ನಮ್ಮ ನಾಶ ಖಚಿತ. ಆದ್ದರಿಂದ ಈ ಮಣ್ಣಿನ ಪದರವನ್ನು ಕಾಪಾಡಲು ಅರಣ್ಯಗಳ ಇರುವಿಕೆ ಬಹಳ ಅಗತ್ಯ.

ಇತ್ತೀಚೆಗಿನ ಸಂಶೋಧನೆ (೧೯೮೧) ಪ್ರಕಾರ ಒಂದು ದೊಡ್ಡ ಆಲದ ಮರ ಒಂದು ಗಂಟೆಗೆ ೧.೭೧೨ ಕೆ.ಜಿಯಷ್ಟು ಆಮ್ಲಜನಕವನ್ನು ಉತ್ಪಾದಿಸಿ ವಾಯುಮಂಡಲಕ್ಕೆ ಬಿಡುಗಡೆಮಾಡುವುದಲ್ಲದೆ ೨.೫೫೨ ಕೆ.ಜಿಯಷ್ಟು ಇಂಗಾಲಾಮ್ಲವನ್ನು ವಾತಾವರಣದಿಂದ ಉಪಯೋಗಿಸಿಕೊಳ್ಳುತ್ತದೆ. ಇದರಿಂದಲೇ ಅರಣ್ಯ ಪ್ರದೇಶಗಳಲ್ಲಿ ಅಂತೆಯೇ ಇತರ ಗಿಡಮರಗಳಿರುವ ಕಡೆ ಕೂಡ ಶುಭ್ರ ವಾತಾವರಣವಿದ್ದು ನಮ್ಮ ನಿತ್ಯ ಬಳಕೆಗೆ ಬೇಕಾದ ಆಮ್ಲಜನಕ ಯಥೇಷ್ಟವಾಗಿ ಒದಗುತ್ತದೆ. ಭೂಮಿಯಲ್ಲಿರುವ ಎಲ್ಲ ಗಿಡಮರಗಳು ಕೂಡಿ, ಒಂದು ವರ್ಷಕ್ಕೆ ಸಾಧಾರಣ ೪೪೦ ಬಿಲಿಯನ್ ಟನ್ನಿನಷ್ಟು ಆಮ್ಲಜನಕವನ್ನು ಉತ್ಪತ್ತಿಮಾಡುತ್ತವೆಂದು ಅಂದಾಜು ಮಾಡಲಾಗಿದೆ. ಅದೂ ಅಲ್ಲದೆ, ಈ ಸಸ್ಯಗಳು ೫೫೦ ಬಿಲಿಯನ್ ಟನ್ನಿನಷ್ಟು ಇಂಗಾಲಾಮ್ಲವನ್ನು ಪ್ರಕೃತಿಯಿಂದ ಹೀರಿಕೊಳ್ಳುತ್ತವೆ. ಸಸ್ಯಗಳು ಇಲ್ಲದಿದ್ದ ಪಕ್ಷದಲ್ಲಿ ಮಾನವ ಜೀವನ ಅಸಾಧ್ಯವಾಗಿರುತ್ತಿತ್ತು. ಕೈಗಾರಿಕೆಗಳು ಕೇಂದ್ರೀಕೃತವಾದ ಪ್ರದೇಶಗಳಲ್ಲಿ ಹಸಿರು ಗಿಡಮರಗಳ ವಾತಾವರಣವಿದ್ದರೆ ಅವು ಶೇಕಡಾ ೭೦ ರಷ್ಟು ಸಲ್ಫರ್‌ಡೈಆಕ್ಸೈಡ್ ಹಾಗೂ ಶೇಕಡಾ ೬೭ ರಷ್ಟು ನೈಟ್ರಿಕ್‌ಆಕ್ಸೈಡ್‌ನ್ನು ವಾತಾವರಣದಿಂದ ಕಡಿಮೆ ಮಾಡುತ್ತವೆಂದು ವರದಿಗಳು ಬಂದಿವೆ. ಹಸಿರು ವಾತಾವರಣ ೧೦ ರಿಂದ ೧೨ ಡೆಸಿಬೆಲ್‌ಗಳಷ್ಟು ಶಬ್ದಮಾಲಿನ್ಯವನ್ನು ಕಡಿಮೆ ಮಾಡುತ್ತವೆಂದೂ ತಿಳಿದಿದೆ.

ಹೀಗೆ ಅರಣ್ಯಗಳಿಂದ ಅನೇಕ ಪರೋಕ್ಷ ಲಾಭಗಳಿವೆ. ಮಾನವನ ಉಳಿವು ಅರಣ್ಯಗಳನ್ನು ಅವಲಂಬಿಸಿವೆ. ಆದರೆ ಈತನಕ ೪.೫ ಮಿಲಿಯನ್ ಹೆಕ್ಟೇರಷ್ಟು ಅರಣ್ಯ ಪ್ರದೇಶ ನಮ್ಮ ರಾಷ್ಟ್ರದಲ್ಲಿ ಇತರ ಕಾರ್ಯಗಳಿಗೆ ಬಿಡುಗಡೆಯಾಗಿದೆ. ಇನ್ನು ಮುಂದಾದರು ಅತಿ ಅನಿವಾರ್ಯವಾದಲ್ಲಿ ಮಾತ್ರ ಅರಣ್ಯಗಳನ್ನು ಬಿಡುಗಡೆ ಮಾಡಿದರೆ ರಾಷ್ಟ್ರ ಸಮೃದ್ಧಿಯಾಗಿ ಬೆಳೆದು ಬರಲು ಅನುಕೂಲವಾಗುವುದು. ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ, ದೇಶದ ಶೇಕಡಾ ೩೩ ಭಾಗ ಅರಣ್ಯಗಳಿಂದ ಆವರಿಸಿರಬೇಕೆಂದು ವಿಧಿಸಲಾಗಿದೆ. ಆದರೆ ರಾಷ್ಟ್ರದಲ್ಲಿ ಬರೇ ಶೇಕಡಾ ೨೩ ರಷ್ಟು ಮಾತ್ರ ಅರಣ್ಯವಿದೆ. ಕರ್ನಾಟಕ ರಾಜ್ಯದಲ್ಲಿ ಶೇಕಡಾ ೨೦ ರಷ್ಟು ಮಾತ್ರ ಅರಣ್ಯ ಪ್ರದೇಶವೆಂದು ಸಾರಿದೆ. ಆದರೆ ಈ


ಶೇಕಡಾ ೨೦ ರಷ್ಟು ಭಾಗದಲ್ಲಿ ಸಾಧಾರಣ ಶೇಕಡಾ ೫೦ ರಷ್ಟು ಭಾಗ ಬರೀ ಬೋಳು ಗುಡ್ಡಗಳಿಂದಲೂ ಕಲ್ಲುಬಂಡೆಗಳಿಂದಲೂ ಕೂಡಿ, ಯಾವುದೊಂದು ಗಿಡಮರಗಳನ್ನು ಬೆಳೆಯಲೂ ಸಾಧ್ಯವಾಗುತ್ತಿಲ್ಲ. ಜನಸಂಖ್ಯೆ ಹೆಚ್ಚಾಗಿರುವುದರಿಂದಲೂ ಅವರ ದನಕರುಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದಲೂ ಅರಣ್ಯ ಪ್ರದೇಶಗಳ ಮೇಲೆ ಅವುಗಳ ಒತ್ತಡ ಅಧಿಕವಾಗಿದೆ. ಹೀಗಾಗಿ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಗಿಡಮರಗಳು ಬೆಳೆದು ಬರಲು ಅಡ್ಡಿಯಾಗಿದೆ. ಆದ್ದರಿಂದ ಅರಣ್ಯ ಇಲಾಖೆಯವರು ಬೇಲಿ ಹಾಕಿಯೋ ಕಂದಕಗಳನ್ನು ತೋಡಿಯೋ ಬೇಕಾದ ಸಸಿಗಳನ್ನು ಕೃತಕವಾಗಿ ನೆಡುತೋಪುಗಳ ಮಾದರಿಯಾಗಿ ನೆಟ್ಟು ಬೆಳೆಸುತ್ತಿದ್ದಾರೆ. ಆದರೂ ಜನ ಅವುಗಳ ಪ್ರಯೋಜನ ಅರಿತುಕೊಳ್ಳದೆ, ಅವನ್ನೇ ನಿರ್ನಾಮಮಾಡಲು ಹಿಂಜರಿಯುತ್ತಿಲ್ಲ. ಜನರಿಗೆ ಯುಕ್ತ ರೀತಿಯಲ್ಲಿ ಬೋಧಿಸುವುದು ಒಂದು ಮುಖ್ಯ ಕಾರ್ಯಕ್ರಮವಾಗ ಬೇಕಾಗಿದೆ.

ಕರ್ನಾಟಕ ಅರಣ್ಯ ಇಲಾಖೆ ೧೯೮೨-೮೩ರ ಸಾಲಿನಲ್ಲಿ, ೩೫,೦೦೦ ಹೆಕ್ಟೇರು ಪ್ರದೇಶದಲ್ಲಿ ನೆಡುತೋಪುಗಳನ್ನು ಕೃಷಿಮಾಡಿದೆ. ಇದರಲ್ಲಿ ಸಾಧಾರಣ ೨೯,೦೦೦ ಹೆಕ್ಟೇರು, ಬರೀ ನಶಿಸುತ್ತಿರುವ ಅರಣ್ಯ ಪ್ರದೇಶ, ಬೋಳುಗುಡ್ಡ ಮತ್ತು ಇತರ ಸರ್ಕಾರಿ ಪಾಳುಭೂಮಿಗಳಾಗಿರುತ್ತವೆ. ರೈತರ ಹಾಗೂ ಇತರರ ಉಪಯೋಗಕ್ಕೆ ಬೇಕಾಗುವಂತಹ ಸಾಗುವಾನಿ, ಗೋಡಂಬಿ, ಸರ್ವೆ, ಆಲ, ಬೇವು, ಹುಣಸೆ, ಮಾವು, ಗೊಬ್ಬರದ ಗಿಡ, ಹೊಂಗೆ, ಬಳ್ಳಾರಿ ಜಾಲಿ, ಬಂಗಾಲಿ ಜಾಲಿ ಹಾಗೂ ನೀಲಗಿರಿ ಸಸಿಗಳನ್ನೇ ಯಥೇಷ್ಟವಾಗಿ ಬೆಳೆಸಿ ನೆಡುತೋಪುಗಳಿಗೆ ಮತ್ತು ಮುಫತ್ತಾಗಿ ಹಂಚಲು ಬಳಸುತ್ತಿದ್ದಾರೆ.

ಅರಣ್ಯ ಇಲಾಖೆಯವರು ಈಗ ಸಾಮಾಜಿಕ ವನ ನಿರ್ಮಾಣ ಕಾರ್ಯದಲ್ಲಿಯೂ ಹೆಚ್ಚು ಆಸಕ್ತಿ ತೋರಿಸಿದ್ದಾರೆ. ರೈತರಿಗೆ ಬೇಕಾಗುವ ಸಸಿಗಳನ್ನು ಮುಫತ್ತಾಗಿ ಹಂಚುತ್ತಿದ್ದಾರೆ. ಕಳೆದ ವರ್ಷ ಸಾಧಾರಣ ೧೦ ಕೋಟಿಗೂ ಮಿಕ್ಕ ಸಸಿಗಳನ್ನು ಮುಫತ್ತಾಗಿ ಹಂಚಿರುತ್ತಾರೆ. ಅಲ್ಲದೆ ಬಯಲು ಪ್ರದೇಶದಲ್ಲಿ ತಾವೇ ಜಮೀನನ್ನು ಪರಿಪಡಿಸಿ, ಸಸಿನೆಟ್ಟು ಕಾಪಾಡುತ್ತಾರೆ. ಜನರು ಹೊಲಗಳ ಬದುವಿನಲ್ಲೋ ಭೂಮಿಯ ಅಂಚಿನಲ್ಲೋ ಇತರ ಖಾಲಿಜಾಗಗಳಲ್ಲೋ ಸಸಿಗಳನ್ನು ನೆಡಲು ಸಹಾಯಮಾಡುತ್ತಿದ್ದಾರೆ. ಇದರಿಂದ ಗಿಡಮರಗಳ ಸಂಖ್ಯೆ ಅಧಿಕವಾಗುವುದರಲ್ಲಿ ಸಂಶಯವೇ ಇಲ್ಲ. ಅಲ್ಲದೆ ಗಿಡಮರಗಳ ಸಂಖ್ಯೆ ಅಧಿಕವಾದರೆ ನಮ್ಮ ವಾತಾವರಣದ ಮಲಿನತೆಯನ್ನು ಬಹುರೂಪ

ದಲ್ಲಿ ಅವು ಕಡಿಮೆಮಾಡಿ, ಈ ಭೂಮಿಯಲ್ಲಿ ಮಾನವ ಬದುಕಲು ಸಹಾಯ ಮಾಡಿದಂತಾಗುತ್ತದೆ. ಆದ್ದರಿಂದ ಜನ ಜಾಗೃತಿಗೊಂಡು, ತಮ್ಮ ತಮ್ಮ ಖಾಲಿ ಜಾಗೆಯಲ್ಲೋ ಮನೆಯ ಸುತ್ತಲೋ ಶಾಲೆವಠಾರಗಳಲ್ಲೋ ಸಸಿಗಳನ್ನು ನೆಟ್ಟು ಕಾಪಾಡಿ, ಪರಿಸರವನ್ನು ಕಾಪಾಡಲು ಭಾಗಿಗಳಾಗುವುದು ಅವರ ಆದ್ಯ ಕರ್ತವ್ಯ.

ಕೋ. ಅ. ಕುಶಾಲಪ್ಪ



ಪಾಪವು ಅತಿ ಭಯಂಕರವಾದುದು. ಪಾಪಕ್ಕಿಂತ ಭಯಂಕರವಾದುದು ಪಾಪ ವಿಚಾರ, ಇದಕ್ಕಿಂತಲೂ ಭಯಂಕರ ಪಾಪ ಪ್ರಚೋದನೆ.

—ಪರಮಹಂಸ

ಹೇಳುವಷ್ಟು ಮಾಡುವುದೂ ಸುಲಭವಾಗಿದ್ದರೆ, ಹೋಟೆಲುಗಳೆಲ್ಲ ದೇವಾಲಯಗಳಾಗುತ್ತಿದ್ದವು. ಗುಡಿಸಲುಗಳೆಲ್ಲ ಅರಮನೆಗಳಾಗುತ್ತಿದ್ದವು.

—ಷೇಕ್ಸ್‌ಪಿಯರ್

ಹೆದರಬೇಡ, ಹಿಂಜರಿಯಬೇಡ, ಆತ್ಮಸಮರ್ಪಣೆ ಮಾಡಬೇಡ, ಜಯ ಪರಾಜಯಗಳಲ್ಲಿ, ಜೀವನ ಮೃತ್ಯುಗಳಲ್ಲಿ, ಇಹಲೋಕ ಪರಲೋಕಗಳಲ್ಲಿ, ಸದಾ ಸ್ಪರ್ಧಿಸುತ್ತಿರು.

—ಶುಕ್ರಾಚಾರ್ಯ

ನಿಮ್ಮ ಮಕ್ಕಳು ಮನೆಯಲ್ಲಿ ಎಷ್ಟು ಸುರಕ್ಷಿತರು?

ರಜನಿ ಮೂರು ವರ್ಷದ ಪುಟ್ಟ ಹುಡುಗಿ. ತಂದೆತಾಯಿಯರ ಮುದ್ದಿನ ಮಗಳು. ಅವಳ ತಾಯಿ ಮಗುವಿನ ಸ್ನಾನಕ್ಕೆಂದು ಬಕೆಟ್ಟಿಗೆ ಬಿಸಿನೀರು ಹಾಕಿದಳು. ತಣ್ಣೀರು ಸೇರಿಸಿ ಹದಮಾಡಬೇಕೆನ್ನುವಷ್ಟರಲ್ಲಿ ಬಾಗಿಲಿನ ಕರೆ ಗಂಟೆ ಬಾರಿಸಿತು. ಒಂದು ನಿಮಿಷದಲ್ಲಿ ನೋಡಿ ಬರುತ್ತೇನೆಂದು ಹೊರಗೆ ಹೋದಳು. ಇತ್ತ ತುಂಟ ರಜನಿ ಬಕೆಟ್ಟನ್ನೇ ತನ್ನ ಮೇಲೆ ಬಗ್ಗಿಸಿಕೊಂಡಳು. ಕುದಿ ಕುದಿ ನೀರು ಮೈಮೇಲೆ ಬಿದ್ದ ಪರಿಣಾಮ—ಪುಟ್ಟ ರಜನಿಯ ಮೈಮೇಲೆಲ್ಲಾ ಗುಳ್ಳೆಗಳು. ರಜನಿಯನ್ನು ಆಸ್ಪತ್ರೆಗೆ ಸೇರಿಸಿದರು. ಆರೋಗ್ಯವಂತಳಾಗಿ ಹಿಂದೆ ಬರಬೇಕಾದರೆ ರಜನಿಗೆ ಒಂದು ತಿಂಗಳೇ ಹಿಡಿಯಿತು. ಈಗಲೂ ಅವಳು ಸಂಪೂರ್ಣ ಮೊದಲಿನಂತಾಗಿಲ್ಲ. ಸುಟ್ಟ ಕಲೆಗಳು ಮೈಮೇಲೆ ಅಲ್ಲಲ್ಲಿ ಉಳಿದಿವೆ.

ಎಂಟು ವರ್ಷದ ಮುದ್ದು ಅಜಯನಿಗೆ ಈಗಲೇ ತನ್ನ ತಂದೆಯಂತೆ ಪೋಲೀಸು ಆಫೀಸರನಾಗುವ ಹಂಬಲ. ತನ್ನ ತಂದೆಯ ಕೈಯಲ್ಲಿ ರಿವಾಲ್ವರನ್ನು ಆಗಾಗ್ಗೆ ನೋಡಿದ್ದ. ಒಂದು ದಿನ ಕೈಗೆಟಕುವಂತೆ ಮೇಜಿನ ಮೇಲೆ ರಿವಾಲ್ವರು ಕಂಡಿತು. ಅಜಯನಿಗೆ ಕುತೂಹಲ ತಡೆಯಲಾಗಲಿಲ್ಲ. ರಿವಾಲ್ವರನ್ನು ತೆಗೆದುಕೊಂಡು ಕುದುರೆಯನ್ನು ಒತ್ತಿದ. ಪರಿಣಾಮ—ಪುಟ್ಟ ತಂಗಿ ಈ ಲೋಕದಲ್ಲೇ ಇಲ್ಲವಾದಳು.

ಮೇಲೆ ಹೇಳಿದ ತೆರನಾದ ಅಪಘಾತಗಳು ಪ್ರತಿನಿತ್ಯ ನೂರಾರು ಸಂಖ್ಯೆಯಲ್ಲಿ ಸಂಭವಿಸುತ್ತಿರುತ್ತವೆ. ಇವಕ್ಕೆ ಕಾರಣ—ತಂದೆ ತಾಯಿಯರ ಅಜಾಗರೂಕತೆ. ಮಕ್ಕಳು ಚಿಕ್ಕವರಿರುವಾಗ, ತಂದೆ ತಾಯಿಯರು ಮತ್ತು ಮನೆಯ ಹಿರಿಯರು ಜಾಗ್ರತೆ ವಹಿಸಿದಷ್ಟೂ ಉತ್ತಮ.

ಮಕ್ಕಳಲ್ಲಿರುವ ಊನತೆಗೆ ಮತ್ತು ಮಕ್ಕಳ ಸಾವಿಗೆ ಈ ಅಪಘಾತಗಳೇ ಮುಖ್ಯ ಕಾರಣ. ತಂದೆ ತಾಯಿಯರು ಸ್ವಲ್ಪ ಜಾಗ್ರತೆ ವಹಿಸಿ ಕೆಲವು ಸರಳ ವಿಧಾನಗಳನ್ನು ಜೀವನದುದ್ದಕ್ಕೂ ಅಳವಡಿಸಿದಲ್ಲಿ ಈ ತೆರನಾದ ಅಪಘಾತಗಳಲ್ಲಿ ಹತ್ತರಲ್ಲಿ ಒಂಬತ್ತನ್ನು ತಪ್ಪಿಸಬಹುದು. ಮಿಂಚಿಹೋದ ಕಾರ್ಯಕ್ಕೆ ಚಿಂತಿಸುವುದಕ್ಕಿಂತ ಮುಂದಾಗಿಯೇ ಜಾಗರೂಕರಾಗಿರುವುದು ಒಳ್ಳೆಯದಲ್ಲವೇ!

೧೯೭೮ರ ಮಾರ್ಚ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಶ್ಯಾಮುಲಾ ಮಾಪಡೇನ್ಸ್ ಅವರ 'ಆರ್ ಯುವರ್ ಚಿಲ್ಡ್ರನ್ ಸೇಫ್ ಅಟ್ ಹೋಂ?' ಎಂಬ ಲೇಖನದ ಭಾವಾನುವಾದ.

ಚಿಕ್ಕ ಮಗುವಿನಿಂದ ಪ್ರಾರಂಭಿಸೋಣ. ಅದಕ್ಕಂತೂ ಸಂಪೂರ್ಣ ರಕ್ಷಣೆ ಅತ್ಯಗತ್ಯ. ಇಂಥ ಮಕ್ಕಳನ್ನು ಆದಷ್ಟು ನೆಲದ ಮೇಲೆಯೇ ಬಿಡಬೇಕು. ಅವು ವಸ್ತುಗಳ ಮೇಲೆ ಬಿದ್ದು ಗಾಯ ಮಾಡಿಕೊಳ್ಳದಂತೆ ಅಂಥ ಕಡೆಗಳಲ್ಲಿ ಬಿಡಬಾರದು. ಮಗು ಇನ್ನೂ ಚಿಕ್ಕದು, ಮುಂದೆ ತೆವಳಲಾರದು ಎಂದು ಮೇಜಿನ ಮೇಲೆ ಬಿಟ್ಟರೆ, ಕೆಳ ಬಿದ್ದು ಎಲುಬು ಮುರಿಯುವ ಅಪಾಯ ಇದೆ. ಸ್ನಾನಕ್ಕೆಂದು ಬೇಸಿನ್ನಿನಲ್ಲಿ ನೀರು ತುಂಬುವಷ್ಟರಲ್ಲಿ ದೂರವಾಣಿಯ ಸಪ್ಪಳ ಕೇಳಿ ತಾಯಿ ಹೊರಬರುತ್ತಾಳೆ. ಇತ್ತ ಪುಟ್ಟ ಮಗು ನೀರಿನಲ್ಲಿ ಆಟವಾಡುತ್ತಾ ಆಕಸ್ಮಾತ್ತಾಗಿ ಬೇಸಿನ್ನಿನ ಒಳಗೆ ಬಿದ್ದು ಉಸಿರುಕಟ್ಟಿ ಸತ್ತುಹೋದ ಘಟನೆಗಳು ಎಷ್ಟೋ ಇವೆ. ಮಗುವಿಗೆ ಮೊಲೆಹಾಲು ಕುಡಿಸುತ್ತ ಮಲಗಿದ ತಾಯಿಗೆ ದಿನವಿಡಿ ದುಡಿದ ಫಲವಾಗಿ ಅಲ್ಲೇ ನಿದ್ದೆ ಬಂದುಬಿಡುತ್ತದೆ. ಇತ್ತ, ಮಗುವಿಗೆ ಉಸಿರಾಡಲು ಆಸ್ಪದ ಸಿಕ್ಕದೆ ಸತ್ತುಹೋಗುವುದುಂಟು.

ಇನ್ನು ಚಿಕ್ಕಮಕ್ಕಳು ಕೈಗೆ ಸಿಕ್ಕಿದ್ದನ್ನೆಲ್ಲ ನೆಕ್ಕುವುದು, ಬಾಯಿಗೆ ತುಂಬಿಸಿಕೊಳ್ಳುವುದು ವಾಡಿಕೆ. ಹಾಗಾಗಿ ಮಕ್ಕಳಿಗೆ ಕೊಡುವ ಆಟಿಕೆಗಳಿಗೆ ಹಾಕಿದ ಪೇಂಟಿನಲ್ಲಿ ಸೀಸವಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು. ಚಿಕ್ಕ ಚಿಕ್ಕ ವಸ್ತುಗಳು ಅವರ ಕಣ್ಣಿಗೆ ಬೀಳದಂತೆ ಜಾಗ್ರತೆ ವಹಿಸಬೇಕು. ಇಂಥ ವಸ್ತುಗಳು ಮಕ್ಕಳ ಗಂಟಲಲ್ಲಿ ಸಿಕ್ಕಿಕೊಳ್ಳುವ ಸಾಧ್ಯತೆ ಇದೆ.


ಈಗಂತೂ ವಿದ್ಯುಚ್ಛಕ್ತಿಯ ಯುಗ. ಹಾಟ್‌ಪ್ಲೇಟು, ಇಸ್ತ್ರಿಪೆಟ್ಟಿಗೆ, ಇಮರ್ಶನ್ ರಾಡ್ ಮುಂತಾದ ಉಪಕರಣಗಳ ಪೈಕಿ ಒಂದಾದರೂ ಹೆಚ್ಚಿನ ಮನೆಗಳಲ್ಲಿ ಇಲ್ಲದಿಲ್ಲ. ವಿದ್ಯುಚ್ಛಕ್ತಿಯನ್ನು ಬಳಸುವಾಗ ಮುಂಜಾಗರೂಕತಾ ಕ್ರಮಗಳನ್ನು ಕೈಕೊಳ್ಳದಿದ್ದಲ್ಲಿ, ವಿದ್ಯುಚ್ಛಕ್ತಿಯಿಂದ ಎಷ್ಟು ಅನುಕೂಲತೆ ಇದೆಯೋ ಅಷ್ಟೇ ಅಪಘಾತವೂ ಸಂಭವಿಸುವ ಸಾಧ್ಯತೆಯಿದೆ. ಬಚ್ಚಲು ಮನೆಯಲ್ಲಿ ವಿದ್ಯುದುಪಕರಣಗಳ ಸ್ವಿಚ್ ಹಾಕಿದಾಗ ಯಾವಾಗಲೂ ಬಾಗಿಲು ಮುಚ್ಚಿರಬೇಕು. ಸ್ವಿಚ್ಚನ್ನು ತೆಗೆದೇ ಮಗುವನ್ನು ಒಳಗೆ ಕರೆದೊಯ್ಯಬೇಕು. ಇಸ್ತ್ರಿ ಮಾಡಿ ಆದ ಬಳಿಕ ಬಿಸಿ ಬಿಸಿ ಇಸ್ತ್ರಿ ಪೆಟ್ಟಿಗೆಯನ್ನು 'ಆರಲಿ' ಎಂದು ಅಲ್ಲೇ ಬಿಟ್ಟು ಹೋದರೆ ಅದರ ಪರಿಣಾಮ ಏನಾದೀತು ಎಂದು ನೀವೇ ಊಹಿಸಿ.

ಮಕ್ಕಳೋ, ಸದಾ ತಂದೆತಾಯಿಯರನ್ನೇ ಅನುಕರಿಸುವುದು ಅವುಗಳ ಕ್ರಮ. ಚಿಕ್ಕ ಮಗುವು ಹೆಚ್ಚಿನ ಸಮಯವನ್ನು ತನ್ನ ತಾಯಿಯೊಂದಿಗೆ ಅಡುಗೆ ಮನೆಯಲ್ಲೇ ಕಳೆಯುತ್ತದೆ. ಹಾಗಾಗಿ, ಗ್ಯಾಸ್ ಸ್ಟೌವ್‌ಗಳು,

ಒತ್ತಡದ ಸ್ಟೌವ್‌ಗಳು, ಇಲೆಕ್ಟ್ರಿಕ್ ಸ್ಟೌವ್‌ಗಳು ಮೊದಲಾದವನ್ನು ಉಪಯೋಗಿಸುವಾಗ ಜಾಗ್ರತೆ ವಹಿಸಿದಷ್ಟೂ ಸಾಲದು. ಇಲೆಕ್ಟ್ರಿಕ್ ಸ್ವಿಚ್‌ಗಳು, ಪಾತ್ರೆಗಳ ಹಿಡಿಗಳು ಮಗುವಿನ ಕೈಗೆಟಕುವಂತಿರಬಾರದು. ಚಿಮಿಣಿ ಎಣ್ಣೆ, ಟರ್ಪೆಂಟೈನು ಕೀಟ ನಾಶಕಗಳು ಮುಂತಾದವನ್ನು ತಂಪು ಪಾನೀಯಗಳಿದ್ದ ಕುಪ್ಪಿಗಳಲ್ಲಿ ಶೇಖರಿಸುವುದು—ನಮ್ಮ ಮಕ್ಕಳ ಸಾವನ್ನು ನಾವೇ ಕೈಬೀಸಿ ಕರೆದಂತೆ. ತಂಪು ಪಾನೀಯ ಕುಡಿದು ಅದರ ರುಚಿಗೆ ಮಾರುಹೋಗಿದ್ದ ಮಗು, ಆ ಕುಪ್ಪಿ ತನ್ನ ಕಣ್ಣಿಗೆ ಬಿದ್ದಾಗ ಸುಮ್ಮನೆ ಬಿಟ್ಟೀತೇ?

ಮಕ್ಕಳು ಚಿಕ್ಕವರಿರುವಾಗ, ತಂದೆ ತಾಯಿಯರು ಅವುಗಳ ಬಗ್ಗೆ ಜಾಗ್ರತೆ ವಹಿಸಿದಷ್ಟೂ ಉತ್ತಮ. ಹೀಗೆ ಮಾಡಿದಲ್ಲಿ, ಆ ಮಕ್ಕಳಲ್ಲಿ ತಮ್ಮನ್ನು ಮಾತ್ರ ಅಲ್ಲದೆ ಪರರನ್ನೂ ರಕ್ಷಿಸುವ ಅಭ್ಯಾಸ ಅವು ಬೆಳೆದಂತೆ ರೂಢಿಯಾಗುತ್ತದೆ. ಯಾವ ತಂದೆತಾಯಿಯರು ತಮ್ಮ ಮಕ್ಕಳ ಬಗ್ಗೆ ಉದಾಸೀನರಾಗಿರುತ್ತಾರೋ, ಅಂಥವರಿಗೆ ಮಕ್ಕಳನ್ನು ವೈದ್ಯರ ಬಳಿಗೆ, ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಕೊಂಡೊಯ್ಯುವ ಸಂದರ್ಭಗಳು ಹೆಚ್ಚಿಗೆ ಬರುತ್ತವೆ. ಹಾಗಾಗಿ ಎಲ್ಲ ತಂದೆತಾಯಿಯರೂ ಮನೆಯ ಹಿರಿಯರೂ 'ಚಿಕಿತ್ಸೆಗಿಂತ ನಿವಾರಣೆಯೇ ಶ್ರೇಯಸ್ಕರ' ಎನ್ನುವುದನ್ನು ನೆನಪಿನಲ್ಲಿಡತಕ್ಕದ್ದು,

ಉಷಾ. ಟಿ. ಮಡಿಯಾಳ್



ಹುಬ್ಬುಗಳ ಮೇಲೆ ಸುಕ್ಕು ಬರಲಿ, ಆದರೆ ಹೃದಯದ ಮೇಲೆ ಬೇಡ.
ಅತ್ತಕ್ಕೆ ಎಂದೂ ಮುಪ್ಪು ಬಾರದಿರಲಿ.

—ಜೇಮ್ಸ್ ಗಾರ್ಫೀಲ್ಡ್

ಪುಸ್ತಕ ವಿಮರ್ಶೆ

ಈಡು (ಹತ್ತು ಸಣ್ಣ ಕತೆಗಳ ಸಂಕಲನ): ಲೇಖಕರು: ಮಳಲಿ ವಸಂತ ಕುಮಾರ್; ಪ್ರಕಾಶಕರು: ಪಂಪ ಪ್ರಕಾಶನ, ೧೭, ವಿಶ್ವವಿದ್ಯಾನಿಲಯದ ಮನೆಗಳು, ಪಂಪಾಪತಿ ರಸ್ತೆ, ಸರಸ್ವತಿಪುರಂ, ಮೈಸೂರು. ಪುಟಗಳು: ಕ್ರೌನ್ ಅಷ್ಟದಳ x+೧೪೩; ಬೆಲೆ: ಸಾಮಾನ್ಯ ಪ್ರತಿ ರೂ. ೧೦-೫೦, ಕ್ಯಾಲಿಕೋ ಪ್ರತಿ ೨೦ ರೂ. ೧೯೮೩.

ಕವಿತೆ, ವಿಮರ್ಶೆ, ಜಾನಪದ, ಸಂಶೋಧನೆ ಮೊದಲಾದ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಮಾಡಿರುವ ಮಳಲಿ ವಸಂತಕುಮಾರರು ಸಣ್ಣ ಕಥಾಕ್ಷೇತ್ರದಲ್ಲೂ ಮಿಂಚಿದ್ದಾರೆ. ಈಡು: ಹತ್ತು ಕತೆಗಳ ಸಂಕಲನ. ಲೇಖಕರೇ ಹೇಳಿರುವಂತೆ ಇಲ್ಲಿನ ಹತ್ತು ಕತೆಗಳಲ್ಲಿ ಎಂಟು ಗ್ರಾಮಜೀವನಕ್ಕೆ ಸಂಬಂಧಿಸಿದುವು; ಉಳಿದೆರಡು ನಗರಕ್ಕೆ ಸಂಬಂಧಿಸಿದುವು. ಇಲ್ಲಿನ ಯಾವ ಕತೆಯೂ ಕಲ್ಪನೆಯಿಂದ ಊಹೆಯಿಂದ ರಚನೆಗೊಂಡಿಲ್ಲ; ಸಮಾಜದಲ್ಲಿ ಕಣ್ಣಾರೆ ಕಂಡ ಘಟನೆಗಳು ಸಂಗತಿಗಳು ಕತೆಗಳಾಗಿ ರೂಪುಗೊಂಡಿವೆ ಎಂದಿದ್ದಾರೆ. ಈ ಕತೆಗಳನ್ನು ಓದಿದಾಗ ಈ ಮಾತು ಬಹುಮಟ್ಟಿಗೂ ನಿಜ ಎನಿಸಿದರೂ ಕಣ್ಣಾರೆ ಕಂಡ ಘಟನೆಗಳು ಸಂಗತಿಗಳು ಎಂಬ ಮಾತಿನ ಜೊತೆಗೆ ಕಿವಿಯಾರೆ ಕೇಳಿದ ಸಂಗತಿಗಳು ಎಂದೂ ಸೇರಿಸಿದ್ದರೆ ಚೆನ್ನಾಗಿತ್ತೇನೋ! ಏಕೆಂದರೆ, ಇಲ್ಲಿ ಬರುವ ಹಲವು ಘಟನೆಗಳನ್ನು ಪ್ರತಿನಿತ್ಯ ಹಲವು ಕಡೆಯಿಂದ ಕೇಳುತ್ತಿರುತ್ತೇವೆ (ನೋಡುವುದಕ್ಕಿನ್ನ). ಹೀಗೆ ಹೇಳಿದ ಘಟನೆಗಳನ್ನು ಆಧರಿಸಿ ಕತೆ ಹೆಣೆಯುವಾಗ ಅವೆಷ್ಟು ವಸ್ತುನಿಷ್ಠವಾಗಿರುತ್ತವೆ ಎಂದು ಹೇಳುವುದು ಕಷ್ಟ. ಅಂತೂ ಇಂಥ ಘಟನೆಗಳನ್ನು ಆರಿಸಿಕೊಂಡಾಗ ಅವುಗಳನ್ನು ಕಥೆಯ ಚೌಕಟ್ಟಿನಲ್ಲಿ ಹಿಡಿದಿಡುವುದು ತುಂಬ ಕಷ್ಟದ ಕೆಲಸ. ಹಾಗೆ ಹಿಡಿದಿಡುವ ಕೆಲಸವನ್ನು ಮಳಲಿಯವರು ತುಂಬ ಜಾಣ್ಮೆಯಿಂದ ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಇಲ್ಲಿನ ಯಾವ ಕತೆಗಳಲ್ಲೂ ಹೊಸ ತಂತ್ರವನ್ನು ಕಾಣಬೇಕಿಲ್ಲ. ಘಟನೆಗಳೆ. ಸುರುಳಿ ಬಿಚ್ಚಿಕೊಂಡು ಕತೆ ಹೇಳಿಕೊಂಡು ಹೋಗುತ್ತವೆ. ಪ್ರಾದೇಶಿಕ ಹಿನ್ನೆಲೆಯಲ್ಲಿ ರಚನೆಗೊಂಡ ಈ ಕತೆಗಳ ಭಾಷೆ ಉತ್ಕೃಷ್ಟವಾಗಿದೆ. ಗ್ರಾಮಜೀವನ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಪಾತ್ರಗಳು ನಮ್ಮೆದುರು ನಿಂತಂತೆ ಭಾಸವಾಗುತ್ತದೆ. ಹಲವು ಕಡೆ ವರದಿಯೇ ಎನಿಸಿದರೂ ಓದುಗನನ್ನು ಬೇಸರಪಡಿಸದೆ ಕತೆ ಮುಂದೆ ಸಾಗುತ್ತದೆ. ಬರೆವಣಿಗೆ ಒಂದೇ ನಿಟ್ಟಿನಲ್ಲಿದೆ. ಮಳಲಿ

ಯುವರು ಎಲ್ಲಿಯೂ ತಡಕಾಡಿದಂತೆ ಕಾಣುವುದಿಲ್ಲ. ಪ್ರಾದೇಶಿಕ ಭಾಷೆಯ ಸೊಗಡು ಓದುಗನಿಗೆ ಅಡರುತ್ತದೆ.

ಶಾಸ್ತ್ರ, ಅಪಥ್ಯ, ಈಡು, ಸ್ಥಿತ್ಯಂತರ, ಸಿಕ್ಕು, ರಿಕ್ತ, ನಂಜು, ಹರ್ಷ, ಅನಿವಾರ್ಯ, ಅಭಿಸಾರ—ಇವೇ ಆ ಹತ್ತು ಕತೆಗಳು. ಶಾಸ್ತ್ರದಲ್ಲಿ ಹಳ್ಳಿಯ ಪಡ್ಡೆ ಹೆಣ್ಣುಮಗಳೊಬ್ಬಳು ನರಸತ್ತವನೊಬ್ಬನನ್ನು ಮದುವೆಯಾಗಿ ತನ್ನ ದಾಂಪತ್ಯ ಜೀವನ ಕೊನರದೆ ಒಂದು ಹೂವಿಗಾಗಿ ಹಂಬಲಿಸಿ, ಕೊನೆಗೆ ಹಾಲಕ್ಕಿ ಶಾಸ್ತ್ರದವನೊಬ್ಬನನ್ನು ಮರೆಹೊಕ್ಕಿ ಶಾಸ್ತ್ರ ಮಾಡಿಸಿಕೊಳ್ಳುವ ನೆಪದಲ್ಲಿ ಅವನೊಂದಿಗೆ ಸಂಪರ್ಕ ಬೆಳೆಸಿ ಮಗುವನ್ನು ಪಡೆಯುವುದೇ ಆಗಿದೆ. ಈ ಬಗೆಯ ಕಥೆಗಳು ಕನ್ನಡದಲ್ಲಿ ಹಲವು ಬಂದಿವೆ. ಭಾರತೀಸುತರ ಸಂತಾನ ಭಿಕ್ಷೆ ಎಂಬ ಕಾದಂಬರಿಯೂ ಇದೇ. ಇಂಥ ಕತೆಗಳ ಮಾರ್ಗ ಬೇರೆ ಬೇರೆ ಯಾದರೂ ಅದರ ಕೊನೆಯ ಫಲ ಮಾತ್ರ ಒಂದೇ. ಕತೆಯ ದೃಷ್ಟಿಯಿಂದ ಇದನ್ನು ನೋಡದೆಹೋದರೂ ಭಾಷೆಯ ದೃಷ್ಟಿಯಿಂದ ಇದೊಂದು ಉತ್ತಮ ಕತೆ. ಜೆಳ್ಳಿ ಮತ್ತು ನರಸಣ್ಣನ ದಾಂಪತ್ಯ ಜೀವನ ಎಂಥದ್ದು ಎಂಬುದಕ್ಕೆ ಈ ಮಾತುಗಳನ್ನು ನೋಡಿ :

"ಅದ್ಯಾಕೆ ಬ್ಯಾಡ್ವಾ ?"

"ಚಳೀ ಕೊರೀತಾ ಅಯ್ತೆ, ಈಗ್ಯಂತದು ತಗೋ ?...."

"ಚಳಿ ಆಗವತ್ಗೆ ಮತ್ತೆ ಅಂದದ್ದು—ಆತಯ್ತೋ ಇಲ್ವೋ ಹೇಳು ?...."

ಗಂಡಸು ಎನಿಸಿಕೊಂಡ ಅವನು ತನ್ನ ಮಾನ ಉಳಿಸಿಕೊಳ್ಳಬೇಕಿತ್ತು. ನರಸಣ್ಣ ದಟ್ಟಬಿಟ್ಟಿದ. ಶಕ್ತಿಮೀರಿ ದಣಿದ....ಪ್ರಯೋಜನ ಆಗಲಿಲ್ಲ.... ಮನಸ್ಸಿನಲ್ಲಿ ತಾನು ಹೆಣಕ್ಕಿಂತ ಕಡೆ ಅಂದುಕೊಂಡ. ಇದ್ದ ಬದ್ದ ಶಕ್ತಿಯನ್ನೆಲ್ಲ ತಂದುಕೊಂಡು ಸತ್ತ ಸ್ವರದಲ್ಲಿ ಎತ್ತರಿಸಿ ಅಂದ "ಮೈಗೆ ಹುಷಾರಿಲ್ಲ ಅಂದ್ರೂ ನೀ ಕೇಳಾಕಿಲ್ಲ ?...."

"ಇದೇನು ಹೊಸದಲ್ಲವಲ್ಲ ಮನೀಕೊ ಹುಸಾರಾಗಿದ್ದಾಗ ಕಡಿಯೋದು ಅಷ್ಟರಲ್ಲೇ ಅಯ್ತು."

ಇನ್ನು ಜೆಳ್ಳಿ ಕುಟುಮರ ರಾಮಯ್ಯನನ್ನು ಕೂಡಿದಾಗ :

ಬಹಳ ಕಾಲದಿಂದ ಸರಿಯಾದ ಉಕ್ಕೆಯಿಲ್ಲದೆ ಇದ್ದ ಹೊಲಕ್ಕೆ ಇಂದು ಭರ್ಜರಿ ಉಕ್ಕೆಯಾಯಿತು. ಅನೇಕ ವರ್ಷಗಳಿಂದ ಕಾದು ಬಿಟ್ಟಿ ಸೆಣೆದು ಆಗೊಮ್ಮೆ ಈಗೊಮ್ಮೆ ಹನಕಲು ಮಳೆಯಿಂದ ತೃಪ್ತಿ ಪಡೆಯುತ್ತಿದ್ದ ಭೂಮಿ ಇಂದಿನ ದೈತ್ಯ ಮಳೆಯಿಂದ ಪೂರ್ಣ ತೊಯ್ದು ತೃಪ್ತಿಗೊಂಡಿತ್ತು. ಅದು

ಯಾವುದೇ ಫಸಲು ನೀಡಲು ಹದಗೊಂಡಿತ್ತು. ಈ ಮಾತುಗಳಲ್ಲಿ ವಾಚ್ಯವನ್ನು ಸೂಚ್ಯವಾಗಿ ಹೇಳುವುದಕ್ಕಿನ್ನ ಕತೆಯ ಮೂರು ವ್ಯಕ್ತಿಗಳಾದ ಜೆಲ್ಲಿ-ನರಸಣ್ಣ - ಕುಟುಮ ರಾಮಯ್ಯ ಇವರ ವ್ಯಕ್ತಿತ್ವದ ಸಾದ್ಯಂತವೇ ಅಡಗಿದೆ.

ಅಪಥ್ಯದಲ್ಲಿ ಹಣಕ್ಕಾಗಿ ತಾಯಿಯನ್ನೇ ಕೊಲೆ ಮಾಡುವ ಮಗನ ಕತೆಯಿದೆ. ಇಲ್ಲಿಯೂ ಅಷ್ಟೆ ಭಾಷೆ ತನ್ನ ಪ್ರಭುತ್ವವನ್ನು ಪಡೆದಿದೆ. ಈಡುಕತೆ ನಗರಜೀವನಕ್ಕೆ ಸಂಬಂಧಿಸಿದ್ದು. ಶಾಲಾ-ಕಾಲೇಜುಗಳನ್ನು ನಡೆಸುವ ವ್ಯಕ್ತಿಗಳು ಅವರು ಸ್ವಾಮಿಗಳಾಗಲಿ, ಪ್ರಿನ್ಸಿಪಾಲರಾಗಲಿ ಎಷ್ಟು ಹೇಯ ಕೃತ್ಯಗಳನ್ನು ಮಾಡುತ್ತಾರೆಂಬ ವಿವರಣೆಯಿದೆ. ಇಲ್ಲಿಯ ಸ್ವಾಮಿಯ ಅಂತರ್ಮುಖ ತೆರೆದಾಗ ನಿಜಕ್ಕೂ ದಿಗ್ಭ್ರಮೆಯಾಗುತ್ತದೆ. ಪಾಪ! ಅಮಾಯಿಕ ಹೆಣ್ಣುಗಳು ಇವರ ಹಿಡಿತದಿಂದ ಪಾರಾಗುವುದು ಹೇಗೆ?

ಸ್ಥಿತ್ಯಂತರ ಒಂದು ಉತ್ತಮ ಕತೆ. ಮಾನಿನಿ ಪದವೀಧರೆಯೊಬ್ಬಳು ಸನ್ನಿವೇಶಗಳ ಒತ್ತಡದಿಂದ ಕುಲಟೆಯ ಜೀವನ ನಡೆಸುವಾಗ ಜಾಗೃತಿ ಸಂಘದವರು ಅವಳ ಕೈಯಿಂದ ಪುಸ್ತಕವೊಂದನ್ನು ಬಿಡುಗಡೆ ಮಾಡಿಸಲು ಅವಳನ್ನು ಕರೆತರುತ್ತಾರೆ. ವೇದಿಕೆಯ ಮೇಲೆ ಆ ಜಾಗೃತಿ ಸಂಘದ ಸಂಚಾಲಕ ಹಾಗೂ ಅಂದಿನ ಸಮಾರಂಭದ ಅಧ್ಯಕ್ಷನನ್ನು ಕಂಡಾಗ ಆ ಹೆಣ್ಣಿಗೆ ತನ್ನ ಇಂದಿನ ಸ್ಥಿತಿಗೆ ಕಾರಣನಾದವ ಅವನೇ ಎಂದು ತಿಳಿಯುತ್ತದೆ. ಆಗ ಅವಳಿಗಾಗುವ ಅಸಹ್ಯ ಭಾವನೆ ವರ್ಣನಾತೀತ. ಬಯಲಿನಲ್ಲಿ ನಿಂತ ನಾಯಿಯೊಂದು ತನ್ನ ಬಾಲವನ್ನು ಬಾಯಿಂದ ಕಚ್ಚಲು ಪ್ರಯತ್ನಿಸಿ ಬಾಲ ಸಿಗದೆ ಪೇಚಾಡುವ ಸಾಮ್ಯ ನೀಡಿ ಇಡೀ ಕತೆಯನ್ನೇ ಒಂದು ಕ್ಲೈಮಾಕ್ಸ್‌ಗೆ ಕೊಂಡೊಯ್ಯುತ್ತಾರೆ ಕತೆಗಾರರು.

ಸಿಕ್ಕು ಇದೊಂದು ಬೀಭತ್ಸ-ಭಯಾನಕ ಕತೆ ಎನಿಸಿದರೂ ವಾಸ್ತವವಾಗಿ ಇಂಥ ಘಟನೆಗಳು ನಡೆಯುತ್ತವಲ್ಲ ಎಂಬ ಅನುಕಂಪ ಮೂಡುತ್ತದೆ. ಚಂದ್ರಕ್ಕ ತನ್ನ ಗಂಡ ನರಸೇಗೌಡನ ವ್ಯಭಿಚಾರಿ ಚಾಳಿಯನ್ನು ಬಿಡಿಸಲು ಹೋಗಿ ತಾನೇ ಸಿಕ್ಕಿನಲ್ಲಿ ಸಿಗುತ್ತಾಳೆ. ಗಂಡನ ಸೂಳೆ ಎನಿಸಿದ ಕೆಂಪಿಯೊಂದಿಗೆ ಜಗಳ ಕಾದು ಬಂದ ಚಂದ್ರಕ್ಕ ಸಿಟ್ಟಿನ ಭರದಲ್ಲಿ ತಾನೇನು ಮಾಡುತ್ತಿದ್ದೀನೆ ಎಂಬ ಅರಿವಿಲ್ಲದೆ ಎಳೆಯ ಮಕ್ಕಳನ್ನು ತರಾಟೆಗೆ ತೆಗೆದುಕೊಳ್ಳುವಂತೆ ಮಾತನಾಡುತ್ತ ತನ್ನ ಗಂಡನ ವೃಷಣಗಳನ್ನು ಅದುಮಿ ಅದುಮಿ ಕೆಂಪಿಯ ಮನೆಗೆ ಹೋಗುತ್ತೀಯಾ, ಹೋಗುತ್ತೀಯಾ ಎಂದು ಕೇಳುತ್ತಲೇ ಅವನನ್ನು ಶವವಾಡಿ

ತಾನೂ ದಿಗ್ಭ್ರಾಂತಳಾಗುತ್ತಾಳೆ. ಈ ರೌದ್ರ ಸನ್ನಿವೇಶ ಓದುಗನನ್ನು ಕ್ಷಣ ಹೊತ್ತು ಗೊಂದಲಕ್ಕೀಡುಮಾಡುವುದಂತೂ ದಿಟ.

ಇನ್ನು ರಿಕ್ತದಲ್ಲಿ ಹಳ್ಳಿಯ ಪ್ರತಿಷ್ಠಿತ ವ್ಯಕ್ತಿಯೊಬ್ಬ ಸಾಮಾನ್ಯ ರೈತ ಕುಟುಂಬವೊಂದನ್ನ ಎಷ್ಟು ಸುಲಭವಾಗಿ ಎಷ್ಟು ನಿಧಾನವಾಗಿ ನಿರ್ನಾಮ ಮಾಡುತ್ತಾನೆಂಬ ಚಿತ್ರ ಮೂಡಿದೆ. ನಂಜು ಕತೆಯಲ್ಲಿ ಕಳ್ಳನಾದ ತನ್ನ ಸ್ನೇಹಿತನಿಗೆ ಉಪಕಾರ ಮಾಡಿ ಅನುಕಂಪೆ ತೋರಿಸಲು ಹೋಗಿ ಕೊನೆಗೆ ಆ ಕಳ್ಳ ಈತನನ್ನೇ ಇಕ್ಕಟ್ಟಿಗೆ ಸಿಕ್ಕಿಸುವ ಚಿತ್ರಣವಿದೆ. ಹರ್ಷ ಒಂದು ನಾಯಿಯ ಕಥೆ ಹೇಳುತ್ತದೆ. ಇಲ್ಲಿಯ ನಾಯಕ ವಿದ್ಯಾವಂತ ಯುವಕ. ಆತ ಅನಕ್ಷರಸ್ಥರಾದ ತನ್ನವರೊಂದಿಗೆ ಬೆರೆಯುವ ಸಾಮರಸ್ಯದ ಚಿತ್ರಣವಿದೆ.

ಅನಿವಾರ್ಯದಲ್ಲಿ ಸಾಲ ತೀರಿಸಲಾರದ ತಂದೆ-ತಾಯಿಗಳೇ ಸಾಲ ನೀಡಿದಾತನ ಜಾಲಕ್ಕೆ ಸಿಕ್ಕಿ ಕೊನೆಗೆ ತಮ್ಮ ಹೆಣ್ಣುಮಕ್ಕಳನ್ನೇ ತಲೆಹಿಡಿಯುವ ಚಿತ್ರಣವಿದೆ. ಇಲ್ಲಿ ಅನ್ಯಾಯಕ್ಕೆ ಸಿಲುಕಿದ ಹೆಣ್ಣುಮಗಳ ಮನೋವೇದನೆ ಕರುಳು ಹಿಂಡುತ್ತದೆ. ಅಭಿಸಾರ ಇದೊಂದು ಉತ್ತಮ ಕಥೆ. ಮನೆಯ ಕೆಲಸದಾಳು ಜುಂಜ (ಅಸ್ಪೃಶ್ಯ) ಮನೆಯ ಯಜಮಾನನ ಮಗಳು ಜಯಳ ಒಲವು ಸಂಪಾದಿಸಿ ಅವಳೊಂದಿಗೆ ಕೂಡಿದ ವಿಷಯ ಸಮಾಜದ ಕಣ್ಣಿನಲ್ಲಿ ಅಪರಾಧವಾಗಿ ಕಾಣುತ್ತದೆ. ರೊಚ್ಚಿಗೆದ್ದ ಜನ ಆ ಊರಿನ ಆ ಯಜಮಾನನಿಗೇ ಸಂಬಂಧಿಸಿದ ಕಲ್ಯಾಣಿಯಲ್ಲಿ ಜುಂಜನನ್ನು ಕೊಚ್ಚಿ ಹಾಕುತ್ತಾರೆ. ಇದರ ಪ್ರತಿಫಲವಾಗಿ ಇತ್ತ ಜಯಳನ್ನು ಜುಂಜನ ಜನ ಸಾಯಿಸುತ್ತಾರೆ. ಈ ದುರಂತ ಸಾವುಗಳಿಂದಾಗಿ ಆ ಕಲ್ಯಾಣಿಯೂ ಕತೆಯಾಗಿ ಉಳಿಯುತ್ತದೆ.

ಮಳಲಿಯವರ ಕತೆಗಳಲ್ಲಿ ಸಮಾಜದಲ್ಲಿ ಹಲವಾರು ಶೋಷಣೆಗಳಿಗೆ ಸಿಕ್ಕ ಹಲವಾರು ವ್ಯಕ್ತಿಗಳು ಕಾಣಿಸಿಕೊಳ್ಳುತ್ತಾರೆ. ಇಲ್ಲಿನ ಕಥೆಗಳಲ್ಲಿ ಹಣಕ್ಕಾಗಿ ತಾಯಿಯನ್ನು ಕೊಂದ ಮಗನಿದ್ದಾನೆ. ಅಮಾಯಿಕ ಹೆಣ್ಣುಗಳನ್ನು ತಮ್ಮ ಲಾಲಸೆಗೆ ಬಳಸಿಕೊಳ್ಳುವ ಧೂರ್ತರಿದ್ದಾರೆ. ಹಾಗೆ ಒಲಿಯದಿದ್ದರೆ ಅವರ ಬಾಳನ್ನೇ ಹಾಳು ಮಾಡುವ ಕ್ಷುದ್ರ ವ್ಯಕ್ತಿಗಳು ಇಲ್ಲಿ ಬರುತ್ತಾರೆ. ಸಾಲಕ್ಕೆ ಸಿಕ್ಕಿ ಬಿಡಿಸಿಕೊಳ್ಳಲಾಗದೆ ತಮ್ಮ ಮಕ್ಕಳನ್ನೇ ಸಾಲಗಾರನ ಕಾಮಪಿಪಾಸೆಗೆ ಒಳಪಡಿಸುತ್ತಾರೆ. ಉಪಕಾರ ಮಾಡಿದ ಸ್ನೇಹಿತನಿಗೆ ಅಪಕಾರ ಮಾಡುವ ದುಷ್ಟ ವ್ಯಕ್ತಿಗಳಿದ್ದಾರೆ. ಹೀಗೆ ಹಲವು ಬಗೆಯಲ್ಲಿ ಶೋಷಣೆಗೆ ಒಳಗಾದವರು ಇಲ್ಲಿ ಕಾಣಸಿಗುತ್ತಾರೆ. ಮಳಲಿಯವರು ತಮ್ಮ ಕತೆಗಳಲ್ಲಿ ಸಮಸ್ಯೆಗಳನ್ನು ಮುಂದಿಟ್ಟಿದ್ದಾರೆಯೇ ವಿನಾ ಪರಿಹಾರ ಸೂಚಿಸಲು ಹೋಗಿಲ್ಲ.

ಮುಳ್ಳಲಿಯವರು ಗಟ್ಟಿ ವಸ್ತುಗಳನ್ನು ಆರಿಸಿಕೊಂಡು ಕತೆಗಳನ್ನು ಹೆಣೆದಿದ್ದಾರೆ. ಇಲ್ಲಿನ ಹಲವು ಕತೆಗಳಿಗೆ ಕತೆಗಾರರ ಕಲ್ಪನೆಯ ಕುಸರಿ ಕೆಲಸ ನಡೆಸಿದ್ದರೆ ಚೆನ್ನಾಗಿತ್ತು ಎನಿಸುತ್ತದೆ. ಇಲ್ಲಿ ಬರುವ ಹೆಣ್ಣುಗಳ ಬಗ್ಗೆ ಅನುಕಂಪ ತೋರಿಸುವುದಕ್ಕಿನ್ನ ಅವರ ಅಸಹಾಯಕತೆಗೆ ಮರುಗಬೇಕಾಗಿದೆ. ಭಾಷೆ-ನಿರೂಪಣೆ-ಕಥಾವಸ್ತುಗಳ ದೃಷ್ಟಿಯಿಂದ ಓದಬೇಕಾದ ಕಥಾ ಸಂಕಲನ.

ಉಮಾ_ಶಂಕರ



ಎಷ್ಟೇ ದೊಡ್ಡವರಾದರೂ ಇನ್ನೂ ದೊಡ್ಡವರಿರುವರೆಂದು ಗರ್ವ ಪಡದಿರಬೇಕು.

—ಸುಭಾಷಿತ

ಸುಖ ಮತ್ತು ದುಃಖಗಳು ಮಾನವ ಜೀವನದ ಎರಡು ರೂಪಗಳು. ದುಃಖವು ನಮ್ಮನ್ನು ಕರ್ತವ್ಯದತ್ತ ಜಾಗ್ರತಗೊಳಿಸಿದರೆ ಸುಖವು ಹಾಸಿಗೆಯ ಮೇಲೆ ನಿದ್ರಿಸುತ್ತದೆ.

—ವಿನೋಬಾ

ನಾನು ಬದುಕಲೆಂದು ಉಣ್ಣುವೆನಾದರೆ ಇತರರು ಉಣ್ಣಲೆಂದೇ ಬದುಕುತ್ತಾರೆ.

—ಸಾಕ್ರೆಟಿಸ್

ಸುಖದುಃಖಗಳು ನಮಗೆ ದೊಡ್ಡವಾದಾಗ ಜಗತ್ತು ಸಣ್ಣದಾಗಿ ಕಾಣುತ್ತದೆ.

—ಖಲೀಲ ಗ್ರಿಬಾನ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6 | LICENSE NO. 21
LICENSED TO POST WITHOUT PREPAYME

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ
ಶರಣ ಚರಿತಾಮೃತ
ನನ್ನೂರು
ಗೋಕುಲ
ಭಗತ್‌ಸಿಂಗ್
ಸಿ. ವಿ. ರಾಮನ್
ವಚನ ಭಾಗವತ
ವಿದ್ಯಾಪೀಠಗಳು
ಶ್ರೀ ಶಂಕರಾಚಾರ್ಯ
ಆಂಡರ್‌ಸನ್ ಮತ್ತು ಇತರ ಕತೆಗಳು
ನಳಚರಿತ್ರೆಯ ಸಂಗ್ರಹ
ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyen Manager, Karnataka State Adult Education Council Pr and Published by Karnataka State Adult Education Cou Mysore city (India)